ಅಧ್ಯಕ್ಷರು.—ಸಭೆಯ ಮುಂದೆ ಇಡಲಾಗಿದೆ.*

1986ನೇ ಇಸವಿಯ ಕರ್ನಾಟಕ ಕಡಲ ಮೀನುಗಾರಿಕೆ (ವಿನಿಯಮನ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

೧-೩೦ ಪಿ. ಎಂ.

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಮತ್ತು ಬಂದರುಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಕಡಲ ಮೀನುಗಾರಿಕೆ (ವಿನಿಯಮನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, "೧೯೮೬ನೇ ಇಸವಿಯ ಕರ್ನಾಟಕ ಕಡಲ ಮೀನುಗಾರಿಕೆ (ವಿನಿಯಮನ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಮತ್ತು ಬಂದರುಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಕಡಲ ಮೀನುಗಾರಿಕೆ (ವಿನಿಯಮನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.*

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

ಅಧ್ಯಕ್ಷರು.—ಈಗ ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ.

ಶ್ರೀ ಎಸ್. ಬಂಗಾರಪ್ಪ (ವಿರೋಧ ಪಕ್ಷದ ನಾಯಕರು).—ಮಾನ್ಯ ಸಭಾಧ್ಯಕ್ಷರೆ, ಈಗ ಒಂದೂವರೆ ಗಂಟೆ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ತೆಗೆದುಕೊಂಡರೆ ಈಗ ಮುಕ್ತಾಯವಾಗುವುದಿಲ್ಲ. ಇವತ್ತು ಶುಕ್ರವಾರ, ನಾನ್ ಅಫಿಷಿಯಲ್ ಬಿಸಿನೆಸ್ ಡೇ. ಶುಕ್ರವಾರ ಖಾಸಗಿ ಸದಸ್ಯರ ನಿರ್ಣಯಗಳ ವಿಚಾರದಲ್ಲಿ ಚರ್ಚೆ ಮಾಡುವುದು ನಮಗಿರತಕ್ಕಂಥ ಹಕ್ಕು. ಅದಕ್ಕೆ ಹೋಗುವಷ್ಟರಲ್ಲಿ ಸದನ ಕಲಾಪದ ವೇಳೆ ಮುಗಿದಿರುತ್ತದೆ.

ಅಧ್ಯಕ್ಷರು.—ಒಬ್ಬರು ಮಾತನಾಡಲಿ.

ಶ್ರೀ ಎಸ್. ಬಂಗಾರಪ್ಪ.—ಒಬ್ಬರು ಮಾತನಾಡಿದರೂ ಕೌಂಟ್ ಆಗುತ್ತದೆ. ಸೋಮವಾರ ಮಂಗಳವಾರ ರಾಜ್ಯಪಾಲರ ಭಾಷಣದ ನಿರ್ಣಯದ ಚರ್ಚೆಯನ್ನು ಇಟ್ಟುಕೊಳ್ಳೋಣ. ಇವತ್ತು ಮಾನ್ಯ ತಿಪ್ಪೇಸ್ವಾಮಿಯವರ ಖಾಸಗಿ ನಿರ್ಣಯ ಇದೆ, ಮತ್ತೊಬ್ಬರದೂ ಇದೆ. ಆದುದರಿಂದ ಈಗ ಖಾಸಗಿ ನಿರ್ಣಯಗಳನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು.—ಇದಕ್ಕೆ ಮಂತ್ರಿಗಳು ಏನು ಹೇಳುತ್ತಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ.

ಅಧ್ಯಕ್ಷರು.—ರಾಜ್ಯಪಾಲರ ಭಾಷಣವನ್ನು ತೆಗೆದುಕೊಂಡು ಒಬ್ಬರು ಮಾತನಾಡಲಿ.

ಶ್ರೀ ಎಸ್. ಬಂಗಾರಪ್ಪ.—ಹಾಗೆ ಮಾಡಿದರೂ ಇವತ್ತೂ ಕೌಂಟ್ ಆಗುತ್ತದೆ. ಆದ್ದರಿಂದ ಇವತ್ತು ಗವರ್ನರ್ಸ್ ಅಡ್ರೆಸ್ ಮೇಲೆ ಚರ್ಚೆ ಬೇಡ, ಸೋಮವಾರ, ಮಂಗಳವಾರ ತೆಗೆದುಕೊಳ್ಳೋಣ. ಇವತ್ತು ಶುಕ್ರವಾರ, ಖಾಸಗಿ ನಿರ್ಣಯದ ದಿನ, ಖಾಸಗಿ ನಿರ್ಣಯಗಳನ್ನು ತೆಗೆದುಕೊಳ್ಳೋಣ.

ಶ್ರೀ ಆರ್. ಎಲ್. ಜಾಲಪ್ಪ.—ಇವತ್ತು ಅದು ಮುಗಿಯಬೇಕು ಎಂದು ಕಾಣುತ್ತದೆ.

---

* Annexure.

ಶ್ರೀ ಎಸ್. ಬಂಗಾರಪ್ಪ.—೪ ದಿವಸ ಇದೆ, ಎರಡು ದಿವಸ ಆಗಿದೆ, ಇನ್ನೂ ಎರಡು ದಿವಸ ಇದೆ.

ಶ್ರೀ ಆರ್. ಎಲ್. ಜಾಲಪ್ಪ.—ಎಷ್ಟಾದರೆ ಅಷ್ಟಾಗಲಿ. ಇವತ್ತಿನ ಕಾರ್ಯಕ್ರಮಗಳಲ್ಲಿ ಏನಿದೆ ಅದನ್ನು ಮುಗಿಸೋಣ.

ಶ್ರೀ ಎಸ್. ಬಂಗಾರಪ್ಪ.—ಇವತ್ತು ಖಾಸಗಿ ನಿರ್ಣಯ ಇದೆ.

ಶ್ರೀ ಆರ್. ಎಲ್. ಜಾಲಪ್ಪ.—ಬೇಕಾದರೆ ಖಾಸಗಿ ನಿರ್ಣಯವನ್ನು ಈ ಚರ್ಚೆ ಮುಗಿಸಿ ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಈಗಾಗಲೇ ಮೆಂಬರ್ಸ್ ಊರಿಗೆ ಹೋಗುತ್ತಾ ಇದ್ದಾರೆ, ಕೆಲವರು ೨೦೦ ಮೈಲಿಗಳ ದೂರ ಹೋಗಬೇಕಾಗುತ್ತದೆ.

ಅಧ್ಯಕ್ಷರು.—ಈಗ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರನ್ನು ಕರೆಸುತ್ತೇನೆ ಅಷ್ಟರವರೆಗೆ ಮಾತನಾಡಲಿ.

ಶ್ರೀ ಎಸ್. ಬಂಗಾರಪ್ಪ.—ಕೌಂಟ್ ಮಾಡುವುದಿಲ್ಲ ಅಂದರೆ ನನ್ನ ಅಭ್ಯಂತರವಿಲ್ಲ.

ಅಧ್ಯಕ್ಷರು.—ಇನ್ನೂ ಈ ಕಡೆಯವರು ಮಾತನಾಡುವವರು ಇದ್ದಾರೆ, ಆ ಕಡೆ ಮಾತನಾಡುವ ವರೂ ಇದ್ದಾರೆ. ಈಗ ಮಾನ್ಯ ಲಕ್ಷ್ಮೀಸಾಗರ್‌ರವರನ್ನು ಕರೆಸೋಣ.

ಶ್ರೀ ಆರ್. ಎಲ್. ಜಾಲಪ್ಪ.—ಯಾರು ನಿರ್ಣಯವನ್ನು ಕಳಿಸಿದ್ದಾರೆ ಅವರೇ ಸದನದಲ್ಲಿ ಇಲ್ಲ. ಆದುದರಿಂದ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಬಹುದು.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಖರ್ಗೆಯವರು ಸೋಮವಾರ ಮಾತನಾಡಲಿ, ಈಗ ಮಾನ್ಯ ಬೀಳಗಿಯವರು ಮಾತನಾಡಲಿ.

ಶ್ರೀ ಎಸ್. ಬಂಗಾರಪ್ಪ.—ಮಾತನಾಡಿಸಿ. ಆದರೆ ಇದಕ್ಕೆ ಈ ದಿವಸ ಕೌಂಟ್ ಮಾಡಬಾರದು.

ಅಧ್ಯಕ್ಷರು.—ಅವರು ೧೦ ನಿಮಿಷ ಮಾತನಾಡಿದರೆ ಅದನ್ನು ಇಡೀ ದಿವಸ ಎಂದು ಹೇಳುವುದ ಕ್ಕಾಗುವುದಿಲ್ಲ. ಈ ಚರ್ಚೆ ಇಷ್ಟು ತಾಸು ಎಂದು ಇರುತ್ತದೆ. ಆದುದರಿಂದ ಈಗ ಬೀಳಗಿಯವರು ಮಾತನಾಡಲಿ.

† ಶ್ರೀ ಕೆ. ಎಸ್. ಬೀಳಗಿ (ಬ್ಯಾಡಗಿ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯವನ್ನು ಅನುಮೋದಿಸುತ್ತಾ ನಾನು ಕೆಲವು ವಿಚಾರಗಳನ್ನು ಇಲ್ಲಿ ಹೇಳಲು ಇಚ್ಛೆಪಡುತ್ತಾ ಇದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ಸರ್ಕಾರವು ಇಲ್ಲಿಯವರೆಗೆ ಬರಗಾಲದ ಬಗ್ಗೆ ತೆಗೆದುಕೊಂಡ ಕಾರ್ಯಕ್ರಮಗಳನ್ನೂ, ಮುಂದೆ ಬರಬಹುದಾದ ಕಠಿಣ ಪರಿಸ್ಥಿತಿಯನ್ನು ಗಮನ ದಲ್ಲಿಟ್ಟುಕೊಂಡು ಮಾಡಬೇಕಾದಂಥ ಕಾರ್ಯಕ್ರಮಗಳನ್ನು ಸ್ಪಷ್ಟವಾಗಿ ನಮೂದಿಸಲಾಗಿದೆ. ಸನ್ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಬರಗಾಲದ ಕಾಮಗಾರಿಗಳ ಬಗ್ಗೆ ಭಯಂಕರವಾದಂಥ ಬರಗಾಲದ ಬಗ್ಗೆ ಸರ್ಕಾರ ಸರಿಯಾದ ಕ್ರಮಗಳನ್ನು ತೆಗೆದುಕೊಂಡಿಲ್ಲ ಎನ್ನತಕ್ಕಂಥ ಕೆಲವು ಮಾತುಗಳನ್ನು ಆಡಿದ್ದಾರೆ. ಆದರೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ ತಪ್ಪಾಗ ಲಿಕ್ಕಿಲ್ಲ. ಹಿಂದೆ ಯಾವ ಸರ್ಕಾರವೂ ಮಾಡದಂಥ ವ್ಯವಸ್ಥೆಯನ್ನು ಮಾಡಿದೆ. ಈ ಬರಗಾಲದ ಕಾಮ ಗಾರಿಗಳು ಸರಿಯಾಗಿ ನಡೆಯಬೇಕು, ಅದರಲ್ಲಿ ಯಾವರೀತಿಯ ಅವ್ಯವಹಾರ, ಅಚಾತುರ್ಯ ನಡೆಯು ಬಾರದು ಎನ್ನುವ ಉದ್ದೇಶವನ್ನಿಟ್ಟುಕೊಂಡು ನಮ್ಮ ಸರ್ಕಾರ ಒಂದು ಉತ್ತಮವಾದ ವ್ಯವಸ್ಥೆಯನ್ನು ಮಾಡಿದೆ. ಆ ವ್ಯವಸ್ಥೆ ಏನೆಂದರೆ ಪ್ರತಿಯೊಂದು ತಾಲ್ಲೂಕಿನಲ್ಲಿ ಬರಗಾಲದ ಸಮಿತಿಗಳನ್ನು ಮಾಡಿ, ಆ ಸಮಿತಿಗಳಲ್ಲಿ ಆ ಕ್ಷೇತ್ರದ ಶಾಸಕರು ಸದಸ್ಯರಾಗಿದ್ದಾರೆ. ಆ ಶಾಸಕರು ಹಾಗೂ ಆ ಕಮಿಟಿಯವರು ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ನಿರ್ಣಯ ಮಾಡುತ್ತಾರೆ ಆ ಪ್ರಕಾರ ಕೆಲಸ ಕಾರ್ಯಗಳು ನಡೆಯುತ್ತಿವೆ. ಅಷ್ಟೇ ಅಲ್ಲ ಇವತ್ತು ನಮಗೆ ಒದಗಿಸಿದ ಪಟ್ಟಿಯಲ್ಲಿ ನೋಡಿದರೆ ಸನ್ಮಾನ್ಯ ಶಾಸಕರಿಗೆ ಹಿಂದೆಂದೂ ಇರಲಾರದಂಥ ಅಧಿಕಾರವನ್ನು ಸರ್ಕಾರದವರು ಕೊಟ್ಟಿದ್ದಾರೆ. ಆ ಸದಸ್ಯರು ಕೆಲಸ ಸರಿಯಾಗಿ ನಡೆಯುತ್ತಿದೆಯೋ ಹೇಗೆ ಸರ್ಕಾರಿ ಅಧಿಕಾರಿಗಳು ತೋರಿಸಿದಂಥ ಕೂಲಿ ...

ಜನ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆಯೋ ಹೇಗೆ, ಹಾಗೂ ಆ ಕೆಲಸಗಳಲ್ಲಿ ಏನಾದರೂ ಅವ್ಯವಹಾರ ನಡೆದಿದೆಯೋ ಹೇಗೆ, ಎಂದು ಹೋಗಿ ಸರ್ಪ್ರೈಸ್ ಚೆಕ್ ಮಾಡುವಂಥ ಅಧಿಕಾರವನ್ನು ಕೊಟ್ಟಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಬರಗಾಲದ ಬವಣೆಯಿಂದ ಜನಗಳನ್ನು, ದನಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಸರ್ಕಾರವು ಮಾಡಿದ ಹಣ ದುರುಪಯೋಗವಾಗಿದೆ ಎನ್ನುವಂಥ ಒಂದು ಸರ್ವೇಸಾಮಾನ್ಯವಾದಂಥ ಮಾತನ್ನು ಹೇಳಿದರೆ ಅದು ಒಪ್ಪಲಾರದಂಥ ಮಾತಾಗುತ್ತದೆ. ಏಕೆಂದರೆ; ಸನ್ಮಾನ್ಯ ಸದಸ್ಯರು ತಮ್ಮ ಅಧಿಕಾರವನ್ನು ಚಲಾಯಿಸಿ ಉತ್ತಮವಾದ ಕೆಲಸಗಳನ್ನು ತೆಗೆದುಕೊಳ್ಳುವಂಥ ಜವಾಬ್ದಾರಿಯನ್ನು ಸದಸ್ಯರ ಮೇಲೆ ವಹಿಸಿರುತ್ತಾರೆ. ಅಂದಮೇಲೆ ಇವತ್ತು ಏನಾದರೂ ಕೆಲಸಕಾರ್ಯಗಳಲ್ಲಿ ಹೆಚ್ಚುಕಡಿಮೆಯಾದರೆ ಸದಸ್ಯರಿಂದಲೇ ಕರ್ತವ್ಯಚುತಿ ಆಗಿದೆಯೆನೋ ಎನ್ನುವ ಭಾವನೆ ಬರಲಿಕ್ಕೆ ಸಾಧ್ಯವಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಮುಖ್ಯವಾಗಿ ನಾನು ನಮ್ಮ ಧಾರವಾಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಧಾರವಾಡ ಜಿಲ್ಲೆಯಲ್ಲಿ ದುರ್ದೈವದಿಂದ ಇಡೀ ೧೭ ತಾಲ್ಲೂಕುಗಳು ಬರಗಾಲದ ಬವಣೆಗೆ ತುತ್ತಾಗಿವೆ. ಅದರಲ್ಲಿ ೩ ತಾಲ್ಲೂಕುಗಳು ಮಲೆನಾಡು ಪ್ರದೇಶದಲ್ಲಿ ಬರುತ್ತಿದ್ದರೂ ಸಹ ದುರ್ದೈವದಿಂದ ಸರಿಯಾಗಿ ಮಳೆಯಾಗದ್ದರಿಂದ, ಆದ ಮಳೆ ಸಮಯಕ್ಕೆ ಸರಿಯಾಗಿ ಬೀಳದ್ದರಿಂದ ಮುಂಗಾರು ಮತ್ತು ಹಿಂಗಾರು ಉಪಯುಕ್ತವಾಗಿ ಬರದೆ ಬಹಳ ಗಂಭೀರ ಪರಿಸ್ಥಿತಿ ಉಂಟಾಗಿದೆ, ಇವತ್ತಿನದಿವಸ ಸರ್ಕಾರದವರು ಜನಗಳಗೆ ಕೂಲಿ ಕೊಡುವ ಕೆಲಸ ಒದಗಿಸುವ ವ್ಯವಸ್ಥೆ ಮಾಡಿದ್ದರಿಂದ ಇವತ್ತು ಪ್ರತಿಯೊಂದು ಹಳ್ಳಿಯಲ್ಲಿ ಒಂದಲ್ಲ ಒಂದು ಕೆಲಸವನ್ನು ಶುರು ಮಾಡಿದ್ದಾರೆ ಎಂದು ಈ ಸಂದರ್ಭದಲ್ಲಿ ನಾನು ಬಹಳ ಅಭಿಮಾನದಿಂದ ಹೇಳಿಕೊಳ್ಳುತ್ತಾ ಇದ್ದೇನೆ.

(ಮಾನ್ಯ ಸದಸ್ಯರಾದ ಎಂ. ಎಸ್. ನಾರಾಯಣರಾವ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಸದನದ ಎಲ್ಲಾ ಸದಸ್ಯರು, ಅವರು ಕಾಂಗ್ರೆಸ್ – ಐ ಇರಬಹುದು, ಬೇರೆ ಪಕ್ಷದವರು ಇರಬಹುದು ಅವರುಗಳು ಈ ಕೆಲಸ ಕಾರ್ಯಗಳಲ್ಲಿ ಬಹಳ ಆಸಕ್ತಿ ವಹಿಸಿ ಜನಗಳಿಗೆ ಕೂಲಿ ಒದಗಿಸುವಂಥ, ಉದ್ಯೋಗ ಒದಗಿಸುವಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ಬಹಳ ಅಚ್ಚುಕಟ್ಟಾಗಿ ಕೆಲಸಕಾರ್ಯಗಳು ನಡೆದಿವೆ. ಅಷ್ಟೇಅಲ್ಲ, ಸರ್ಕಾರದವರು ಅಧಿಕಾರಿಗಳಿಗೆ ಕಾಲಕಾಲಕ್ಕೆ ಈ ಕೆಲಸಕಾರ್ಯಗಳಿಗೆ ಹಣವನ್ನು ಒದಗಿಸುತ್ತಾ ಇರುವುದರಿಂದ ಇಂದು ಯಾವುದೇ ಹಳ್ಳಿಯಲ್ಲಿ ಇವತ್ತು ನಮಗೆ ಕೆಲಸ ಇಲ್ಲ ಎನ್ನುವಂಥ ಹಾಗೂ ನಮ್ಮ ಭಾಗದಲ್ಲಿ, ನನ್ನ ಈ ರೀತಿ ನಾನು ಹೇಳುವಂಥ ಪರಿಸ್ಥಿತಿ ಉದ್ಭವವಾಗಿಲ್ಲ.ನನ್ನ ಕ್ಷೇತ್ರದಲ್ಲಿರತಕ್ಕಂತಹ ಯಾವುದೇ ಜನರುನಮಗೆ ಕೆಲಸಬೇಕೆಂದುಬಂದಾಗ ಸರ್ಕಾರ ಕೆಲಸ ಒದಗಿಸಿಕೊಟ್ಟಿದೆಯೆಂದು ಹೇಳಿಕೊಳ್ಳುವುದಕ್ಕೆ ಅಭಿಮಾನವೆನ್ನಿಸುತ್ತದೆ. ಅಷ್ಟೇ ಅಲ್ಲ ಹಿಂದೆ ನಾನು ಬಿಜಾಪುರ ಜಿಲ್ಲೆಯಲ್ಲಿದ್ದಂತಹವನು, ನನಗೆ ಅಲ್ಲಿನ ಬರಗಾಲ ಪರಿಸ್ಥಿತಿಯು ತಿಳಿದಿದೆ. ನಾನು ಅನೇಕ ಬರಗಾಲವನ್ನು ಕಂಡಿದ್ದೇನೆ. ಆದರೆ ಹಿಂದೆ ಯಾವ ಸರ್ಕಾರವೂ ಮಾಡಿದಂತಹ ವ್ಯವಸ್ಥೆಯನ್ನು, ಜನಗಳಿಗೆ ಉದ್ಯೋಗ ಒದಗಿಸುವ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಮಾಡಿದೆ, ನನ್ನ ಅನೇಕ ಗೆಳೆಯರು ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡು ೨೫–೩೦ ಲಕ್ಷ ಕೂಲಿಕಾರರಿದ್ದಾರೆ. ಅವರಲ್ಲಿ ೭–೮ ಲಕ್ಷ ಜನರಿಗೆ ಮಾತ್ರ ಕೆಲಸವನ್ನು ಕೊಟ್ಟಿದೆಯೆಂದು ಹೇಳಿದರು. ನಮ್ಮ ಭಾಗದಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿದಾಗ ಎಷ್ಟು ಜನ ಕೂಲಿ ಬೇಡಿ ಬಂದಿದ್ದಾರೆ ಅಷ್ಟು ಜನಕ್ಕೂ ಕೂಲಿ ಒದಗಿಸಿದ್ದೇವೆ. ಹೆಚ್ಚು ಕೂಲಿ ಕೆಲಸ ಬೇಡಿ ಬರತಕ್ಕಂಥದ್ದು ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ. ಇಲ್ಲಿಯವರೆಗೆ ಅಲ್ಪ ಸ್ವಲ್ಪ ಮಳೆ ಬಿದ್ದು ಬಿತ್ತಿದಂತಹ ಜಮೀನಿನಲ್ಲಿ ಕೂಲಿಗಾರರು ಕೆಲಸ ಮಾಡುತ್ತಿದ್ದಾರೆ. ಎನ್.ಆರ್.ಇ.ಪಿ, ಆರ್.ಎಲ್.ಇ.ಜಿ.ಪಿ. ಡಿ.ಪಿ.ಎ.ಪಿ. ಸಾಯಿಲ್ ಕನ್ಸರ್ವೇಷನ್ ಕಾರ್ಯಕ್ರಮಗಳು ಚೆನ್ನಾಗಿ ನಡೆಯುತ್ತಿವೆ. ಪ್ರತಿಯೊಂದು ಊರಿನಲ್ಲೂ ಬರಗಾಲ ಕಾಮಗಾರಿಗಳಲ್ಲದೆ ಬೇರೆ ಕಾಮಗಾರಿಗಳು ಕೂಡ ನಡೆಯುತ್ತಿದೆ. ಜನಗಳಿಗೆ ಉದ್ಯೋಗದ ತೊಂದರೆಯಿಲ್ಲ. ಜನಗಳಿಗೆ ಉದ್ಯೋಗ ಕೊಡುವುದಷ್ಟೇ ಅಲ್ಲ, ಅವರಿಗೆ ಆಹಾರ ಧಾನ್ಯದ ವ್ಯವಸ್ಥೆ ಕೂಡ ಮಾಡಲಾಗಿದೆ. ಜನರಿಗೆ ಅದು ಮುಟ್ಟುತ್ತಿದೆ. ಇಂತಹ ಭಯಂಕರ ಬರಗಾಲ ಪರಿಸ್ಥಿತಿಯಲ್ಲೂ ಕೂಡ ಸರ್ಕಾರ ಜನಗಳಿಗೆ ಎಲ್ಲ ವ್ಯವಸ್ಥೆ ಮಾಡಿದೆ. ಇಂತಹ ಆರ್ಥಿಕ ಅಡಚಣೆಯಲ್ಲಿ ಜನಗಳಿಗೆ ಅನುಕೂಲ ಮಾಡಿರುವುದಕ್ಕಾಗಿ ನಾವು ನಮ್ಮ ಸರ್ಕಾರವನ್ನು ಅಭಿನಂದಿಸಿದರೆ ತಪ್ಪಾಗಲಾರದೆಂದು ನನ್ನ ಭಾವನೆ, ಇದಕ್ಕಿಂತ

ಮುಖ್ಯವಾಗಿ ಅನೇಕ ಸದಸ್ಯರು ಹೇಳಿದಂತೆ ಜನಗಳ ಪ್ರಶ್ನೆಗಿಂತಲೂ ದನಗಳ ಪ್ರಶ್ನೆ ಹೆಚ್ಚು ಇದೆ. ಬರಗಾಲ ಬರುತ್ತದೆಂದು ಮೊದಲೇ ತಿಳಿದುಕೊಂಡು ಮೇವಿನ ವಿಚಾರದಲ್ಲಿ ಸ್ವಲ್ಪ ಎಚ್ಚರಿಕೆಯನ್ನು ವಹಿಸಬೇಕಾಗಿತ್ತೆಂದು ನನ್ನ ಅನೇಕ ಗೆಳೆಯರು ಹೇಳಿದರು. ಅದು ಒಪ್ಪುವಂತಹ ಮಾತು. ಬರಗಾಲ ಬರುವ ಲಕ್ಷಣವನ್ನು ಕಂಡಾಗ ಮೇವನ್ನು ದೊರಕಿಸುವುದಕ್ಕಾಗಿ ಹಾಕಿಕೊಂಡಿರುವ ಕಾರ್ಯಕ್ರಮವನ್ನು ತಮ್ಮ ವರದಿಯಲ್ಲಿ ಕಾಣಿಸಿದ್ದಾರೆ. ಮೇವನ್ನು ಖರೀದಿ ಮಾಡಲು ಬೇರೆ ಬೇರೆ ರಾಜ್ಯಗಳಿಗೆ ಹೋಗಿದ್ದಾರೆ, ಅಲ್ಲೂ ಮೇವು ಸಿಗುತ್ತಿಲ್ಲ, ನಮ್ಮ ರಾಜ್ಯದಲ್ಲೂ ಮೇವು ಸಿಗುತ್ತಿಲ್ಲ ಎಲ್ಲಿ ನೀರಾವರಿ ಪ್ರದೇಶ ವಿದೆಯೋ, ಎಲ್ಲಿ ಬಾವಿಗಳನ್ನು ತೋಡಿಸಿಕೊಂಡು ನೀರಾವರಿಗೆ ಅನುಕೂಲ ಮಾಡಿಕೊಂಡಿದ್ದಾರೋ ಅಲ್ಲಿ ನಮ್ಮ ರೈತರು ಹೆಚ್ಚು ಉತ್ಪನ್ನ ಬರುವ ಕಮರ್ಷಿಯಲ್ ಬೆಳೆಗಳಾದ ಮೆಣಸಿನಕಾಯಿ, ಹತ್ತಿ, ಸೇಂಗಾ ವನ್ನು ಬೆಳೆಯುತ್ತಿದ್ದಾರೆ. ಹುಲ್ಲನ್ನು ಬೆಳೆದಿದ್ದರೆ, ಇವತ್ತು ಅದಕ್ಕೆ ಬೇರೆ ಬೇರೆ ರಾಜ್ಯಗಳಿಗೆ ಹೋಗಬೇಕಾಗಿರಲಿಲ್ಲ. ಸರ್ಕಾರದವರು ವಿಶ್ವ ಪ್ರಯತ್ನ ಮಾಡಿ ಹುಲ್ಲನ್ನು ಬೆಳೆಯಲು ಪ್ರಾರಂಭ ಮಾಡಿದ್ದಾರೆ. ಹರಿಯಾಣದಿಂದ ಬಳ್ಳಾರಿಗೆ ನಿನ್ನೆ ಮೇವು ಬಂದಿದೆ. ಮೇವಿನ ಬಗ್ಗೆ ಅನೇಕ ವ್ಯವಸ್ಥೆ ಯನ್ನು ಪ್ರಾರಂಭ ಮಾಡುತ್ತಿದ್ದೇವೆ.

ಶ್ರೀ ಎಂ. ರಾಮಪ್ಪ.—ಬಳ್ಳಾರಿಗೆ ಮೇವು ಬಂದಿಲ್ಲ.

ಶ್ರೀ ಕೆ, ಎಸ್. ಬೀಳಗಿ.—ಮೇವಿನ ತರಹ ಉಪಯೋಗ ಮಾಡುವಂತಹ ಯಾವುದೋ ಒಂದು ಬಂದಿದೆ ಅದು ಧಾನ್ಯದ ಹೊಟ್ಟು ಆಗುತ್ತದೆ, ಅದನ್ನು ಡಿಫರೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡಬೇಡಿ, ನಮ್ಮ ಸರ್ಕಾರ ಇವತ್ತಿನ ದಿವಸ ಗೋಶಾಲೆಗಳನ್ನು ತೆಗೆದಿದ್ದಾರೆ. ಅದನ್ನು ನಮ್ಮ ಅನೇಕ ಗೆಳೆಯರು ಹೋಗಿ ನೋಡಬಹುದು. ನಾವು ತಿಳಿದುಕೊಂಡಷ್ಟು ದನಗಳು ಗೋಶಾಲೆಗೆ ಬರುತ್ತಿಲ್ಲ ಏಕೆ? ಸರ್ವೇ ಸಾಧಾರಣವಾಗಿ ಗೋ ಶಾಲೆಗಳಿಗೆ ಬಂದಂತಹ ದನಗಳನ್ನು ನೋಡಿದರೆ, ರೈತ ತನಗೆ ನಿರುಪಯೋಗವಾಗುವಂತಹದ್ದನ್ನು ತಂದು ಗೋಶಾಲೆಗಳಿಗೆ ಕೊಟ್ಟಿದ್ದಾನೆ. ಅದರ ಅರ್ಥ ರೈತನಿಗೆ ತೊಂದರೆ ಯಿಂದೆಯೆಂದು ಅರ್ಥವಲ್ಲ, ತನಗೆ ಶಕ್ತಿ ಇರುವತನಕ ತನ್ನ ದನಗಳನ್ನು ತನ್ನ ಮನೆಯಲ್ಲೇ ಸಾಕೋಣ ಎಂಬ ಭಾವನೆ ಅವನಲ್ಲಿದೆ, ಇನ್ನೂ ಒಂದು ತಿಂಗಳವರೆಗೆ ಈ ಸಮಸ್ಯೆ ಉದ್ಭವವಾಗುವುದಿಲ್ಲ. ಮುಂದಿನ ತಿಂಗಳು ಈ ಸಮಸ್ಯೆ ಪ್ರಾರಂಭವಾಗುತ್ತದೆ. ಇದಕ್ಕೆ ವಿಶೇಷ ಕಾರ್ಯಕ್ರಮವನ್ನು ಹಾಕಿ ಕೊಳ್ಳಬೇಕು. ಈ ದಿಶೆಯಲ್ಲಿ ನಮ್ಮ ಸರ್ಕಾರ ಈ ಎರಡು ತಿಂಗಳಲ್ಲಿ ಮೇವು ಬೆಳೆಯುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಈ ಮೇವನ್ನು ಬೆಳೆಯುವ ರೈತರಿಗೆ ಹೆಚ್ಚಿನ ಅನುಕೂಲಗಳನ್ನು ಒದಗಿಸಿಕೊಟ್ಟಿದ್ದಾರೆ. ಮುಂದಿನ ತಿಂಗಳುಗಳಲ್ಲಿ ಬಲವಾದ ಸಮಸ್ಯೆ ಬರುವ ಕಾಲಕ್ಕೆ ನಮಗೆ ಹುಲ್ಲು ಒದಗುತ್ತದೆ. ಇವತ್ತಿನ ದಿವಸ ಇಡೀ ರಾಜ್ಯದಲ್ಲಿರತಕ್ಕಂತಹ ಎಲ್ಲ ದನಗಳಿಗೆ ಪೂರ್ಣ ಹೊಟ್ಟೆ ತುಂಬಿಸುವುದಕ್ಕೆ ಒದಗಿಸದಿದ್ದರೂ ಸಹ ಅವು ಮೇವಿನ ಅಭಾವದಿಂದ ಮರಣ ಹೊಂದದಂತಹ ಒಂದು ವ್ಯವಸ್ಥೆಯನ್ನು ನಮ್ಮ ಸರ್ಕಾರ ಸರಿಯಾಗಿ ಮಾಡಿದೆಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಸರ್ಕಾರವು ನುಡಿದಂತೆ ನಡೆಯುವಂತಹ ಸರ್ಕಾರ ಎನ್ನುವ ಮಾತನ್ನು ಸಿದ್ಧಿ ಮಾಡಿ ತೋರಿಸಿದೆ. ಹಿಂದೆಯೂ ಕೂಡ ಅನೇಕ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ಅದರಲ್ಲಿ ಮುಖ್ಯ ವಾಗಿ ಸಾಮಾಜಿಕ ಕಾರ್ಯಕ್ರಮ ಆರ್ಥಿಕ ಕಾರ್ಯಕ್ರಮ, ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು, ಅದನ್ನು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಸವಿಸ್ತಾರವಾಗಿ ವರ್ಣಿಸಿದ್ದಾರೆ. ಶೈಕ್ಷಣಿಕ ಕಾರ್ಯಕ್ರಮ ವನ್ನೇ ತೆಗೆದುಕೊಳ್ಳೋಣ. ಅದರಲ್ಲಿ ನಮಗೆ ತಿಳಿದಂತೆ ಇಡೀ ಹಿಂದೂಸ್ಥಾನದ ಪೈಕಿ ನಮ್ಮ ರಾಜ್ಯ ದಲ್ಲಿ ಮಧ್ಯದಲ್ಲಿ ಶಾಲೆ ಬಿಡತಕ್ಕಂತಹ ಮಕ್ಕಳ ಸಂಖ್ಯೆ ಅತಿಯಾಗಿದೆ. ಈಗ ಕಂಪಲ್ಸರೀ ಎಜುಕೇಷನ್ ಎಂದು ಮಾಡಿ, ಮಕ್ಕಳನ್ನು ಶಾಲೆಗೆ ನೇಮಿಸಿಕೊಳ್ಳುತ್ತಿದ್ದಾರೆ. ಈಗ ಮಕ್ಕಳ ಸಂಖ್ಯೆ ಶಾಲೆಗಳಲ್ಲಿ ಏರುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಏಳನೇ ತರಗತಿಯವರೆಗೆ ಓದಿದ ಮಕ್ಕಳು ಅಲ್ಲೇ ಉಳಿಯುವ ಪ್ರಸಂಗವಿದ್ದು, ಇದನ್ನು ತಪ್ಪಿಸುವ ದೃಷ್ಟಿಯಿಂದ ಹಾಗೂ ಚಿಕ್ಕ ಮಕ್ಕಳಲ್ಲಿ ಶ್ರೀಮಂತ, ಬಡವ ಎಂಬ ಭೇದಭಾವ ಬರಬಾರದು ಎಲ್ಲರಲ್ಲೂ ಒಂದೇ ಮನೋಭಾವನೆ, ಆತ್ಮೀಯತೆ ಬೆಳೆದು ಬಂದು, ಇಡೀ ರಾಷ್ಟ್ರದ ಅಭಿಮಾನವನ್ನು ಅವರಲ್ಲಿ ಮೂಡಿಸುವಂತಹ ಶಕ್ತಿ ನಮ್ಮಲ್ಲಿ ಇರಬೇಕೆಂದು ಉಚಿತವಾಗಿ ಸಮವಸ್ತ್ರವನ್ನು ಕೊಡಲು ಪ್ರಾರಂಭ ಮಾಡಿದ್ದೇವೆ. ಸಮವಸ್ತ್ರ ಮತ್ತು ಪುಕ್ಕಟೆಯಾಗಿ ಪುಸ್ತಕಗಳನ್ನು ಕೊಡುವ ಕಾರ್ಯಕ್ರಮದಿಂದಾಗಿ ಇವೊತ್ತಿನ ದಿವಸ ಪಾಲಕರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಕಳಿಸುತ್ತಿದ್ದಾರೆ. ಮಕ್ಕಳ ಹೆಚ್ಚಿನ ಸಂಖ್ಯೆಯನ್ನು ನಾವು ಇಂದು ಶಾಲೆಗಳಲ್ಲಿ ಕಾಣುತ್ತಿ

ದ್ದೇವೆ. ಇದರಿಂದ ಒಂದು ಸಮಸ್ಯೆ ಉಂಟಾಗಿದೆ. ಪ್ರತಿಯೊಂದು ಹಳ್ಳಿಯಲ್ಲಿ ಮಕ್ಕಳ ಸಂಖ್ಯೆ ಜಾಸ್ತಿಯಾಗಿ ಸ್ಕೂಲ್ ಬಿಲ್ಡಿಂಗ್‌ಗಳು ಕಡಿಮೆಯಾಗಿದೆ ಮತ್ತು ಶಿಕ್ಷಕರ ಸಂಖ್ಯೆ ಕಡಿಮೆಯಾಗಿದೆ. ಎಂಬ ಬೇಡಿಕೆ ಜನರಿಂದ ಬರುತ್ತಿದೆ. ಎಲ್ಲ ಶಾಸಕರೂ ಈ ಸಮಸ್ಯೆಯನ್ನು ಎದುರಿಸುತ್ತಿರಬೇಕು. ಆ ಸಮಸ್ಯೆಯನ್ನು ಬಿಡಿಸಲಿಕ್ಕೆ ನಮ್ಮ ಸರ್ಕಾರ ಸ್ಕೂಲ್ ಬಿಲ್ಡಿಂಗ್‌ಗಳನ್ನು ಕಟ್ಟಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ನಮ್ಮ ಜಿಲ್ಲೆಯಲ್ಲಿ ಡಿ.ಡಿ.ಡಿ.ಸಿ ಮೀಟಿಂಗ್‌ನಲ್ಲಿ ತಾಲ್ಲೂಕು ಮಟ್ಟದ ಎನ್.ಆರ್.ಇ.ಪಿ. ಹಣ ಏನಿದೆ, ಅದರಲ್ಲಿ ಸ್ಕೂಲ್ ಬಿಲ್ಡಿಂಗ್‌ಗಳನ್ನು ಕಟ್ಟಿಸುವ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ಮಕ್ಕಳಿಗೆ ವಿಶೇಷವಾದಂತಹ ಸೌಲಭ್ಯವನ್ನು ಮಾಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಈ ಜಾತಿಯ ಮಕ್ಕಳನ್ನು ಶಾಲೆಗೆ ಕಳಿಸುವ ಪಾಲಕರಿಗೆ ಅನುದಾನ ಕೊಡುವಂತಹ ವ್ಯವಸ್ಥೆಯನ್ನು ನಮ್ಮ ಸರ್ಕಾರ ಇಟ್ಟುಕೊಂಡಿದೆ. ಶೈಕ್ಷಣಿಕವಾಗಿ ನಮ್ಮ ಜನ ಮುಂದೆ ಬರಬೇಕು. ನಮ್ಮಲ್ಲಿ ನಿರಕ್ಷರಸ್ಥರ ಸಂಖ್ಯೆ ಜಾಸ್ತಿಯಿದೆ, ಅದನ್ನು ಕಡಿಮೆ ಮಾಡುವ ಉದ್ದೇಶದಿಂದ ಅಕ್ಷರ ಸೇನೆ ಯೋಜನೆಯನ್ನು ತೆಗೆದುಕೊಂಡಿದ್ದೇವೆ.

ಅಡಲ್ಟ್ ಎಜುಕೇಷನ್ ಯೋಜನೆ ಏನಿತ್ತು ಅದು ಬಹಳ ಮಂದಗತಿಯಿಂದ ಇತ್ತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಪ್ರತಿ ದಿವಸ ಶಾಲೆಗಳು ನಡೆಯುವಂತೆ ವ್ಯವಸ್ಥೆ ಮಾಡಿರುವುದರಿಂದ ಎಷ್ಟೋ ಜನ ವಯಸ್ಕರು ಶಿಕ್ಷಣ ಪಡೆಯುತ್ತಿದ್ದಾರೆ. ಈ ಸಂದರ್ಭದಲ್ಲಿ ವಿಶೇಷವಾದ ಮತ್ತೊಂದು ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಜನಾಂಗದವರಿಗೆ ವಿಶೇಷವಾದ ಸೌಲಭ್ಯವನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಕೊಡತಕ್ಕದ್ದು ಇದೆ. ಅದೇ ರೀತಿ ನಮ್ಮ ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅಲ್ಪ ಸಂಖ್ಯಾತ ವರ್ಗದ ಜನರಿಗೆ ವಿಶೇಷವಾದ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಅವರಿಗಾಗಿಯೇ ಒಂದು ಪ್ರತ್ಯೇಕ ಡೆವಲಪ್‌ಮೆಂಟ್ ಕಾರ್ಪೋರೇಷನ್ ಪ್ರಾರಂಭ ಮಾಡಿ ಒಂದು ಷೇರ್ ಅಮಾಂಟಿನ ವ್ಯವಸ್ಥೆ ಮಾಡಿದ್ದಾರೆ. ಬ್ಯಾಕ್‌ವರ್ಡ್ ಕ್ಲಾಸ್‌ಸ್ ಅಂಡ್ ಮೈನಾರಿಟೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಎಂದು ಇತ್ತು. ಅದರಿಂದ, ವಿಶೇಷವಾಗಿ, ನೇರವಾಗಿ ಅಲ್ಪ ಸಂಖ್ಯಾತ ಜನರಿಗೆ ಆರ್ಥಿಕ ಸಹಾಯ ಒದಗುವುದಿಲ್ಲ ಎಂದು ಪ್ರತ್ಯೇಕ ವ್ಯವಸ್ಥೆ ಮಾಡಿ, ಆ ಜನಗಳ ಆರ್ಥಿಕ ಅಭಿವೃದ್ಧಿಗೆ ಕಾರ್ಪೋರೇಷನ್ ಮಾಡಿದ್ದೇವೆ. ಇದರಿಂದ ಅಲ್ಪ ಸಂಖ್ಯಾತ ಬಾಂಧವರಿಗೆ ಕ್ರಿಶ್ಚಿಯನ್, ಮುಸ್ಲಿಂ, ಬೌದ್ಧರು, ಜೈನರು ಇವರು ಯಾರೇ ಇರಬಹುದು ಭಾಷಾ ಅಲ್ಪ ಸಂಖ್ಯಾತರಿಗೆ ವಿಶೇಷವಾದಂಥ ಸೌಲಭ್ಯವನ್ನು ನಮ್ಮ ಸರ್ಕಾರ ವಚನ ಕೊಟ್ಟಂತೆ ಕಲ್ಪಿಸಿ ಕೊಟ್ಟಿದೆ. ಅಲ್ಪಸಂಖ್ಯಾತರಿಗಾಗಿ ವಕ್ಫ್ ಬೋರ್ಡ್ ಇದೆ, ಅದಕ್ಕೆ ಹಿಂದೆ ಸ್ವಲ್ಪ ಹಣವನ್ನು ಒದಗಿಸುತ್ತಿದ್ದರು. ಈಗ ನಮ್ಮ ಸರ್ಕಾರ ಬಂದ ಮೇಲೆ ಅದಕ್ಕೆ ಹೆಚ್ಚಿನ ಹಣಕಾಸಿನ ಸೌಲಭ್ಯ ಕಲ್ಪಿಸಿಕೊಟ್ಟು ಧಾರ್ಮಿಕ ಸಂಸ್ಥೆಗಳನ್ನು ಒಳ್ಳೆಯ ರೀತಿಯಿಂದ ನಡೆಸಲಿ ಎನ್ನುವ ಉದ್ದೇಶದಿಂದ, ಅದು ಮಸೀದಿ ಇರಲಿ, ದರ್ಗಾ ಇರಲಿ, ಮತ್ತೊಂದು ಇರಲಿ ಅವುಗಳನ್ನು ಸುಧಾರಣೆ ಮಾಡಲಿಕ್ಕೆ, ರಿಪೇರಿ ಮಾಡಲಿಕ್ಕೆ ಹೆಚ್ಚಿನ ಹಣಕಾಸಿನ ವ್ಯವಸ್ಥೆ ಮಾಡಿದೆ. ಅನೇಕ ರೀತಿಯಿಂದ ಜನಗಳ ಅಭಿವೃದ್ಧಿಗೆ ಅವಶ್ಯಕತೆ ಇದ್ದಂಥ ಹಣಕಾಸಿನ ವ್ಯವಸ್ಥೆ ಮಾಡಿರುವುದು ಅಷ್ಟೇ ಅಲ್ಲ, ಸರಿಯಾದ ರೀತಿಯಲ್ಲಿ ಹಣಕಾಸು ಜನಗಳಿಗೆ ಮುಟ್ಟುವಂತೆ ವ್ಯವಸ್ಥೆ ಮಾಡಿದೆ. ೧೯೭೧ನೇ ಇಸವಿಯಲ್ಲಿ ಗರೀಬಿ ಹಠಾವೋ ಪ್ರಾರಂಭ ಆದ ಕಾಲಕ್ಕೆ ೩೬ ಪರ್ಸೆಂಟ್ ಬಡತನ ರೇಖೆಯಿಂದ ಕೆಳಗೆ ಇದ್ದ ಜನರು ೧೯೭೭ಕ್ಕೆ ೪೮ ಪರ್ಸೆಂಟ್‌ಗೆ ಹೋಗಿದ್ದಾರೆ. ಇದನ್ನು ನಾನು ಟೀಕೆ ಮಾಡುತ್ತೇನೆಂದು ದಯಮಾಡಿ ಯಾರೂ ತಿಳಿದುಕೊಳ್ಳಬಾರದು. ಇದು ಏನಾಗಿದೆ ಎಂದರೆ, ಜನಗಳಿಗೆ ಸಿಕ್ಕಬೇಕಾದ ಸೌಲಭ್ಯ ಸಿಕ್ಕದೆ, ಬಡತನ ರೇಖೆಯಿಂದ ಕೆಳಗೆ ಇರತಕ್ಕ ಜನಗಳ ಸಂಖ್ಯೆ ಹೆಚ್ಚು ಆಯಿತೇ ವಿನಹ ಗರೀಬಿ ಹಠಾವೋ ಆಗಲಿಲ್ಲ. ಆದ್ದರಿಂದ ಜನರು ಇದರ ಉಪಯೋಗ ಪಡೆಯಬೇಕೆಂಬ ದೃಷ್ಟಿಯಿಂದ ಷೆಡ್ಯೂಲ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ ಟ್ರೈಬ್ಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ಗೆ ನಮ್ಮ ಸರ್ಕಾರ ಹೆಚ್ಚಿನ ಹಣ ಕೊಟ್ಟಿದೆ. ಆ ಜನರ ಹೊಲಗಳಿಗೆ ಸಾಮೂಹಿಕ ನೀರಾವರಿ ಯೋಜನೆ, ವೈಯಕ್ತಿಕವಾಗಿ ಬೋರ್‌ವೆಲ್ ನೀರಿನ ಅನುಕೂಲ ಮಾಡಿಕೊಡುವ ಯೋಜನೆ ಇದೆ. ನಾನು ಕಳೆದ ವರ್ಷ ಈ ಕಾರ್ಪೋರೇಷನ್‌ನ ಛೇರ್ಮನ್ ಆಗಿದ್ದೆ. ಈ ಒಂದು ಯೋಜನೆ ೧೯೮೦ರಲ್ಲಿ ಸ್ಪೆಷಲ್ ಕಾಂಪೋನೆಂಟ್ ಇದರಲ್ಲಿ ಪ್ರಾರಂಭವಾಗಿದ್ದರೂ ೧೯೮೩ರ ವರೆಗೆ ಕೇವಲ ೧೦೦ ಬಾವಿ ಕೊಟ್ಟಿಲ್ಲ. ನಾನು ನಮ್ಮ ನಾಲ್ಕು ಜಿಲ್ಲೆಯಲ್ಲಿ ಒಂದೇ ವರ್ಷದ ಅವಧಿಯಲ್ಲಿ ೩೦೦ ಜನರಿಗೆ, ತಮ್ಮ ತಮ್ಮ ಹೊಲಗಳಿಗೆ ನೀರು ಮುಟ್ಟಿಸುವಂಥ ವ್ಯವಸ್ಥೆ ಮಾಡಿದೆ. ಅದರಲ್ಲಿ ನಮ್ಮ ಕರ್ತವ್ಯ ಇತ್ತು. ಸರ್ಕಾರದಲ್ಲಿ ನನ್ನನ್ನು

ಈ ಬಗ್ಗೆ ಮೇಲಿಂದ ಮೇಲೆ ಕೇಳುತ್ತಿದ್ದರು. ಪರಿಶಿಷ್ಟ ಜನಾಂಗ, ಪರಿಶಿಷ್ಟ ಪಂಗಡದವರಿಗೆ ಹಾಗೂ ಹಳ್ಳಿಯಲ್ಲಿರತಕ್ಕಂಥ ಕೂಲಿಗಾರರು ಮಧ್ಯಮ ಮತ್ತು ಸ್ಮಾಲ್ ಫಾರ್ಮರ್ಸ್‌ಗೆ ವಿಶೇಷವಾದ ಆರ್ಥಿಕ ಸಹಾಯವನ್ನು ಒದಗಿಸಿ ಬಡತನ ರೇಖೆಯಿಂದ ಮೇಲೆ ಎತ್ತಲಿಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇಂತಹ ವ್ಯವಸ್ಥೆ ಮಾಡಿರತಕ್ಕ ಸರ್ಕಾರವನ್ನು ಅಭಿನಂದಿಸಿದ್ದರೆ ಬಹಳ ಸಂತೋಷವಾಗುತ್ತಿತ್ತು. ಅದನ್ನು ಬಿಟ್ಟು ಆ ಕಡೆ ಕುಳಿತಿರತಕ್ಕ ನಮ್ಮ ಗೆಳೆಯರು ಮಾತನಾಡುವಾಗ ಸರಕಾರವನ್ನು ಟೀಕೆ ಮಾಡಬೇಕೆಂದು ಮಾಡುತ್ತಿದ್ದರೆ ಹೊರತು, ಯಾವುದೇ ನೇರವಾದಂಥ ಆಪಾದನೆಯನ್ನು ಮಾಡಿಲ್ಲ. ಅವರು ಟೀಕೆಗಳನ್ನು ಮಾಡುವಂತಾದ್ದು ಇಲ್ಲದೇ ಇದ್ದುದರಿಂದ ಮಾಡಿಲ್ಲ. ನಮ್ಮ ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದೆ, ಕೆಲಸ ಮಾಡಿರುವಂಥಾದ್ದನ್ನು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಓದಿ ಹೇಳಿದ್ದಾರೆ, ಆದ್ದರಿಂದ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತಾ ಮಾನ್ಯ ಕೃಷ್ಣಪ್ಪನವರು ಏನು ಒಂದು ಈ ನಿರ್ಣಯವನ್ನು ಮಂಡಿಸಿದ್ದಾರೆ. ಅದನ್ನು ಬೆಂಬಲಿಸಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಜಂಟಿ ಅಧಿವೇಶನಲ್ಲಿ ಮಾಡಿದಂಥ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೋಸ್ಕರ ನಾನು ಇಲ್ಲಿ ನಿಂತಿದ್ದೇನೆ. ಅವರು ಮಾಡಿದಂಥ ಭಾಷಣಕ್ಕೆ ವಂದನೆಯನ್ನು ನಾನು ಸಲ್ಲಿಸುತ್ತೇನೆ, ಆದರೆ ಇಲ್ಲಿರುವಂಥ ವಿಷಯಕ್ಕೆ ನಾನು ವಂದನೆಯನ್ನು ಕೊಡುವಂಥ ಸ್ಥಿತಿಯಲ್ಲಿಲ್ಲ. ಹೋದ ವರ್ಷ ಮಾನ್ಯ ರಾಜ್ಯಪಾಲರು ಏನು ಭಾಷಣವನ್ನು ದಯಪಾಲಿಸಿದ್ದರು ಅದರ ಪ್ರತಿ ನನ್ನ ಹತ್ತಿರ ಇದೆ. ಅದನ್ನು ಅಭ್ಯಾಸ ಮಾಡಿ ನೋಡಿದ್ದೇನೆ ಈ ವರ್ಷದ ಪ್ರತಿಯನ್ನೂ ನಾನು ನೋಡಿದ್ದೇನೆ. ಏನು ಮಾಡಿದ್ದೇವೆ ಎನ್ನುವ ಸಂಗತಿ ಬಿಟ್ಟು, ಏನು ಮಾಡುತ್ತೇವೆ ಎನ್ನುವುದನ್ನು ಹೇಳಿದ್ದಾರೆ. ರಾಜ್ಯದ ಜನತೆಯ ಹಿತ ದೃಷ್ಟಿಯಿಂದ ಇಂತಹ ಕಾರ್ಯ ನಮ್ಮ ಮುಂದಿದೆ, ಇಂಥಾದ್ದನ್ನು ಸರ್ಕಾರ ಮಾಡುತ್ತಿದೆ, ಎನ್ನುವ ಬಗ್ಗೆ ಒಂದು ಶಬ್ದ ಸಹ ಕಾಣುತ್ತಿಲ್ಲ, ಇದನ್ನು ನೋಡಿ ನನಗೆ ಆಶ್ಚರ್ಯ ಆಯಿತು. ಈ ಅಧಿವೇಶನ ಸೇರಿದಂಥ ಸಂದರ್ಭದಲ್ಲಿ ಬರಗಾಲದ ಬಗ್ಗೆ ಚರ್ಚೆ ಪ್ರಾರಂಭ ಆಯಿತು. ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಲಿಕ್ಕೆ ಪ್ರಯತ್ನ ಮಾಡಿದರೂ, ಸಹ; ಒಂದೆ ಮಾಡಿರತಕ್ಕ ಕೆಲಸ ಬಿಟ್ಟು ಮತ್ತೊಂದು ಶಬ್ದ ಇಲ್ಲದೇ ಇರುವುದರಿಂದ ಇದನ್ನು ನಾನು ವಿರೋಧ ಮಾಡುತ್ತೇನೆ. ಏನೂ ಕೆಲಸ ಮಾಡಿಲ್ಲ ಎಂದು ಅಲ್ಲ, ವಿಶ್ವ ಕನ್ನಡ ಸಮ್ಮೇಳನ ಮಾಡಿದರು. ಅದು ಸ್ವಾಗತ ಮಾಡುವಂತಾದ್ದು, ಚೀಫ್ ಸೆಕ್ರೆಟರಿ ಲೆವೆಲ್‌ನಿಂದ ಕೆಳಗಿನವರೆಗೆ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಕಾರ್ಯ ರೂಪಕ್ಕೆ ತರುವುದಕ್ಕೆ ಒಂದು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ ಅದಕ್ಕೆ ಸ್ವಾಗತ ಮಾಡುತ್ತೇನೆ. ಇದರ ಜೊತೆಗೆ ಚೆಲುವ ಕನ್ನಡ ನಾಡು, ಈ ಚೆಲುವಾದಂಥ ಪುಸ್ತಕವನ್ನು ಪ್ರಿಂಟ್ ಮಾಡಲಿಕ್ಕೆ ಇಲ್ಲಿರತಕ್ಕ ಸರ್ಕಾರಿ ಮುದ್ರಣವೇ ಸಾಕಾಗುತ್ತಿತ್ತು. ಮಣಿಪಾಲ್‌ನಲ್ಲಿ ಒಳ್ಳೆಯ ಪ್ರಿಂಟ್ ಮಾಡತಕ್ಕ ವ್ಯವಸ್ಥೆ ಇದೆ, ಅಲ್ಲಿ ಇದನ್ನು ಮಾಡಲಿಕ್ಕೆ ಸಾಧ್ಯವಾಗುತ್ತಿತ್ತು. ಆದರೆ 'ಚೆಲುವ ಕನ್ನಡ ನಾಡು' ಎಂದು ಹೇಳಿಕೊಂಡು ಇದನ್ನು ಸಿಂಗಪುರ್‌ನಲ್ಲಿ ಪ್ರಿಂಟ್ ಮಾಡುವಂಥ ವ್ಯವಸ್ಥೆ ಮಾಡಿರುವುದು ತುಂಬಾ ನೋವು ಉಂಟು ಮಾಡಿದೆ. ಈ ಪುಸ್ತಕದಲ್ಲಿ ಕಳೆದ ೨೫–೩೦ ವರ್ಷಗಳ ನಮ್ಮ ಪರಂಪರೆ, ಹಿರಿಮೆ ಏನಿದೆ ಅದನ್ನು ಮುದ್ರಿಸಿರುವ ಬಗ್ಗೆ ಸ್ವಾಗತ ಮಾಡುತ್ತೇನೆ. ಆದರೆ, ಇದರಲ್ಲಿ ಜನತಾ ಸರ್ಕಾರದ ಸಾಧನೆ ಪ್ರಸ್ತಾಪ ಮಾಡಿರುವುದು ಏನಿದೆ ಅದನ್ನು ನಾನು ಸ್ವಾಗತ ಮಾಡುವುದಿಲ್ಲ. ಒಬ್ಬ ಹಿರಿಯ ಪತ್ರಿಕೋದ್ಯಮಿ, ಕಾಮತ್ ಎನ್ನುವವರು ಇದಕ್ಕೆ ಹೇಗೆ ಒಪ್ಪಿಕೊಂಡರು, ಇವರು ಹೇಗೆ ಇದನ್ನು ಬರೆಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೋ ಗೊತ್ತಾಗುವುದಿಲ್ಲ. ವಿಧಾನ ಸೌಧ ಕಟ್ಟಿಸಿದಂಥ ಹನುಮಂತಯ್ಯನವರನ್ನು ಜ್ಞಾಪಕ ಮಾಡಿಕೊಳ್ಳಬೇಕಾಗಿತ್ತು. ಹಿಂದಿನ ಸರ್ಕಾರ ಒಳ್ಳೆಯ ಕೆಲಸ ಮಾಡಿದ್ದು ಪ್ರಸ್ತಾಪ ಇಲ್ಲದೆ ಇರುವುದರಿಂದ ಇದಕ್ಕೆ ನನ್ನ ವಿರೋಧ ವ್ಯಕ್ತಪಡಿಸುತ್ತೇನೆ. ಈ ಸಂದರ್ಭದಲ್ಲಿ ಹಸಿರು ಕಾರ್ಡ್ ಮೂಲಕ ಅಕ್ಕಿ, ಸೀರೆ ಹಂಚುವ ವ್ಯವಸ್ಥೆ ಮಾಡಿದೆ ಅದನ್ನು ಸ್ವಾಗತ ಮಾಡುತ್ತೇನೆ. ರೈತರ ಪರಿಸ್ಥಿತಿ ವಿಚಿತ್ರವಾದ ಸಂದರ್ಭದಲ್ಲಿ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಿರುವುದನ್ನು ಸ್ವಾಗತ ಮಾಡುತ್ತೇನೆ.

---

† ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

೨. ಪಿ.ಎಂ.

ಬಡವರಿಗೆ ಸೀರೆ ಕೊಡತಕ್ಕ, ಅಕ್ಕಿ ಕೊಡತಕ್ಕ ವ್ಯವಸ್ಥೆಯನ್ನು ಮಾಡಿ, ಜೊತೆಗೆ ಬಸ್ಸಿನ ದರವನ್ನು ಏರಿಸಿದ್ದೀರಿ. ಇದು ಸಾಮಾನ್ಯ ಜನರಿಗೆ ಗೊತ್ತಿಲ್ಲ. ೪೦ ರೂಪಾಯಿ ಬೆಲೆ ಬಾಳುವಂಥ ಸೀರೆ ಕಡಿಮೆ ಬೆಲೆಗೆ ಸಿಗುತ್ತದೆಂದು, ೧೬ ಸಾರಿ ಬಸ್ಸಿನಲ್ಲಿ ಅವನು ಓಡಾಡಬೇಕಾಗುತ್ತದೆ. ತಾಲ್ಲೂಕು ಆಫೀಸಿನಲ್ಲಿ ತನ್ನ ಕೆಲಸಕ್ಕಾಗಿ ಬಡವ ಎಷ್ಟು ಸಾರಿ ಬರಬೇಕಾಗುತ್ತದೆ. ಬಡವರಿಗೆ, ಮಧ್ಯಮ ವರ್ಗದವರಿಗೆ ವಿದ್ಯುತ್ ದರ ಏರಿಕೆಯಿಂದ, ಬಸ್ ದರದ ಏರಿಕೆಯಿಂದ ಎಷ್ಟು ತೊಂದರೆಯಾಗಿದೆ ಎನ್ನುವ ಬಗ್ಗೆ ಸರ್ಕಾರದವರಿಗೆ ಅರಿವು ಇಲ್ಲವೆ ಎಂದು ನಾನು ಹೇಳಬೇಕಾಗಿದೆ. ಒಂದು ಕಡೆ ಜನತೆಗೆ ಕೊಟ್ಟು ಮತ್ತೊಂದು ಕಡೆ ತೆರಿಗೆ ರೂಪದಲ್ಲಿ ಬಡಜನರ ಮೇಲೆ ದರಗಳನ್ನು ಜಾಸ್ತಿ ಮಾಡಿರುವುದು, ಇದೊಂದು ರೀತಿಯ ಮೋಸ ಇರಬಹುದೆಂದು ನನಗೆ ಕಾಣುತ್ತದೆ. ಇವೆರಡನ್ನೂ ತೂಗಿ ನೋಡಿದಾಗ ಎಂತಹವರಿಗೂ ಇದು ಗೊತ್ತಾಗುತ್ತದೆ. ಇನ್ನು ಕನ್ನಡ ಭಾಷೆಯನ್ನು ಜಾರಿಗೆ ತರುವ ವಿಷಯದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೀರಿ. ಆದರೆ, ವಿಧಾನ ಸೌಧವನ್ನು ಪ್ರವೇಶ ಮಾಡುವಂಥ ಸಂದರ್ಭದಲ್ಲಿ ನೋ ಪಾರ್ಕಿಂಗ್ ಎಂದು ದಪ್ಪ ದಪ್ಪ ಅಕ್ಷರದಲ್ಲಿ ಬೋರ್ಡುಗಳನ್ನು ಹಾಕಿದ್ದಾರೆ; ಇದನ್ನು ತಕ್ಷಣ ಬದಲಾಯಿಸಿ; ಇದು ಶೋಭೆ ತರುವುದಿಲ್ಲವೆಂದು ಸಲಹೆ ಮಾಡುತ್ತೇನೆ. ಹಾಲಿನ ದರ, ನೀರಿನ ದರ ಹಾಗೂ ತೆರಿಗೆಯನ್ನು ಜಾಸ್ತಿ ಮಾಡಿ ಸಾಮಾನ್ಯ ಜನರಿಗೆ ತೊಂದರೆಯಾಗುವಂಥ ಕೆಲಸ ಏನು ಮಾಡಿದ್ದೀರಿ: ಅದರ ಬಗ್ಗೆ ಮರು ಪರಿಶೀಲನೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಭ್ರಷ್ಟಾಚಾರದ ವಿಷಯದಲ್ಲಿ ಈ ಮನೆಯಲ್ಲಿ ಬಹಳ ದೀರ್ಘವಾಗಿ ಚರ್ಚೆಯಾಗಿದೆ. ಅತ್ಯಂತ ವಿನಯದಿಂದ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರಲ್ಲಿಯೂ ಅಧಿಕಾರ ರೂಢ ಪಕ್ಷದ ಜನಕ್ಕೆ ವಿನಂತಿ ಮಾಡಿ ಕೊಳ್ಳುತ್ತೇನೆ. ಭ್ರಷ್ಟಾಚಾರ ನಿರ್ಮೂಲನೆ ಮಾಡುವ ವಿಷಯದಲ್ಲಿ ತಾವು ಅಧಿಕಾರಕ್ಕೆ ಬಂದಾಗ ಇದ್ದಂತಹ ಕಳಕಳಿ ಇವತ್ತು ಇಲ್ಲ ಎನ್ನುವ ಅನುಮಾನ ಬಂದಿದೆ. ಬಹಳ ವರ್ಷಗಳಿಂದ ರಕ್ತಗತವಾಗಿ ಬಂದಿರತಕ್ಕ ಈ ಭ್ರಷ್ಟಾಚಾರವನ್ನು ನಿಲ್ಲಿಸುವುದಕ್ಕೆ ತಾವು ಪ್ರಾಮಾಣಿಕ ಪ್ರಯತ್ನ ಮಾಡಿದ್ದೀರಾ ಎನ್ನುವ ಬಗ್ಗೆ ತಮ್ಮ ಮನಸ್ಸನ್ನು ಕೇಳಿ; ಉತ್ತರ ಸಿಕ್ಕಿದರೆ ನನಗೆ ಸಮಾಧಾನವಾಗುತ್ತದೆ. ಸುಮಾರು ಒಂದು ತಿಂಗಳ ಹಿಂದೆ, ಶಿವಮೊಗ್ಗ ಜಿಲ್ಲೆಯ ಜನತಾ, ಬಿಜೆಪಿ, ಕಾಂಗ್ರೆಸ್ ಶಾಸಕರು, ನಮ್ಮ ಜಿಲ್ಲೆಯ ಮಂತ್ರಿಗಳಾದ ಜೆ.ಹೆಚ್. ಪಟೇಲರಿಗೆ ಪತ್ರ ಬರೆದು; ಅಲ್ಲಿಯ ಡಿ.ಹೆಚ್.ಓ. ರವರು ೫ನೇ ದರ್ಜೆ ನೌಕರರನ್ನು ನೇಮಕ ಮಾಡಿಕೊಳ್ಳುವಂಥ ಸಂದರ್ಭದಲ್ಲಿ, ೫ ರಿಂದ ೧೦ ಸಾವಿರ ರೂಪಾಯಿಗಳವರೆಗೆ ಹಣ ಪಡೆದಿದ್ದಾರೆನ್ನುವ ಸಂಶಯ ಬಂದಿದೆ; ಇದರ ಬಗ್ಗೆ ತನಿಖೆ ಮಾಡಿಸಿ ಎಂದು ಪತ್ರ ಬರೆದೆವು. ಪತ್ರ ಬರೆದಿದ್ದು ಯಾರು? ವಿರೋಧ ಪಕ್ಷದ ಶಾಸಕರು; ಉದ್ದೇಶ್ಯ ನಿರುದ್ಯೋಗಿ ತರುಣರು ಉದ್ಯೋಗ ಅರಿಸಿಕೊಂಡು ಬರುತ್ತಾರೆ ಅವರು ಬಾಯಿಬಿಟ್ಟು ಹೇಳುವಂತಹ ಸ್ಥಿತಿಯಲ್ಲಿ ಇರುವುದಿಲ್ಲ. ಪ್ರತಿಯೊಂದು ಉದ್ಯೋಗಕ್ಕೂ ಇಂತಿಷ್ಟು ಕೊಟ್ಟರೆ ಮಾತ್ರ ಕೆಲಸವಾಗುತ್ತದೆ. ಇಲ್ಲದಿದ್ದರೆ ಇಲ್ಲ. ಕಣ್ಣಿಗೆ ಕಂಡದ್ದನ್ನು ಪ್ರಾಮಾಣಿಕವಾಗಿ ಹೇಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ತಾವು ಇದನ್ನು ಸರಿ ಮಾಡುವ ಕಡೆಗೆ ಮನಸ್ಸು ಕೊಡಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯಾಕ್ಷೇತ್ರದ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ವಿದ್ಯೆ ಪಡೆದಂತ ನವ ಯುವಕರು ಉದ್ಯೋಗ ಅರಿಸಿಕೊಂಡು ಓಡಾಡುವುದನ್ನು ಎಲ್ಲಾ ಕಡೆ ನೋಡುತ್ತಿದ್ದೇವೆ. ನೊಂದು ಒಂದು ಮಾತನ್ನು ಹೇಳಬೇಕಾಗಿದೆ. ಮಕ್ಕಳಿಗೆ ಶಾಲಾಕಟ್ಟಡಗಳ ವ್ಯವಸ್ಥೆಯಿಲ್ಲ. ಉಪಾಧ್ಯಾಯರ ವ್ಯವಸ್ಥೆ ಇಲ್ಲ. ಮಕ್ಕಳು ಸರಿಯಾದ ರೀತಿಯಲ್ಲಿ ವಿದ್ಯೆ ಕಲಿಯುವಂತ ವ್ಯವಸ್ಥೆ ಇಲ್ಲ. ಇದರ ಬಗ್ಗೆ ತಾವು ಒಂದು ಶ್ವೇತಪತ್ರವನ್ನು ಹೊರಡಿಸಬೇಕು, ಇವತ್ತು ಶಾಲಾಮಕ್ಕಳಿಗೆ ಸಮವಸ್ತ್ರ ಕೊಡುವಂಥ ವ್ಯವಸ್ಥೆ ಮಾಡಿದ್ದೀರಿ. ಇದಕ್ಕಾಗಿ ಹತ್ತುವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಸಮವಸ್ತ್ರಗಳಿಗಾಗಿ ಪಂಜಾಬಿನಿಂದ ಬಟ್ಟೆಯನ್ನು ತರಿಸಿದ್ದೀರಿ. ಮೀಟರ್‌ಗಟ್ಟಲೆ ಬಟ್ಟೆಯನ್ನು ಖರೀದಿ ಮಾಡಿರುವುದರಲ್ಲಿ ಮತ್ತು ಬಟ್ಟೆಯನ್ನು ಹೊಲಿಸುವುದರಲ್ಲಿ ಯಾವುದೋ ಒಂದು ಕಾಣದ ಕೈ ಕೆಲಸ ಮಾಡಿದೆ ಎನ್ನುವ ಸಂಶಯ ಬಂದಿದೆ. ಎಷ್ಟು ಬಟ್ಟೆ ಬರಬೇಕಾಗಿತ್ತೋ ಅಷ್ಟು ಬಟ್ಟೆ ಬಂದಿಲ್ಲ ಮಕ್ಕಳ ಅಳತೆಗೆ ಸರಿಯಾಗಿ ಬಟ್ಟೆ ಹೊಲಿದಿಲ್ಲ. ಕಾರ್ಯಕ್ರಮ ಜಾರಿಗೆ ತರುವಂಥ ಪ್ರಯತ್ನದಲ್ಲಿ ಬಹಳ ವ್ಯತ್ಯಾಸ ಆಗಿದೆ, ಹಣ ದುರುಪಯೋಗವಾಗಿದೆಯೆಂದು ಜನ ಮಾತನಾಡುತ್ತಿದ್ದಾರೆ. ಮಕ್ಕಳಿಗೆ ಸಮವಸ್ತ್ರ ಕೊಡತಕ್ಕ ವಿಚಾರದಲ್ಲಿ ಒಂದು ಹಗರಣ ಆಗಿದೆ. ಇದರ ಬಗ್ಗೆ ನಂಬಿಕೆ ಬರಬೇಕಾದರೆ, ತಾವು ಒಂದು

ಶ್ವೇತಪತ್ರವನ್ನು ಹೊರಡಿಸುವಂಥ ಅವಶ್ಯಕತೆ ಇದೆ. ಕೊಟ್ಟಿರತಕ್ಕ ಬಟ್ಟೆಯಾದರೂ ಯಾವ ಗುಣ ಮಟ್ಟದ್ದು ಒಂದೆರಡು ಸಾರಿ ನೀರಿಗೆ ಹಾಕಿದರೆ, ಅದರ ಆಯುಸ್ಸು ಮುಗಿಯುತ್ತದೆ. ಹತ್ತುವರೆ ಕೋಟಿ ರೂಪಾಯಿ ಖರ್ಚು ಮಾಡಿ ಕೊಡುವಂಥ ಬಟ್ಟೆ ಯಾವ ರೀತಿಯಲ್ಲಿರಬೇಕು, ಅಳತೆ ಸರಿಯಾಗಿ ದೆಯೋ ಇಲ್ಲವೇ? ಬಟ್ಟೆಯ ಗುಣಮಟ್ಟ ಹೇಗಿದೆ ಎಂಬುದನ್ನೆಲ್ಲಾ ನೋಡಬೇಕಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಮಕ್ಕಳಿಗೆ ಕೊಡತಕ್ಕ ಸಮವಸ್ತ್ರಗಳ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ನಮ್ಮಲ್ಲಿ ಉತ್ಪತ್ತಿಯಾಗತಕ್ಕ ಹ್ಯಾಂಡ್‌ಲೂಂ ಬಟ್ಟೆ ೧೭ಲಕ್ಷ ಮೀಟರು. ನಮಗೆ ಬೇಕಾಗಿರತಕ್ಕಂಥಾದ್ದು ೭೮ ಲಕ್ಷ ಮೀಟರು. ಇಷ್ಟು ಬಟ್ಟೆ ನಮ್ಮಲ್ಲಿ ಸಿಗದೇ ಇದ್ದಂತ ಸಂದರ್ಭದಲ್ಲಿ ಹೊರಗಡೆಯಿಂದ ತರಿಸಿದ್ದೇವೆ. ಕ್ವಾಲಿಟಿಯನ್ನು ಮೆಂಟೆಯಿನ್ ಮಾಡಿದ್ದೇವೆ. ಕ್ವಾಲಿಟಿ ಚೆನ್ನಾಗಿ ಇಲ್ಲದೇ ಇರುವುದನ್ನು ವಾಪಸ್ಸು ಮಾಡಿದ್ದೇವೆ. ನಮ್ಮ ಕಳಕಳಿ ನಮ್ಮ ರಾಜ್ಯ ದಲ್ಲಿಯೇ ಹ್ಯಾಂಡ್‌ಲೂಂ ಬಟ್ಟೆ ಜಾಸ್ತಿ ಮಾಡಬೇಕು ಎನ್ನುವುದು. ಕಳೆದ ವರ್ಷಕ್ಕೂ ಈ ವರ್ಷಕ್ಕೂ ಹೋಲಿಸಿದರೆ ಹ್ಯಾಂಡ್‌ಲೂಂ ಬಟ್ಟೆ ಉತ್ಪಾದನೆ ಸುಮಾರು ಶೇಕಡ ೭೦ರಷ್ಟು ಹೆಚ್ಚಾಗಿದೆ ಇನ್ನು ಹೆಚ್ಚಿಗೆ ವೀವರ್ಸ್‌ಗೆ ಹ್ಯಾಂಡ್‌ಲೂಂ ಬಟ್ಟೆ ತಯಾರು ಮಾಡಲು ಪ್ರೋತ್ಸಾಹ ಕೊಡುತ್ತಿದ್ದೇವೆ. ಕ್ವಾಲಿಟಿ ಬಗ್ಗೆ ಯಾಗಲೀ, ಬಟ್ಟೆಗಳ ಬಗ್ಗೆಯಾಗಲೀ ಯಾವ ದೂರುಗಳು ಬಂದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕೂಸು ಹುಟ್ಟುವುದಕ್ಕಿಂತ ಮುಂಚೆ ಕುಲಾವಿ ಹೊಲಿಸಿದರು ಎನ್ನುವಂತೆ ಆಗಿದೆ. ಈಗ ಸಮವಸ್ತ್ರಗಳನ್ನು ಕೊಡುವಂಥ ಅವಶ್ಯಕತೆ ಏನಿತ್ತು? ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮುಂದೆ ಕೊಡಬಹುದಾಗಿತ್ತಲ್ಲ ಎಂದು ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಈ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕ್ಕೆ ಮುಂಚೆ ಕೆಲವರ ಜೊತೆಯಲ್ಲಿ ಚರ್ಚೆ ಮಾಡಿ, ಬೇರೆ ರಾಜ್ಯಗಳಿಂದ ತರಿಸುವುದಕ್ಕೆ ಮೊದಲು ಉನ್ನತ ಮಟ್ಟದ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ, ಅಲ್ಲಿ ಬಟ್ಟೆ ಬೆಲೆ ಏನಿದೆ, ಎಷ್ಟು ಖರ್ಚು ಬರುತ್ತದೆ, ನಮ್ಮಲ್ಲಿ ತಯಾರಿಸುವುದಕ್ಕೆ ಎಷ್ಟು ಖರ್ಚು ಬರುತ್ತದೆನ್ನುವ ಮಾಹಿತಿಯನ್ನು ಸಂಗ್ರಹ ಮಾಡಿ, ಕಾರ್ಯ ಕ್ರಮವನ್ನು ಜಾರಿ ಮಾಡಬಹುದಿತ್ತು. ನಾವು ಪಕ್ಕದ ರಾಜ್ಯಗಳಿಂದ ಬಟ್ಟೆಕೊಳ್ಳುವುದರಿಂದ ಅವರು ಎಷ್ಟು ಲಾಭ ಮಾಡುತ್ತಾರೆ, ಇವೆಲ್ಲವನ್ನೂ ಯೋಚನೆ ಮಾಡಬೇಕಾಗಿತ್ತು. ೧೯೮೩–೮೪ರಲ್ಲಿ ಒಂದು ಸಾವಿರ ಶಾಲಾಕಟ್ಟಡಗಳನ್ನು ಕಟ್ಟಿಸಿಕೊಡುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಭರವಸೆ ಕೊಟ್ಟಿದ್ದೀರಿ. ಇವತ್ತು ಮಕ್ಕಳಿಗೆ ಕೂತುಕೊಂಡು ವ್ಯಾಸಂಗ ಮಾಡುವುದಕ್ಕೆ ಕಟ್ಟಡಗಳಿಲ್ಲ, ಮೈದಾನದಲ್ಲಿ ಕೂತು ಅಭ್ಯಾಸ ಮಾಡುವಂಥ ಪರಿಸ್ಥಿತಿ ಇರುವಾಗ, ಅದು ಪ್ರಾಥಮಿಕ ಶಾಲೆ ಇರಬಹುದು ಜೂನಿಯರ್ ಕಾಲೇಜು ಇರಬಹುದು. ಮೊದಲು ಶಾಲಾಕಟ್ಟಡ, ಪೀಠೋಪಕರಣಗಳು, ಉಪಾಧ್ಯಾಯರ ವ್ಯವಸ್ಥೆಯನ್ನು ಮಾಡಬೇಕಾಗಿತ್ತು, ಇವತ್ತು ವಿದ್ಯಾ ಕ್ಷೇತ್ರದಲ್ಲಿ ಪೈಪೋಟಿ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಸಂಗ ಮಾಡುವಂಥ ವಿದ್ಯಾರ್ಥಿಗಳಿಗೆ ಇಂಗ್ಲೀಷ್, ಕನ್ನಡ ವಿಷಯಗಳಲ್ಲಿ ಒಬ್ಬೊಬ್ಬರು ಲೆಕ್ಚರರುಗಳು ಇರುತ್ತಾರೆ. ಬೆಂಗಳೂರಿನಂತಹ ಪಟ್ಟಣಗಳಲ್ಲಿ ೩–೪ ಜನ ಲೆಕ್ಚರರುಗಳು ಇದ್ದಾರೆ. ಇಂಥ ಒಂದು ವಿಚಿತ್ರ ಪರಿಸ್ಥಿತಿ ವಿದ್ಯಾ ಕ್ಷೇತ್ರದಲ್ಲಿರುವಾಗ, ಮೊದಲು ಈ ಕಡೆ ಗಮನಕೊಡಬೇಕಾಗಿತ್ತು. ಸೌಲಭ್ಯ ನಂತರ ಮಾಡಬೇಕಾಗಿತ್ತು ಎಂದು ಹೇಳುತ್ತೇನೆ.

ಸ್ವಾಮಿ, ಬರಗಾಲದ ಬಗ್ಗೆ ನೊಂದು ಒಂದು ಮಾತನ್ನು ಹೇಳುತ್ತೇನೆ. ಸರಕಾರಿ ಕಚೇರಿಗಳಲ್ಲಿ ವಾರಕ್ಕೆ ಐದು ದಿವಸದ ಕೆಲಸ ಏನು ಮಾಡಿದ್ದೀರಿ ಅದನ್ನು ಮೊದಲು ೬ ದಿವಸ ಮಾಡಬೇಕೆಂದು ಹೇಳುತ್ತೇನೆ, ಇದರ ಉದ್ದೇಶ ಏನು ? ಸರ್ಕಾರೀ ನೌಕರರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಅವರೇ ಸ್ವತಃ ೬ ದಿವಸ ಕೆಲಸ ಮಾಡುತ್ತೇವೆಂದು ಮುಂದೆ ಬರಬೇಕು. ಒಂದು ವರ್ಷದಲ್ಲಿ ೩೬೫ ದಿವಸ ಇದ್ದರೆ, ಶನಿವಾರ, ಭಾನುವಾರ ಸೇರಿ ಒಟ್ಟು ೧೦೪ ದಿವಸ ಹೋಗುತ್ತದೆ. ಸಾಂದರ್ಭಿಕ ರಜೆ ಎಂದು ೧೫ ದಿವಸ, ಗಳಿಕೆ ರಜ ೩೦ ದಿವಸ, ಸರ್ಕಾರೀ ರಜ. ೧೩ ದಿವಸ ಒಟ್ಟು ೧೬೨ ದಿವಸ ಹೋಗುತ್ತದೆ. ಸೌತ್ ಕೊರಿಯಾದಲ್ಲಿರುವಂಥ ನನ್ನ ಸ್ನೇಹಿತರೊಬ್ಬರು ಸಿಕ್ಕಿದ್ದರು. ಅವರು ಅಲ್ಲಿ ರಜಾದಿನಗಳೇ ಇಲ್ಲವೆಂದು ತಿಳಿಸಿದರು.

ನಮ್ಮ ದೇಶದಲ್ಲಿ ವಾರದಲ್ಲಿ ರಜ ಎನ್ನುವುದು ಇಲ್ಲ, ನಾವು ರಜವನ್ನು ಸಹ ಕೇಳುವುದಿಲ್ಲವೆಂದು ಹೇಳಿದರು. ರಜ ತೆಗೆದುಕೊಳ್ಳುವುದಕ್ಕೆ ಸರ್ಕಾರ ಅವಕಾಶ ಕೊಟ್ಟಿದೆ. ನಮಗೆ ಬೇಕಾದರೆ ವರ್ಷದಲ್ಲಿ ನಾಲ್ಕೈದು ದಿನಗಳು ರಜ ತೆಗೆದುಕೊಳ್ಳುತ್ತೇವೆಂದೂ ಶನಿವಾರ ಭಾನುವಾರ ರಜ ತೆಗೆದುಕೊಳ್ಳುವುದಿಲ್ಲ

ವೆಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಒಂದು ಹೊಸ ಮಾದರಿ ಮಾಡುತ್ತೇವೆಂದು ಹೇಳಿ, ಬೇರೆ ಬೇರೆ ರಾಜ್ಯಗಳಲ್ಲಿ ಐದು ದಿನದ ವಾರ ನಡೆಯುತ್ತಿದೆ. ನಮ್ಮಲ್ಲೂ ಹಾಗೆಯೇ ಮಾಡೋಣ ವೆಂದು ಮಾಡಿದರು. ಇದಕ್ಕೆ ನಾನು ಅಧಿಕಾರಿಗಳನ್ನು ದೂಷಿಸುವುದಿಲ್ಲ. ಬರಗಾಲ ಇರತಕ್ಕ ಸಂದರ್ಭದಲ್ಲಿ ಸಮಸ್ಯೆಗಳು ತಾಂಡವವಾಡುತ್ತಿರುತ್ತವೆ. ನೆಮ್ಮದಿಯ ಜೀವನ ಮಾಡತಕ್ಕವರು ಸರ್ಕಾರಿ ನೌಕರರು ಮಾತ್ರ. ಅವರಿಂದ ಜನತೆಯ ಕೆಲಸವನ್ನು ಮಾಡಿಸಬೇಕಾಗಿತ್ತು. ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಜನತೆಯ ಹಿತದೃಷ್ಟಿಯಿಂದ ಅವರು ರಜದ ದಿವಸಗಳಲ್ಲೂ ಕೆಲಸ ಮಾಡಬೇಕಾಗಿದೆ. ಈಗ ಸರ್ಕಾರದ ಘೋಷಣೆಯ ಅವಶ್ಯಕತೆ ಇಲ್ಲ, ಶನಿವಾರ ಮತ್ತು ಭಾನುವಾರ ಕೆಲಸವಿಲ್ಲ ಎಂದು ಹೇಳಿ. ವಾರದಲ್ಲಿ ಐದು ದಿವಸ ಕೆಲಸ ಮಾಡುವುದರಿಂದ ಏನು ಉಪಯೋಗವಿದೆ ? ಅದನ್ನು ತಕ್ಷಣದಿಂದಲೇ ಇವತ್ತಿನ ದಿವಸವೇ ತಡಮಾಡದೆ ತೆಗೆದುಹಾಕಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಹೇಳಿದರು ವಿರೋಧಪಕ್ಷದ ನಾಯಕರುಗಳ ಜೊತೆ ಯಲ್ಲಿ ಚರ್ಚೆ ಮಾಡುತ್ತೇನೆಂದು ಹೇಳಿದರು. ನಮ್ಮ ಕಾಂಗ್ರೆಸ್ ಪಕ್ಷದ ಮಿತ್ರರು ಸಹ ಐದು ದಿವಸದ ವಾರ ಬೇಡವೆಂದು ಹೇಳಿದ್ದಾರೆ. ನೀವು ಏತಕ್ಕೋಸ್ಕರ ತಡ ಮಾಡುತ್ತಿದ್ದೀರಿ ? ಬಹುಶಃ ನಾನು ಈ ಮಾತನ್ನು ಬಹಳ ನೊಂದ ಮನಸ್ಸಿನಿಂದ ಹೇಳುತ್ತೇನೆ. ನಿಮಗೆ ರಾಜಕೀಯದಿಂದ ಒಳ್ಳೆಯ ಹೆಸರು ಬಂದಿಲ್ಲ. ಮುಖ್ಯಮಂತ್ರಿಗಳ ಜಾತಕ ಚೆನ್ನಾಗಿದೆ ಆದ್ದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಇದೆ. ಇನ್ನಾವುದೇ ಕಾರಣದಿಂದ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬಂದಿಲ್ಲ. ರಾಜ್ಯದ ಜನತೆ ಕಣ್ಣು ಮುಚ್ಚಿದ್ದಾರೆ ಅವರು ಕಣ್ಣು ತೆರೆಯುವುದರೊಳಗೆ ನೀವು ಅರಿತುಕೊಳ್ಳಬೇಕು. ನಾನು ಶಾಸಕನಾಗಿ ಟೀಕೆ ಮಾಡಬೇಕೆಂದು ಮಾಡುತ್ತಿಲ್ಲ. ನೀವು ಜನತೆಯ ಆಸೆಯನ್ನು ಪೂರೈಸಬೇಕು, ಅದರ ಜೊತೆಗೆ ಇರತಕ್ಕ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಬೇಕು. ಆ ಕಡೆಗೆ ನೀವು ಗಮನ ಕೊಟ್ಟಿಲ್ಲವೆಂದು ನಾನು ಹೇಳುತ್ತೇನೆ. ನಾನೊಂದು ಸಲಹೆಯನ್ನು ಮಾಡುತ್ತೇನೆ, ಜನಗಳು ಬರಗಾಲಕ್ಕೋಸ್ಕರ ದಾನ ಮಾಡುತ್ತಿದ್ದಾರೆ, ಇಲ್ಲಿ ಬರಗಾಲದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಬರಗಾಲ ಈಗ ಬಂದಿಲ್ಲ. ಈಗಾಗಲೇ ಬರಗಾಲ ಇದೆ ಇಂತಹ ಬರಗಾಲ ಇರುವಾಗ ನೀವು ಉಳಿತಾಯ ದೃಷ್ಟಿಯಿಂದ ನಿಮ್ಮ ಮಂತ್ರಿಮಂಡಲದ ಸದಸ್ಯರು ಏನು ಉಳಿತಾಯ ಮಾಡಿದ್ದೀರಿ ? ಮಂತ್ರಿಗಳು ಪ್ರವಾಸ ಮಾಡು ವುದನ್ನು ಕಡಿಮೆ ಮಾಡಿದ್ದೀರಾ ? ದೂರವಾಣಿ ಮಾಡುವುದನ್ನು ಕಡಿಮೆ ಮಾಡಿದ್ದೀರಾ ? ಗ್ರೀಟಿಂಗ್ಸ್ ಕಾರ್ಡ್ ಕಳುಹಿಸುವುದನ್ನು ಕಡಿಮೆ ಮಾಡಿ? ಜನಗಳಿಗೆ ಗಂಜಿಗೆ ಗತಿಯಿಲ್ಲ ಕುಡಿಯುವುದಕ್ಕೆ ನೀರು ಇಲ್ಲ ಯಾರಿಗೆ ಬೇಕು ಸ್ವಾಮಿ ಇವರ ಶುಭಾಶಯಗಳು. ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಮಂತ್ರಿಗಳು ಪ್ರತಿಯೊಬ್ಬರೂ ಗ್ರೀಟಿಂಗ್ ಕಾರ್ಡ್ಸ್ ಕಳುಹಿಸುವುದು ನಡೆದಿದೆ. ಇದರಲ್ಲಿ ಉಳಿತಾಯ ಮಾಡುವುದಕ್ಕೆ ಆಗುವುದಿಲ್ಲವೆ ? ನಾನು ಯಾರನ್ನು ಟೀಕೆ ಮಾಡುವುದಕ್ಕೆ ಈ ಮಾತನ್ನು ಹೇಳುತ್ತಿಲ್ಲ. ರಾಜ್ಯ ಸಮೃದ್ಧಿಯಾದಾಗ ನೀವು ಶುಭಾಶಯ ಕಳುಹಿಸಿ. 'ಚೆಲುವ ಕನ್ನಡ ನಾಡು' ಆ ಒಂದು ಕಲ್ಪನೆಯ ನಾಡು ನಮ್ಮದಾದಾಗ ಅದನ್ನು ಮಾಡೋಣ, ಈಗ ಅದನ್ನೆಲ್ಲಾ ಏತಕ್ಕೆ ಮಾಡುತ್ತೀರಿ ? ನಾನು ಬೇರೆ ಬೇರೆ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇನೆ. ಅಧಿಕಾರಿಗಳು ಯಾವರೀತಿ ಕೆಲಸ ಮಾಡು ತ್ತಿದ್ದಾರೆ ಎನ್ನುವುದನ್ನು ನಾನು ಸ್ಪಷ್ಟವಾಗಿ ನೋಡಿದ್ದೇನೆ. ಜಿಲ್ಲಾ ಮಂತ್ರಿಗಳ ಜೊತೆಯಲ್ಲಿ ಮೀಟಿಂಗ್ ಮಾಡುವುದನ್ನು ಬಿಟ್ಟು ನಾವು ಬೇರೇನು ಮಾಡುವುದಕ್ಕಾಗುವುದಿಲ್ಲವೆಂದು ಪ್ರಾಮಾಣಿಕ ಅಧಿಕಾರಿಯೊಬ್ಬರು ಹೇಳುತ್ತಾರೆ. ಹೊಸ ವ್ಯವಸ್ಥೆಯ ಪ್ರಕಾರ ಜಿಲ್ಲಾ ಮಂತ್ರಿಗಳು ಪ್ರವಾಸ ಮಾಡುತ್ತಾರೆ. ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಕರೆಯುತ್ತಾರೆ. ಅಧಿಕಾರಿಗಳು ಇರುವುದು ಮಂತ್ರಿಗಳ ಮೀಟಿಂಗ್‌ಗೆ ಅಟೆಂಡ್ ಆಗುವುದಕ್ಕೇನು ? ಮಂತ್ರಿಗಳು ಮೀಟಿಂಗ್ ಮಾಡಬೇಕಾದರೆ ನಿಮ್ಮ ಇಲಾಖೆಯ ಅಧಿಕಾರಿಗಳನ್ನು ಕರೆದು ಮೀಟಿಂಗ್ ಮಾಡಿ. ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಏತಕ್ಕೆ ಕರೆಯುತ್ತೀರಿ ? ಈ ರೀತಿ ನಿಮಗೆ ಆಜ್ಞೆ ಮಾಡುವ ಅವಕಾಶವಿಲ್ಲ ಎನ್ನುವುದನ್ನು ಈ ಒಂದು ಪರಿಸ್ಥಿತಿಯಿಂದ ತಿಳಿದುಕೊಳ್ಳಬೇಕಾಗುತ್ತದೆ. ಈ ಮಾತನ್ನು ನಾನು ಹೇಳುವುದಿಲ್ಲ. ಮಂತ್ರಿಗಳು ಪ್ರವಾಸ ಮಾಡತಕ್ಕ ಕಾಲದಲ್ಲಿ ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದು ಬೇಡ. ಬರ ಇರುವಾಗ ಅಧಿಕಾರಿಗಳು ಕೆಲಸ ಮಾಡುವುದು ಬೇಡವೆ ?

ಶ್ರೀ ವೈ. ಕೆ. ರಾಮಯ್ಯ (ರೇಷ್ಮೆ ಖಾತೆ ರಾಜ್ಯ ಸಚಿವರು).—ಮಾನ್ಯ ಸದಸ್ಯರು ಮಾತ ನಾಡುತ್ತಾ ಎಲ್ಲಾ ಜಿಲ್ಲಾ ಮಂತ್ರಿಗಳ ಬಗ್ಗೆ ಹೇಳಿದರು. ನಾನು ಕೂಡ ಪ್ರವಾಸ ಮಾಡಿದ್ದೇನೆ. ಮಾನ್ಯ ಸದಸ್ಯರು ಮಂತ್ರಿಗಳು ಪ್ರವಾಸ ಹೋದಾಗ ಎಲ್ಲಾ ಇಲಾಖೆಯ ಅಧಿಕಾರಿಗಳು ಕೆಲಸ ಇರಲಿ

ಇಲ್ಲದೇ ಇರಲಿ ಮಂತ್ರಿಗಳ ಜೊತೆ ಇರುತ್ತಾರೆಂದು ಹೇಳಿದರು. ಎಲ್ಲಾ ಇಲಾಖೆಯ ಅಧಿಕಾರಿಗಳ ಅವಶ್ಯಕತೆ ಇಲ್ಲವೆನ್ನುವುದು ನನ್ನ ಗಮನಕ್ಕೆ ಬಂದಿದೆ. ಬರಗಾಲ ಪರಿಸ್ಥಿತಿಯಲ್ಲಿ ಜನಗಳು ತೊಳಲಾಡುತ್ತಿರುವಾಗ ಸಭೆ ಸಮಾರಂಭಗಳನ್ನು ಮಾಡುವಂತಹದ್ದು ಅನಿವಾರ್ಯವಾದರೆ ಎಲ್ಲಾ ಇಲಾಖೆಗಳ ಅಧಿಕಾರಿಗಳ ಅವಶ್ಯಕತೆ ಇಲ್ಲವೆನ್ನುವುದು ನನ್ನ ಗಮನಕ್ಕೆ ಬಂದಿದೆ. ಬೇರೆ ಜಿಲ್ಲೆಗಳಲ್ಲಿ ಆ ರೀತಿ ಮಾಡದೇ ಇರಬಹುದು ನಾನು ತುಮಕೂರು ಜಿಲ್ಲೆಯಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗಳು ಇರುವುದು ಬೇಡವೆನ್ನುವ ಸೂಚನೆಯನ್ನು ಕೊಟ್ಟು ಆದಷ್ಟು ಸಭೆ ಸಮಾರಂಭಗಳನ್ನು ನಿಲ್ಲಿಸಬೇಕೆಂದು ಹೇಳಿದ್ದೇನೆ. ಮಂತ್ರಿಗಳ ಜೊತೆ ಮತ್ತು ಸಭೆ ಸಮಾರಂಭಗಳಿಗೆ ಅಧಿಕಾರಿಗಳು ಹೋಗುವುದನ್ನು ನಿಲ್ಲಿಸಬೇಕೆಂದು, ಅದರ ಅವಶ್ಯಕತೆ ಇಲ್ಲವೆಂದು ಹೇಳಿದ್ದೇನೆ. ಅಧಿಕಾರಿಗಳು ಜಿಲ್ಲೆಯಿಂದ ಹೊರಗಡೆ ಹೋಗಬೇಕಾದರೆ ಮೇಲಿನ ಅಧಿಕಾರಿಗಳ ಅನುಮತಿ ತೆಗೆದುಕೊಂಡು ಹೋಗಬೇಕೆಂದು ಕಟ್ಟಪ್ಪಣೆ ಮಾಡಿ ಅದನ್ನು ಕಾರ್ಯರೂಪಕ್ಕೆ ತಂದಿದ್ದೇನೆ, ಯಾರು ಆ ರೀತಿ ಮಾಡಿಲ್ಲವೆಂದು ಹೇಳುವುದು ಸರಿಯಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಪ್ರವಾಸ ಮಾಡಿದಂತಹ ಕಾಲದಲ್ಲಿ ನನ್ನ ಗಮನಕ್ಕೆ ಬಂದಂತಹ ವಿಚಾರಗಳನ್ನು ಹೇಳುತ್ತಿದ್ದೇನೆ. ನೀವು ಆ ಕೆಲಸವನ್ನು ಮಾಡಿದ್ದೀರಿ ಅದನ್ನು ನಾನು ಕೇಳಿದ್ದೇನೆ. ಆದರೆ ಉಳಿದವರು ಕೂಡ ಆ ರೀತಿ ಮಾಡಬೇಕು. ನಾನು ಹೇಳುವಾಗ ಕೆಲವರು ಎಂದು ಹೇಳಿದ್ದೇನೆ. ನಾನು ಎಲ್ಲರ ಬಗ್ಗೆ ಹೇಳುವುದಿಲ್ಲ. ಮಾನ್ಯ ರಾಮಯ್ಯನವರು ಆ ಒಂದು ಪದ್ಧತಿಯನ್ನು ಹಾಕಿಕೊಟ್ಟಿದ್ದಾರೆ, ಎಲ್ಲಾ ಮಂತ್ರಿಗಳಿಂದಲೂ ಅದು ಕಾರ್ಯರೂಪಕ್ಕೆ ಬರಲಿಲ್ಲ. ಬರಗಾಲ ನಿಧಿಗೆ ದಾನಿಗಳು ಕೊಡುತ್ತಿದ್ದಾರೆ, ಕೇಂದ್ರ ಸರ್ಕಾರದ ಮನವೊಲಿಸಿ ಈ ರೀತಿ ಕೊಡುವ ಹಣಕ್ಕೆ ಇನ್‌ಕಂ ಟ್ಯಾಕ್ಸ್ ಮನ್ನಾ ಮಾಡಿಸಿದರೆ, ಹೆಚ್ಚು ದಾನಿಗಳು ಹಣ ಕೊಡುವುದಕ್ಕೆ ಮುಂದೆ ಬರುತ್ತಾರೆ. ಆ ದೃಷ್ಟಿಯಿಂದ ತಾವು ಅದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ರೈತನ ಸಮಸ್ಯೆಗಳು ಬಗೆಹರಿಯುವುದಿಲ್ಲ ಅಂದರೆ ನನಗೆ ಆಶ್ಚರ್ಯವಾಯಿತು. ಒಬ್ಬೊಬ್ಬರು ಒಂದೊಂದು ಮಾತು ಹೇಳುತ್ತಾರೆ, ಮಾನ್ಯ ಕಂದಾಯ ಸಚಿವರು ಬರಗಾಲ ಪ್ರದೇಶಗಳಲ್ಲಿರತಕ್ಕ ದನಕರುಗಳಿಗೆ ಮೇವಿಗಾಗಿ ಕಾಡಿನಲ್ಲಿ ಬೆಳೆದಿರುವ ಹುಲ್ಲನ್ನು ಸಂಗ್ರಹ ಮಾಡಿ ಹಂಚುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಕಾಡಿನಲ್ಲಿರುವ ಹುಲ್ಲನ್ನು ಅರಣ್ಯಾಧಿಕಾರಿಗಳ ಮುಖಾಂತರ ಕೊಯ್ದು ಸಂಗ್ರಹಿಸಿದಾಗ ಟನ್‌ಗೆ ೩೫೦ರಿಂದ ೪೦೦ ರೂಪಾಯಿ ಬೆಲೆ ಬರುತ್ತದೆಂದು ಹೇಳಿದ್ದಾರೆ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸಹ ಅರಣ್ಯ ಪ್ರದೇಶಗಳಲ್ಲಿ ದೊರೆಯುವ ಹುಲ್ಲನ್ನು ಕೊಯ್ದು ಸಾಗಿಸಲು ವ್ಯವಸ್ಥೆ ಮಾಡಲಾಗಿದೆ' ಎಂದು ಹೇಳಿದ್ದಾರೆ. ಸರ್ಕಾರ ಕಾಡಿನಲ್ಲಿರುವ ಹುಲ್ಲನ್ನು ಕೊಯ್ದು ಸಂಗ್ರಹಿಸಲು ಟನ್ ಒಂದಕ್ಕೆ ೩೫೦ರಿಂದ ೪೦೦ ರೂಪಾಯಿ ಖರ್ಚು ಬರುತ್ತದೆ. ಆದರೆ ಅದೇ ನಮ್ಮ ರೈತ ಹುಲ್ಲನ್ನು ಬೆಳೆಸಿ ಕೊಟ್ಟರೆ ಟನ್ ಒಂದಕ್ಕೆ ೨೫೦ ರೂಪಾಯಿ ಬೆಲೆ. ಇದು ಕಂದಾಯ ಮಂತ್ರಿಗಳು ಹೇಳಿದಂತಹ ಮಾತು, ನನಗೆ ಬಹಳ ನೋವಾಯಿತು, ರೈತರನ್ನು ಬಹಳ ದಿವಸಗಳಿಂದ ಶೋಷಣೆ ಮಾಡುತ್ತಿದ್ದಾರೆ. ಅಧಿಕಾರದಲ್ಲಿರುವಂತಹ ನೀವು ಕೇಂದ್ರ ಸರ್ಕಾರದ ಮನವೊಲಿಸುವಂತಹ ಯಾವುದೇ ಕೆಲಸವನ್ನು ನೀವು ಮಾಡಿಲ್ಲ, ಆ ಕೆಲಸವನ್ನು ನೀವು ಮೊದಲು ಮಾಡಿ. ಮೂರು ವರ್ಷಗಳಿಂದ ಬರಗಾಲ ಪರಿಸ್ಥಿತಿ ಇದೆ. ದನಕರುಗಳಿಗೆ ಮೇವು ಇಲ್ಲ. ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಒದಗಿಸುವಂತಹ ಸ್ಥಿತಿಯಲ್ಲಿ ನೀವು ಇಲ್ಲ. ನಾನು ಮತ್ತೊಮ್ಮೆ ಸರ್ಕಾರಕ್ಕೆ ಸಲಹೆ ಕೊಡುತ್ತೇನೆ, ಇಂತಹ ಪರಿಸ್ಥಿತಿಯಲ್ಲಿ ರೈತ ಇರುವಾಗ ಅವನು ಬದುಕಿರುವವರೆಗೂ ಜೀವನ ಪರ್ಯಂತ ಸಾಲ ತೆಗೆದುಕೊಂಡು ಅವನು ಹಾಳಾಗುವುದು ಬೇಡ. ನೀವು ಸಾಲ ಕೊಡುವುದು ಅವನು ಬಡ್ಡಿ ಕಟ್ಟುವುದು ಬೇಡ. ಸಾಲ ತೆಗೆದುಕೊಂಡು ಸಾಲ ತೀರಿಸುವುದೇ ಆದರೆ ಅವನು ಮಕ್ಕಳು ಮರಿಗಳ ಮದುವೆ ಮುಂಜಿ ಮಾಡುವುದು ಬೇಡವೆ ? ಇವುಗಳಿಗೆಲ್ಲ ಶಾಶ್ವತವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಾ ? ಭೀಕರ ಬರಗಾಲ ಬಂದಂತಹ ಸಂದರ್ಭದಲ್ಲಿ ಒಂದು ವರ್ಷ ಬೇರೆ ಯಾವುದೇ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಆಗುವುದಿಲ್ಲವೆನ್ನುವ ಒಂದು ನಿಶ್ಚಯ ಮಾಡಿ ಆಗ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ನೀವು ಇನ್ನೂ ಹತ್ತಾರು ವರ್ಷಗಳ ಕಾಲ ಅಧಿಕಾರದಲ್ಲಿರಿ. ಬೇರೆ ಕಾಮಗಾರಿ ಕೆಲಸಗಳನ್ನು ನಿಲ್ಲಿಸಿ. ಬರ ಪರಿಹಾರ ಕಾರ್ಯವನ್ನು ಮಾತ್ರ ಮಾಡಿ. ಸರ್ಕಾರ ಈ ಸಲಹೆಯನ್ನು ಈ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ನಾನು ಅಪೇಕ್ಷೆ ಪಡುತ್ತೇನೆ. ನಾನು ನಿನ್ನೆ ಸದನದಲ್ಲಿ ಒಂದು ಮಾತನ್ನು ಹೇಳಿದಂತಹ ಸಂದರ್ಭದಲ್ಲಿ 'ಸುಳ್ಳು' ಎನ್ನುವ ಪದವನ್ನು ಬಳಸಿದಾಗ

ಅದನ್ನು ವಾಪಸ್ಸು ತೆಗೆದುಕೊಂಡು ಅಸತ್ಯವೆಂದು ಹೇಳಿದ್ದೇನೆ. ನನ್ನ ಕ್ಷೇತ್ರದ ಒಂದು ಉದಾಹರಣೆಯನ್ನು ಕೊಡುತ್ತೇನೆ. ಇದರ ಬಗ್ಗೆ ಪ್ರಶ್ನೆಯನ್ನು ಸಹ ಮಾಡಿದ್ದೆ. ನನ್ನ ಕ್ಷೇತ್ರದಲ್ಲಿ ೧೧ ಪಬ್ಲಿಕ್ ಹೆಲ್ತ್ ಯೂನಿಟ್‌ಗಳು ಇದ್ದು, ೧೧ ಯೂನಿಟ್‌ಗಳಲ್ಲಿ ೮ ಕಡೆ ಡಾಕ್ಟರುಗಳು ಕಳೆದ ಎಂಟು ತಿಂಗಳುಗಳಿಂದ ಇರಲಿಲ್ಲ, ಅದರ ಬಗ್ಗೆ ನಾನು ಪ್ರಸ್ತಾಪ ಮಾಡಿದಾಗ ಮಂತ್ರಿಗಳು ಇದೇ ಸದನದಲ್ಲಿ ಈ ಅಧಿವೇಶನ ಮುಗಿಯುವುದರೊಳಗೆ, ೮ ಕಡೆ ಡಾಕ್ಟರುಗಳನ್ನು ಕೊಡುವುದಕ್ಕೆ ಆಗುವುದಿಲ್ಲ, ೫ ಕಡೆ ಡಾಕ್ಟರುಗಳನ್ನು ಕೊಡುತ್ತೇನೆಂದು ಹೇಳಿದ್ದರು. ಬರಗಾಲ ಇರತಕ್ಕ ನಮ್ಮ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಶಾಸನಸಭಾ ಕ್ಷೇತ್ರಕ್ಕೆ ಇದುವರೆಗೆ ಒಬ್ಬ ಡಾಕ್ಟರನ್ನು ಪೋಸ್ಟ್ ಮಾಡಿಲ್ಲ. ಹೇಗೆ ನನ್ನ ಕ್ಷೇತ್ರಕ್ಕೆ ಮುಖ ತೋರಿಸುವುದು! ಭೀಕರ ಬರಗಾಲದ ಪ್ರದೇಶದಲ್ಲಿ ಜನ ರೋಗರುಜಿನಗಳಿಗೆ ತುತ್ತಾಗುವುದು ಸಹಜ. ಅದನ್ನು ನಿಮ್ಮಗಳ ಹತ್ತಿರ ಬಂದು ಹೇಳಿ ಔಷಧಿಯನ್ನು ಜಾಸ್ತಿ ಕೊಡಬೇಕೆಂದು ಹೇಳಿದಾಗ ಪಿ. ಎಚ್.ಸಿ.ಗೆ ಹೆಚ್ಚು ಔಷಧಿಯನ್ನು ಕೊಟ್ಟಿದ್ದಾರೆ. ಆದರೆ ಅದನ್ನು ವಿತರಣೆ ಮಾಡತಕ್ಕ ಡಾಕ್ಟರುಗಳು ಇಲ್ಲ ಅಂದರೆ ಅವರನ್ನು ಪೋಸ್ಟ್ ಮಾಡುವುದಕ್ಕೆ ಇನ್ನು ಎಷ್ಟು ವರ್ಷ ಬೇಕು? ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ಎಷ್ಟು ವರ್ಷ ಬೇಕು? ಅದೇ ರೀತಿ ದನಗಳ ಆಸ್ಪತ್ರೆಯ ಬಗ್ಗೆಯೂ ಕೂಡ ಅಷ್ಟೆ, ಜಾನುವಾರುಗಳಿಗೆ ಬರುತ್ತಿರುವಂತಹ ರೋಗ ರುಜಿನಗಳನ್ನು ತಡೆಗಟ್ಟಬೇಕಾದರೆ ದನಗಳ ಆಸ್ಪತ್ರೆ ಅತಿ ಅವಶ್ಯ. ಆದರೂ ನಮ್ಮ ಕ್ಷೇತ್ರಕ್ಕೆ ಒಂದು ದನಗಳ ಆಸ್ಪತ್ರೆಯನ್ನು ಕೊಟ್ಟಿಲ್ಲ. ಡಾಕ್ಟರ್ಸ್ ಇಲ್ಲ ಅಂದರೆ ಅದನ್ನು ವ್ಯವಸ್ಥೆ ಮಾಡುವ ಬಗ್ಗೆ ಏಕೆ ಯೋಚನೆ ಮಾಡಿಲ್ಲ? ನೀವು ಅಧಿಕಾರಕ್ಕೆ ಬಂದು ೩ ವರ್ಷಗಳನ್ನು ಕಳೆದಿದ್ದೀರಿ. ನನ್ನ ಕ್ಷೇತ್ರದಲ್ಲಿ ವೆಟರ್‌ನರಿ ಮೊಬೈಲ್ ವ್ಯಾನ್ ಇದೆ. ಅದನ್ನು ರಿಪೇರಿ ಮಾಡುವ ಬಗ್ಗೆ ನಾನೊಂದು ಸ್ಟಾರ್ಡ್ ಪ್ರಶ್ನೆಯನ್ನು ಕೇಳಿದ್ದೆ. ಅದನ್ನು ಅನ್‌ಸ್ಟಾರ್ಡ್ ಪ್ರಶ್ನೆಯನ್ನಾಗಿ ಮಾಡಿದ್ದಾರೆ. ಸುಮಾರು ಒಂದು ವರ್ಷದಿಂದಲೂ ಅದನ್ನು ರಿಪೇರಿ ಮಾಡಿಸಿಲ್ಲ. ಆದರೂ ಅದಕ್ಕಾಗಿ ನೇಮಕ ಮಾಡಿಕೊಂಡಂತಹ ಡ್ರೈವರ್‌ಗೆ ೩ ರಿಂದ ೪ ಸಾವಿರದವರೆಗೆ ಸಂಬಳವನ್ನು ಕೊಟ್ಟದ್ದಾರೆ. ಒಂದೂವರೆ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಆ ವ್ಯಾನನ್ನು ಕಳೆದ ೧೧ ತಿಂಗಳಿಂದ ರಿಪೇರಿ ಮಾಡಲಿಲ್ಲ. ಇದನ್ನು ನೋಡಿದಾಗ, ಸರ್ಕಾರ ಎದ್ದಿದೆಯೋ? ಮಲಗಿದೆಯೋ? ಎಂದು ಕೇಳಬೇಕಾಗುತ್ತದೆ, ಇದನ್ನು ನಾನು ಯಾರೋ ಒಬ್ಬ ಮಂತ್ರಿಗಳನ್ನು ಟೀಕೆ ಮಾಡುವುದಕ್ಕಾಗಿ ಹೇಳುತ್ತಿಲ್ಲ. ನಿಮ್ಮ ನಿಮ್ಮ ಅಧೀನದಲ್ಲಿರತಕ್ಕಂತಹ ಇಲಾಖೆಗಳ ಬಗ್ಗೆ ಚಿಂತನ ಮಾಡಿ ನಿಮ್ಮ ಅಧಿಕಾರಿಗಳನ್ನು ಅಧೀನದಲ್ಲಿಟ್ಟುಕೊಂಡು ಕೆಲಸ ಮಾಡದಿದ್ದರೆ ಹೇಗೆ! ನಾನು ಈ ಬಗ್ಗೆ ಅಧಿಕಾರಿಗಳ ಹತ್ತಿರವೂ ಕೂಡ ಹೋಗಿದ್ದೇನೆ. ಅಲ್ಲಿರತಕ್ಕಂತಹ ಡಿಸ್ಟ್ರಿಕ್ಟ್ ಆಫೀಸರ್ ಹತ್ತಿರ ಸಚಿವಾಲಯದಲ್ಲಿ ಇರತಕ್ಕ ಅಧಿಕಾರಿಗಳ ಹತ್ತಿರ ೧೦-೧೦ ಸಲ ಹೋಗಿದ್ದೇವೆ. ನಮ್ಮ ಜಿಲ್ಲಾ ಮಂತ್ರಿಗಳಾದ ಶ್ರೀಮಾನ್ ಜೆ. ಹೆಚ್. ಪಟೇಲ್‌ರವರ ಹತ್ತಿರ ಜಿಲ್ಲಾ ಮಟ್ಟದಲ್ಲಿ ನಡೆದಂತಹ ಸಭೆಯಲ್ಲಿ ಈ ವಿಚಾರವನ್ನು ತಿಳಿಸಿದಾಗ ಅವರು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ತಕ್ಷಣವೇ ರಿಪೇರಿ ಮಾಡಿ, ಅದಕ್ಕೆ ಹಣವನ್ನು ಕೊಡಿಸುವಂತಹದ್ದು ನನ್ನ ಜವಾಬ್ದಾರಿ ಎಂಬುದಾಗಿ ಹೇಳಿ ನಾಲ್ಕುವರೆ ತಿಂಗಳಾಯಿತು. ಆದರೆ ಇದುವರೆವಿಗೂ ಏನೊಂದು ವ್ಯವಸ್ಥೆಯಾಗಿಲ್ಲ. ಮನೆಕಟ್ಟಿಕೊಳ್ಳುವ ವಿಚಾರದಲ್ಲಿ ಹೇಳುವುದಾದರೆ, ನೀವು ಅಧಿಕಾರಕ್ಕೆ ಬಂದು ೩ ವರ್ಷವಾಯಿತು. ಬಡವರು ಕೂಲಿಗಾರರು ಗುಡಿಸಲುಗಳನ್ನು ಹಾಕಿಕೊಂಡು ಜೀವನ ಮಾಡತಕ್ಕಂತಹವರು. ಅವರು ಗುಡಿಸಲು ಹಾಕಿಕೊಂಡಿರುವಂತಹ ಜಾಗ ಪಂಚಾಯ್ತಿಗೆ ಸೇರಿರತಕ್ಕಂತಹದ್ದು. ಆ ಜಾಗ ನಮ್ಮದು ಎಂಬುದನ್ನು ಗುರುತು ಮಾಡಿ ಅವರಿಗೆ ಹಕ್ಕುಪತ್ರವನ್ನು ಇದುವರೆವಿಗೂ ಕೊಟ್ಟಿಲ್ಲ. ಚುನಾವಣೆ ಸಂದರ್ಭ ಬಂದಾಗ ಹಕ್ಕು ಪತ್ರಗಳನ್ನು ಕೊಡುವ ನಟನೆ ಪ್ರಾರಂಭವಾಗುತ್ತದೆ. ಇಡೀ ರಾಜ್ಯದಲ್ಲಿ ಅಂಕಿ ಅಂಶಗಳನ್ನು ತರಿಸಿಕೊಂಡು ನೋಡುವುದಾದರೆ. ಎಲ್ಲಿ ಆ ರೀತಿಯ ಹಕ್ಕುಪತ್ರಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿದೆಯೋ ಅಂತಹ ಕಡೆಗಳಲ್ಲೂ ಕೊಟ್ಟಿರುವುದಿಲ್ಲ. ನನ್ನ ಕ್ಷೇತ್ರದಲ್ಲಿ ಕೂಡಾ ಕೊಟ್ಟಿರಲಿಲ್ಲ, ಕೊನೆಗೆ ಅವರೆಲ್ಲರನ್ನೂ ಕೂಡಿಕೊಂಡು ಸತ್ಯಾಗ್ರಹ ಮಾಡಿದ ಮೇಲೆ ತಹಸಿಲ್ದಾರ್‌ರವರು ೧-೨ ತಿಂಗಳಲ್ಲಿ ಕೊಡುತ್ತೇವೆಂದು ಪತ್ರದ ಮೂಲಕ ತಿಳಿಸಿದ್ದಾರೆ. ಇರತಕ್ಕ ಆಡಳಿತವನ್ನು ಸುಧಾರಣೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ. ರಾಜ್ಯಪಾಲರ ಭಾಷಣದಲ್ಲಿ ಮುಂದೆ ಮಾಡಬೇಕಾಗಿರುವ ಹೊಸ ಹೊಸ ಕಾರ್ಯಕ್ರಮಗಳ ಬಗ್ಗೆ ಏನು ಹೇಳಿದ್ದೀರಿ? ರಾಜ್ಯಪಾಲರ ಭಾಷಣದಲ್ಲಿ ಹಸಿರು ಕಾರ್ಡಿನ ಬಗ್ಗೆ ಹೇಳಿದ್ದೀರಿ, ನೀವು ಕೊಡುತ್ತಿರುವಂತಹ ಸೀರೆ ದೋತಿಯ ಬಗ್ಗೆ ಹೇಳಿದ್ದೀರಿ. ಆದರೆ ಮುಂದೆ ಏನು ಮಾಡುತ್ತೇವೆನ್ನುವುದರ ಬಗ್ಗೆ ಏನು ಹೇಳಿದ್ದೀರಿ? ಈಗ ಇರತಕ್ಕ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಏನಾದರೂ ಹೇಳಿದ್ದೀರಾ?

ಸೀಮೆ ಎಣ್ಣೆ ವಿಚಾರವಾಗಿ ಹೇಳುವುದಾದರೆ ವಿದ್ಯುಚ್ಛಕ್ತಿ ಕೊರತೆ ನಮ್ಮ ರಾಜ್ಯದಲ್ಲಿದೆ. ೨-೨೮ ರೂ.ಗೆ ಒಂದು ಲೀಟರ್ ಸೀಮೆ ಎಣ್ಣೆಯನ್ನು ಮಾರಾಟ ಮಾಡಬೇಕೆಂದು ತಿಳಿಸಿದ್ದೀರಿ. ಆದರೆ ರಾಜ್ಯದಲ್ಲಿರುವ ಎಲ್ಲ ಮಾರಾಟಗಾರರು ೨-೬೦ ರೂನಿಂದ, ೨-೭೦ ರೂಪಾಯಿಗಳವರೆಗೆ ಒಂದು ಲೀ. ಸೀಮೆ ಎಣ್ಣೆಯನ್ನು ಮಾರಾಟ ಮಾಡುತ್ತಿದ್ದಾರೆ. ಒಂದು ಲೀಟರ್ ೨೦ರಿಂದ ೨೫ ಪೈಸೆಯಷ್ಟು ಜಾಸ್ತಿ ತೆಗೆದುಕೊಂಡು ಮಾರಾಟ ಮಾಡುತ್ತಿದ್ದಾರೆ. ಇನ್ನು ಅಕ್ಕಿಯ ವಿಚಾರದಲ್ಲಿ ಹೇಳುವುದಾದರೆ ಪ್ರಾರಂಭದಲ್ಲಿ ತುಂಬ ಒಳ್ಳೆಯ ಅಕ್ಕಿ ಬಂತು. ನಂತರದ ತಿಂಗಳುಗಳಲ್ಲಿ ಬಂದಂತಹ ಅಕ್ಕಿ ಯಾವ ರೀತಿ ಇದೆ ಎಂದರೆ, ಬರೀ ತೌಡು ಇರುವಂತಹುದು ಹಾಗೂ ಕ್ರಿಮಿ ಕೀಟಗಳಿಂದ ತುಂಬಿರುವಂತಹದ್ದು, ತಿನ್ನುವುದಕ್ಕೆ ಯೋಗ್ಯವಾಗಿಲ್ಲದೇ ಇರುವಂತಹ ಅಕ್ಕಿಯನ್ನು ಬಿಡುಗಡೆ ಮಾಡಿದ್ದಾರೆ. ಇದನ್ನು ನಮ್ಮ ಆಹಾರ ಸಚಿವರ ಹತ್ತಿರ ಹೇಳಿದಾಗ ಅವರು ಹೇಳಿದರು ಇದು ನಮ್ಮ ರಾಜ್ಯದ ಅಕ್ಕಿಯಲ್ಲ, ಬೇರೆ ರಾಜ್ಯದಿಂದ ಬಂದಿರತಕ್ಕಂತಹದ್ದು ಅಂತ. ಶಿವಮೊಗ್ಗದ ಅಕ್ಕಿ ಎಂದರೆ ಬೆಂಗಳೂರು ನಗರದಲ್ಲಿರುವ ಅಧಿಕಾರಿಗಳು ಅದನ್ನು ನಮಗೆ ಕೊಡಿ ಎಂಬುದಾಗಿ ಹೇಳುತ್ತಾರೆ. ಅಂತಹ ಪ್ರದೇಶದಲ್ಲಿ ಬೆಳೆಯುವಂತಹ ಅಕ್ಕಿಯನ್ನು ಆ ಪ್ರದೇಶದವರಿಗೆ ಹಂಚದೆ, ಅಲ್ಲಿರತಕ್ಕ ಬಡವನಿಗೆ ಕೊಡುವಂತಹ ಅಕ್ಕಿ ಉಪಯೋಗಿಸುವುದಕ್ಕೂ ಸಾಧ್ಯವಾಗದೇ ಇರುವಂತಹದ್ದು. ಈ ರೀತಿಯ ವಿಚಿತ್ರ ವ್ಯವಸ್ಥೆ ಅಲ್ಲಿದೆ. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಅದನ್ನು ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಿ. ನಾನು ಅಂದಾಜು ಸಮಿತಿಯ ಸದಸ್ಯನಾಗಿದ್ದೇನೆ. ನಾವು ಎಲ್ಲ ಜಿಲ್ಲೆಗಳಲ್ಲೂ ಪ್ರವಾಸ ಮಾಡಿ ಬಂದಿದ್ದೇವೆ. ಅದರ ಬಗ್ಗೆ ವರದಿಯೊಂದನ್ನು ಸದನಕ್ಕೆ ಕೊಡುವವರಿದ್ದೇವೆ. ಅದರ ವಿವರಗಳನ್ನು ನಾನು ಹೇಳುವುದಿಲ್ಲ. ಆ ಸಮಿತಿಗೆ ಅಧ್ಯಕ್ಷರಾದ ತಾವುಗಳು ಅಧ್ಯಕ್ಷ ಪೀಠದಲ್ಲಿದ್ದ (ಶ್ರೀ ನಾರಾಯಣರಾವ್‌ರವರನ್ನು ಕುರಿತು) ವರದಿಯನ್ನು ಕೊಡುವವರಿದ್ದೀರಿ. ಅದರ ವಿವರಗಳನ್ನು ನಾನು ಹೇಳುವುದಿಲ್ಲ, ಮುಖ್ಯವಾದ ಉದ್ದೇಶವೇನೆಂದರೆ, ರೈತರ ಕೂಲಿಕಾರರ ಪರಿಸ್ಥಿತಿಯನ್ನು ಸುಧಾರಣೆ ಮಾಡಬೇಕಾದುದು ಗ್ರಾಮಲೆಕ್ಕಿಗರು ಯಾರು ಇದ್ದಾರೆ, ಅವರು ತಮ್ಮನ್ನು ಎಲ್ಲಿಗೆ ಪೋಸ್ಟ್ ಮಾಡಿದ್ದಾರೋ ಅದೇ ಸ್ಥಳದಲ್ಲಿ ವಾಸ ಮಾಡಬೇಕೆಂಬುದು ನಮ್ಮೆಲ್ಲರ ಮೂಲ ಉದ್ದೇಶವಾಗಿತ್ತು. ರಾಜ್ಯದ ಎಲ್ಲ ಕಡೆ ಪ್ರವಾಸ ಮಾಡಿ ವರದಿಯನ್ನು ಕೊಡಬೇಕಾಗಿರುವ ಸಂದರ್ಭದಲ್ಲಿ, ಕಂದಾಯ ಇಲಾಖೆಯ ನೌಕರರು ಒಂದು ದಿವಸ ಕಛೇರಿಯಲ್ಲಿ ಕುಳಿತು ಸತ್ಯಾಗ್ರಹ ಮಾಡಿ, ನಂತರ ಮಾನ್ಯ ಕಂದಾಯ ಮಂತ್ರಿಗಳಾದ ಶ್ರೀ ಎಸ್. ಆರ್. ಬೊಮ್ಮಾಯಿಯವರನ್ನು ಭೇಟಿ ಮಾಡಿ, ಗ್ರಾಮಗಳಲ್ಲಿ ವಾಸಕ್ಕೆ ಸರಿಯಾದ ಮನೆಗಳಿಲ್ಲ, ಎಂದು ಹೇಳಿದ ತಕ್ಷಣವೇ ಮಾನ್ಯ ಕಂದಾಯ ಮಂತ್ರಿಗಳು, ತಕ್ಷಣವೇ ನಿಮ್ಮನ್ನು ಪೋಸ್ಟ್ ಮಾಡಿದ ಗ್ರಾಮಗಳಲ್ಲಿ ನೀವು ವಾಸ ಮಾಡದೇ ಇದ್ದರೂ ಪರವಾಗಿಲ್ಲ, ತಾಲ್ಲೂಕು ಕೇಂದ್ರಗಳಲ್ಲೇ ವಾಸ ಮಾಡಿಕೊಂಡಿರಿ ಎಂಬುದಾಗಿ ಹೇಳಿದರೆ ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ? ಅವರು ಬಂದು ಕೇಳಿದಾಗಲೂ, ನಿಮ್ಮನ್ನು ನೌಕರಿಗೆ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿಹಳ್ಳಿಗಳಲ್ಲಿ ನಿಮಗೋಸ್ಕರ ಬಂಗಲೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿರಲಿಲ್ಲ. ನೀವೂ ಗ್ರಾಮದಲ್ಲಿ ಹುಟ್ಟಿರತಕ್ಕಂತಹವರೆ, ಹಳ್ಳಿಯಲ್ಲಿರತಕ್ಕ ಪರಿಸ್ಥಿತಿಗೆ ಹೊಂದಿಕೊಂಡು ವಾಸ ಮಾಡಬೇಕೆಂದು ಹೇಳುವುದಕ್ಕಾಗುತ್ತಿರಲಿಲ್ಲವೇ? ಈ ವಿಚಾರದಲ್ಲಿ ತುಮಕೂರು ಜಿಲ್ಲಾಧಿಕಾರಿಗಳು ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅದೇ ರೀತಿ ಚಿಕ್ಕಮಂಗಳೂರು ಜಿಲ್ಲಾಧಿಕಾರಿಗಳೂ ಕೂಡ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅಂತಹ ಸಮಯದಲ್ಲಿ ಸರ್ಕಾರವೇ ಈ ರೀತಿಯ ಘೋಷಣೆ ಮಾಡಿದರೆ, ಆ ಅಧಿಕಾರಿಗಳು ಕೆಲಸ ಮಾಡುವಂತಹ ಬಗೆಯಾದರೂ ಹೇಗೆ? ಆದ್ದರಿಂದ ಇಂತಹ ಕೆಲವು ನ್ಯೂನತೆಗಳನ್ನು ನಾವು ನಿಮ್ಮ ಗಮನಕ್ಕೆ ತಂದಿದ್ದೇವೆ. ತಮ್ಮಲ್ಲಿ ಅನೇಕ ಜನ ಹೊಸದಾಗಿ ಮಂತ್ರಿಗಳಾಗಿ ಬಂದಿದ್ದೀರಿ. ಚಿಕ್ಕ ವಯಸ್ಸಿನವರು, ತರುಣರೂ ಇದ್ದೀರಿ. ನಿಮ್ಮ ನಾಯಕರು ಹೋಗುವ ದಾರಿ ಏನಾದರೂ ಸರಿಯಿಲ್ಲದಿದ್ದರೆ, ಅವರನ್ನು ಸರಿದಾರಿಗೆ ತರುವುದಕ್ಕೆ ಪ್ರಯತ್ನ ಮಾಡಿ. ಈ ಸದನದಲ್ಲಿ ಶಾಸಕನಾಗಿ ಅದರಲ್ಲೂ ವಿರೋಧ ಪಕ್ಷದ ಸ್ಥಾನದಲ್ಲಿದ್ದುಕೊಂಡು ಕೆಲವು ಸಲಹೆ ಸೂಚನೆಗಳನ್ನು ಕೊಡುವಂತಹ ಕಾಲದಲ್ಲಿ ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳುತ್ತೇನೆ. ಬಜೆಟ್ ಭಾಷಣವನ್ನು ಚರ್ಚೆ ಮಾಡುವುದಕ್ಕೆ ಮೊದಲೇ ಈ ರಾಜ್ಯದ ರೈತರು ಏನು ಇದ್ದಾರೆ, ಅವರ ಸಾಲವನ್ನು ಮನ್ನಾ ಮಾಡುವುದರ ಬಗ್ಗೆ ಸರ್ಕಾರ ಖಂಡಿತವಾಗಿ ಚಿಂತನೆ ಮಾಡಬೇಕು. ಏತಕ್ಕೆಂದರೆ ಆ ರೈತ ಸಮುದಾಯದ ಸಹಕಾರದಿಂದ ಅಧಿಕಾರಕ್ಕೆ ಬಂದಂತಹವರು ನೀವು. ನಂತರ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಅಗತ್ಯಕ್ಕೆ ಬೇಕಾದ ಅಂದರೆ ೩೦೦ ಅಡಿಗಿಂತ ಹೆಚ್ಚು ಆಳವನ್ನು ತೆಗೆಯುವಂತಹ

ರಿಗ್‌ಗಳನ್ನು ಕೊಡುಕೊಳ್ಳಬೇಕಾಗಿದೆ ಎಂಬುದಾಗಿ ಸರ್ಕಾರವೇ ಹೇಳಿದೆ. ಅದರ ಬಗ್ಗೆ ಈಗಾಗಲೇ ತೀರ್ಮಾನ ಮಾಡಿರಬೇಕಾಗಿತ್ತು. ಇನ್ನು ಮೇ-ಜೂನ್ ತಿಂಗಳು ಬಂದಾಗ ಪರಿಸ್ಥಿತಿ ಏನಾಗಬಹುದು ಎಂಬುದನ್ನು ಯೋಚನೆ ಮಾಡಿದ್ದೀರಾ? ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಟೈಮು ಚೆನ್ನಾಗಿದೆ. ಏಕೆಂದರೆ ಮೂರು ತಿಂಗಳವರೆಗೆ ನಾವು ನಮ್ಮ ಕ್ಷೇತ್ರಗಳಿಗೆ ಹೋಗುವಂತಿಲ್ಲ. ಶನಿವಾರ-ಭಾನುವಾರ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋದರೂ ಅಧಿಕಾರಿಗಳು ಸಿಕ್ಕುವುದಿಲ್ಲ, ಜನ ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ. ಶನಿವಾರ-ಭಾನುವಾರ ನಿಮ್ಮ ಅಧಿಕಾರಿಗಳನ್ನು ಆಯಾ ಕಛೇರಿಯಲ್ಲಿರುವುದಕ್ಕೆ ಹೇಳಿ. ಶಾಸಕರು ಹೋದಾಗ ಸಭೆಗಳ ವ್ಯವಸ್ಥೆ ಮಾಡುವುದಕ್ಕೆ ನಿಮ್ಮ ಅಧಿಕಾರಿಗಳಿಗೆ ಹೇಳಿ. ಬರೀ ಘೋಷಣೆ ಮಾಡುವುದನ್ನು ಇನ್ನಾದರೂ ಬಿಡಿ. ಕೊಳವೆ ಬಾವಿಗಳನ್ನು ಕೊರೆಯುವುದರಲ್ಲೂ ಅನ್ಯಾಯ ಮಾಡಿದ್ದೀರಿ, ಅವರಿಗೆ ದುಡ್ಡನ್ನು ಕೊಟ್ಟಿಲ್ಲ. ನಮ್ಮ ಶಿವಮೊಗ್ಗ ಜಿಲ್ಲೆಯ ಉದಾಹರಣೆಯನ್ನೇ ಹೇಳುವುದಾದರೆ, ಅಲ್ಲಿ ಕೊಳವೆ ಬಾವಿಗಳನ್ನು ತೆಗೆಯುವ ಸಲುವಾಗಿ ಹಣವನ್ನೇ ಕೊಟ್ಟಿಲ್ಲ. ಇಲ್ಲಿ ಮಾನ್ಯ ಕಂದಾಯ ಸಚಿವರನ್ನು ಕೇಳಿದಾಗ ಅದನ್ನು ಪರಿಶೀಲನೆ ಮಾಡುತ್ತೇನೆ ಎಂಬುದಾಗಿ ಹೇಳಿದಾಗ ನನ್ನ ಮನಸ್ಸಿಗೆ ನೋವಾಯಿತು. ಅದಕ್ಕಾಗಿ ಸಭೆಯಿಂದ ಹೊರಗೆ ಹೋಗಬೇಕಾಯಿತು. ಇದರಿಂದ ನನಗೆ ಪತ್ರಿಕೆಯಲ್ಲಿ ಪ್ರಚಾರ ಬೇಕೆಂಬುದಾಗಿ ಮಾಡಿದ್ದಲ್ಲ. ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ಇತ್ತೀಚೆಗೆ ಅದು ಕಡಿಮೆಯಾಗಿದೆ. ಯುವಕ ಪ್ರಧಾನಿ ಶ್ರೀಮಾನ್ ರಾಜೀವ್ ಗಾಂಧಿಯವರು ಹೊಸ ವ್ಯವಸ್ಥೆಯನ್ನು ರಾಜಕೀಯದಲ್ಲಿ ತರಬೇಕೆಂಬ ಉದ್ದೇಶದಿಂದ ಪಕ್ಷಾಂತರ ನಿಷೇದ ಮಸೂದೆಯನ್ನು ತಂದರು.

ಗೊಂದಲ

ಒಳ್ಳೆಯ ಕೆಲಸವನ್ನು ಮಾಡಿದಾಗ ಅದನ್ನು ಹೇಳಬೇಕು. ಆ ರೀತಿಯ ಪಕ್ಷಾಂತರ ನಿಷೇದ ಮಸೂದೆಯನ್ನು ಜಾರಿಗೆ ತಂದಿದ್ದರಿಂದ ನಿಮ್ಮ ಸರ್ಕಾರ ಬದ್ರವಾಗಿದೆ.

ಶ್ರೀ ಜಿ. ನಾರಾಯಣಕುಮಾರ್.— ಜನತಾ ಸರ್ಕಾರದಲ್ಲಿ ಅವಕಾಶವಾಗಲಿಲ್ಲವೆಂದು ಆ ರೀತಿ ಹೇಳುತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇವತ್ತು ನೀವು ಅಧಿಕಾರಕ್ಕೆ ಬಂದಿದ್ದರೂ ಅದರಿಂದ ನಮಗೇನೂ ಲಾಭವಾಗುವುದಿಲ್ಲ. ಅವರು ಅಧಿಕಾರಕ್ಕೆ ಬಂದರೂ (ಕಾಂಗ್ರೆಸ್‌ನವರನ್ನು ಕುರಿತು) ನಮಗೇನು ಲಾಭವಾಗುವುದಿಲ್ಲ. ಆದರೆ ನಾವು ಹೇಳುವಂತಹ ಸಲಹೆ ಉತ್ತಮವಾದುದಾಗಿದ್ದರೆ, ಅದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ವಿನಾಶ ಕಾಲಕ್ಕೆ ವಿಪರೀತ ಬುದ್ಧಿ ಎಂಬ ಗಾದೆಯಂತೆ, ನೀವು ಅಧಿಕಾರವನ್ನು ನಡೆಸಿಕೊಂಡು ಹೋಗುತ್ತಿದ್ದೀರಿ. ಒಳ್ಳೆಯ ರೀತಿಯಲ್ಲಿ ಆಡಳಿತವನ್ನು ಮಾಡಿ ಎಂಬುದಾಗಿ ಸಲಹೆ ಕೊಡುತ್ತಿದ್ದೇವೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.— ನಾವು ಸರಿಯಾಗಿ ಆಡಳಿತವನ್ನು ಮಾಡಿದರೆ ನಾವು ಇನ್ನೂ ಅಧಿಕಾರದಲ್ಲಿ ಮುಂದುವರಿಯುತ್ತೇವೆ. ಆಡಳಿತವನ್ನು ಸರಿಯಾಗಿ ನಡೆಸದಿದ್ದರೆ ಅದರಿಂದ ನಿಮಗೇ ಅನುಕೂಲ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಒಳ್ಳೆಯ ರೀತಿಯಲ್ಲಿ ಆಡಳಿತವನ್ನು ಮಾಡಿ, ಜನತೆಗೆ ಸಹಾಯ ಸೌಲಭ್ಯವನ್ನು ದೊರಕಿಸಿಕೊಡಿ ಎಂಬುದಾಗಿ ಸಲಹೆ ಮಾಡುತ್ತಾ, ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಭೀಕರ ಬರಗಾಲವನ್ನು ಎದುರಿಸುವುದಕ್ಕೆ ಎಲ್ಲರ ಸಹಕಾರವನ್ನು ತೆಗೆದುಕೊಂಡು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಅಲ್ಲದಿದ್ದರೆ ಹಳ್ಳಿಗಳಲ್ಲಿ ಜನ ದಿಕ್ಕೆಟ್ಟು ಚಳುವಳಿ ಹೂಡಿಯಾರು. ಅದಕ್ಕೆ ಅವಕಾಶ ಮಾಡಿಕೊಡಬೇಡಿ ಎಂಬುದಾಗಿ ಮತ್ತೊಮ್ಮೆ ಕೇಳಿಕೊಂಡು ಈ ಸಂದರ್ಭದಲ್ಲಿ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ಉಪಾಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

೨-೩೦ ಪಿ. ಎಂ.

† ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗುರುಮಿಟ್‌ಕಲ್).—ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಕೃಷ್ಣಪ್ಪನವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾ ಜನತಾ ಸರ್ಕಾರ ಏನು ಮಾಡಿದೆ ಮತ್ತು ಮುಂದೆ ಏನು ಮಾಡುತ್ತದೆಂದು ಹೇಳಿದ್ದಾರೆ. ಆದರೆ ಅವರು ಮನಸ್ಸು ಬಿಚ್ಚಿ ಹೇಳಲಿಲ್ಲ. ಸುಮ್ಮನೆ ಏನೋ ಹೇಳಬೇಕಾಗಿತ್ತು ಹೇಳಿದರು ಎಂದು ಅವರ ಮಾತಿನ ಮೇಲೆ ಅರ್ಥವಾಗುತ್ತದೆ. ಇವತ್ತು ಸುಮಾರು ೧೪ ಪುಟದ ರಾಜ್ಯಪಾಲರ ಭಾಷಣದಲ್ಲಿ ೫ ಪುಟ ಬರಗಾಲದ ಬಗ್ಗೆ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲಸ ಕಾರ್ಯದ ಬಗ್ಗೆ ಹಾಗೂ ಅದಕ್ಕೆ ಯಾವ ರೀತಿ ಹಣ ಖರ್ಚು ಮಾಡುತ್ತಿದ್ದಾರೆಂಬ ಬಗ್ಗೆ ಹೇಳಿದ್ದಾರೆ. ಉಳಿದ ಪುಟಗಳಲ್ಲಿ ೧೯೮೪-೮೫ರಲ್ಲಿ ಏನು ರಾಜ್ಯಪಾಲರು ಭಾಷಣ ಮಾಡಿದ್ದರು. ಅದರ ಪುನರಾವರ್ತನೆಯಾಗಿದೆ. ಹೊಸ ಕಾರ್ಯಕ್ರಮಗಳು ಏನೂ ಇಲ್ಲ. ಹಿಂದೆ ತಾವು ಕೊಟ್ಟಂತ ವಚನಗಳು ಏನು ಇದ್ದವು ಅವನ್ನು ಫುಲ್‌ಫಿಲ್ ಮಾಡಿದ್ದು, ಫಿಸಿಕಲ್ ಅಚೀವ್‌ಮೆಂಟ್ ಯಾವುದನ್ನೂ ಇದರಲ್ಲಿ ತೋರಿಸಿಲ್ಲ. ಅದಕ್ಕಾಗಿ ನಾನು ಇದನ್ನು ವಿರೋಧ ಮಾಡಬೇಕಾಗಿದೆ. ವಿರೋಧ ಮಾಡತಕ್ಕದ್ದು ಏಕೆಂದರೆ ಅವರು ನುಡಿದಂತೆ ನಡೆದಿಲ್ಲ ಮತ್ತು ಇವತ್ತು ಜನತೆಗೆ ಏನು ಭರವಸೆ ಕೊಟ್ಟಿದ್ದರು ಆ ರೀತಿ ನಡೆದುಕೊಂಡಿಲ್ಲ. ಅದರಿಂದ ನಾವೆಲ್ಲರೂ ಬೇಸರಪಟ್ಟಿದ್ದೇವೆ ಮತ್ತು ಇಡೀ ರಾಜ್ಯದ ಜನತೆ ಬೇಸರಪಟ್ಟಿದೆ. ಯಾರಿಗಾದರೂ ನೇರವಾಗಿ ಹಳ್ಳಿಗೆ ಹೋಗಿ ನೋಡಿದರೆ ಪರಿಸ್ಥಿತಿ ಗೊತ್ತಾಗುತ್ತದೆ. ಬರಗಾಲದ ಅಧ್ಯಯನದ ಸಮಿತಿಯ ಜೊತೆಯಲ್ಲಿ ತಾವು ಬಂದಿದ್ದಿರಿ. ಅಲ್ಲಿ ಕೆಲಸ ಹೇಗೆ ನಡೆದಿದೆ ಎಂಬುದನ್ನು ನೋಡಿದ್ದೀರಿ. ಅಧಿಕಾರಿಗಳ ಹತ್ತಿರ ಮೀಟಿಂಗ್ ಮಾಡಿದ್ದೀರಿ. ಅವರು ಸರ್ಕಾರದ ಬಗ್ಗೆ ಯಾವ ರೀತಿ ಅಭಿಪ್ರಾಯ ಪಟ್ಟಿದ್ದಾರೆ ಮತ್ತು ಎಷ್ಟರಮಟ್ಟಿಗೆ ವರದಿ ಕೊಟ್ಟಿದ್ದಾರೆಂಬುದು ಗೊತ್ತಿದೆ. ಇವತ್ತು ನಾವು ಬರಗಾಲಕ್ಕಾಗಿ ಸುಮಾರು ೧೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಅನೇಕ ಜನರಿಗೆ ಕೆಲಸ ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ೧೫೦ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆಂದು ಹೇಳುವುದು ಅವರು ಕೊಟ್ಟ ಅಂಕಿ ಸಂಖ್ಯೆಗಳ ಪ್ರಕಾರ. ಅದರಲ್ಲಿ ಇವತ್ತು ಅವರು ಖರ್ಚು ಮಾಡಿರುವುದು ೫೭-೫೮ ಕೋಟಿ ರೂಪಾಯಿ ಮಾತ್ರ. ಉಳಿದಿದ್ದು ಎನ್.ಆರ್.ಇ.ಪಿ. ಆರ್.ಎಲ್.ಇ.ಜಿ.ಪಿ. ಡಿ.ಪಿ.ಎ.ಪಿ. ಯೋಜನೆಗಳಿಗೆ ಖರ್ಚಾಗಿದೆ. ಇವು ರೆಗ್ಯುಲರ್ ಪ್ರೋಗ್ರಾಂಗಳು—ಇಲಾಖೆ ಕಾರ್ಯಕ್ರಮಗಳು ಬರಗಾಲ ಇಲ್ಲದಿದ್ದರೂ ಅವುಗಳಿಗೆ ಹಣ ಖರ್ಚು ಮಾಡಲೇ ಬೇಕು. ನಿಮಗೆ ಮ್ಯಾಚಿಂಗ್ ಗ್ರ್ಯಾಂಟ್ ಸಿಗುವಾಗ ಈ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುವುದಕ್ಕೋಸ್ಕರ ಮತ್ತು ಪ್ಲಾನ್ ಪ್ರಾಜೆಕ್ಟ್‌ಗಳನ್ನು ಎಕ್ಸಿಕ್ಯೂಟ್ ಮಾಡುವಾಗ ಆ ಹಣವನ್ನು ಖರ್ಚು ಮಾಡಲೇಬೇಕು. ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಾರದು. ಆದರೆ ಇವತ್ತು ಬೊಮ್ಮಾಯಿಯವರು ಹೋದಲ್ಲೆಲ್ಲ ಲೋಕೋಪಯೋಗಿ ಕೆಲಸಗಳು, ಎನ್.ಆರ್.ಡಬ್ಲ್ಯು.ಎಸ್. ಕಾರ್ಯಕ್ರಮಗಳನ್ನೆಲ್ಲ ಸೇರಿಸಿ ಬರಗಾಲ ಪರಿಹಾರಕ್ಕಾಗಿ ನಾವು ೧೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಇದು ತಪ್ಪು. ನೀವು ಬರಗಾಲಕ್ಕಾಗಿ ಇಲ್ಲಿಯವರೆಗೆ ಖರ್ಚು ಮಾಡಿರುವುದು ೫೭ ಕೋಟಿ ರೂಪಾಯಿ ಮಾತ್ರ. ನಿಮ್ಮ ಅಂಕಿ ಅಂಶದ ಪ್ರಕಾರ ಸುಮಾರು ೬೬೧ ಲಕ್ಷ ಮ್ಯಾನ್‌ಡೇಸ್ ಆಯಿತು. ಇತರ ಕಾರ್ಯಕ್ರಮಗಳು ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟವು. ಎಲ್ಲಾ ಇಲಾಖೆಗಳನ್ನು ಸೇರಿಸಿ ಅವರು ಎಷ್ಟು ಜನರಿಗೆ ಕೆಲಸ ಕೊಟ್ಟಿದ್ದಾರೆಂದರೆ ೬೬೧ ಲಕ್ಷ ಮ್ಯಾನ್‌ಡೇಸ್ ಅಂದರೆ ೭-೮ ಲಕ್ಷ ಕೂಡ ಆಗುವುದಿಲ್ಲ. ಇಲ್ಲಿಯವರೆಗೆ ಅವರು ಮಾಡಿಸಿದ ಕೆಲಸಕ್ಕೆ ಹಣ ಖರ್ಚು ಮಾಡಿರುವುದು ೫೭ ಕೋಟಿ ರೂಪಾಯಿ ಮಾತ್ರ. ನಮ್ಮ ಕರ್ನಾಟಕ ರಾಜ್ಯದಲ್ಲಿ ಕೂಲಿಗಾರರ ಜೊತೆಯಲ್ಲಿ ೫೦ ಲಕ್ಷ ಜನ ಸ್ಮಾಲ್ ಮತ್ತು ಮಾರ್ಜಿನಲ್ ಫಾರ್ಮರ್ಸ್ ಇದ್ದಾರೆ. ಅವರೆಲ್ಲರಿಗೆ ಉದ್ಯೋಗ ಕೊಡಬೇಕೆಂಬ ದೃಷ್ಟಿಯಿಂದ ಮಾಡಿದರೂ ಅದು ಸಾಧ್ಯವಾಗುವುದಿಲ್ಲ. ಅದು ಯಾವ ಸರ್ಕಾರಕ್ಕೂ ಸಾಧ್ಯವಾಗದ ಕೆಲಸ. ಆ ಜವಾಬ್ದಾರಿ ನಮಗೂ ಗೊತ್ತಿದೆ. ಆದರೆ ಇದಕ್ಕಿಂತ ಮುಂಚೆ ಅದನ್ನು ತಿಳಿದುಕೊಂಡು ನಾವು ಏನು ಹೇಳಿದ್ದೇವೆಂದರೆ ಕನಿಷ್ಟ ಪಕ್ಷ ತಾವು ೧೨ ಅಥವಾ ೧೩ ಲಕ್ಷ ಜನರಿಗಾದರೂ ಕೆಲಸ ಕೊಡತಕ್ಕ ಪ್ರಯತ್ನ ಮಾಡಬೇಕೆಂದು ಸಲಹೆ ಕೊಟ್ಟಿದ್ದೆವು. ನಾವು ಸಲಹೆ ಕೊಟ್ಟದ್ದು ಆಗಸ್ಟ್‌ನಲ್ಲಿ. ಈ ಸದನದ ಸಮಿತಿಯ ೧೫ ಜನ ಶಾಸಕರು ಹೋಗಿ ಯುನಾನಿಮಸ್ ರಿಪೋರ್ಟ್ ಕೊಟ್ಟು ಪ್ರತಿ ದಿವಸ ಕನಿಷ್ಟ ಪಕ್ಷ ಒಂದು ಕೋಟಿ ರೂಪಾಯಿಗಳನ್ನು ಬರಪೀಡಿತ ಪ್ರದೇಶಗಳಲ್ಲಿ ಖರ್ಚು ಮಾಡಬೇಕೆಂದು ಹೇಳಿದ್ದೇವೆ. ಕನಿಷ್ಟ ಪಕ್ಷ ೨೦ ಕೋಟಿ ರೂಪಾಯಿಗಳನ್ನಾದರೂ ಡಿಸೆಂಬರ್‌ವರೆಗೆ ಫಾಡರ್‌ಗಾಗಿ ಖರ್ಚು ಮಾಡಬೇಕೆಂದು ಹೇಳಿದ್ದೇವೆ. ಆ ಲೆಕ್ಕದ ಪ್ರಕಾರ ಇವತ್ತಿನವರೆಗೆ ೨೨೦ ಕೋಟಿ ರೂಪಾಯಿಗಳನ್ನು ಖರ್ಚು

ಮಾಡಬೇಕಾಗಿತ್ತು. ಆದರೆ ತಾವು ಮಾಡಿರುವುದು ಕೇವಲ ೫೭ ಕೋಟಿ ರೂಪಾಯಿ ಮಾತ್ರ. ನೀವು ಫಾಡರ್‌ಗಾಗಿ ಒಂದು ಕೋಟಿ ರೂಪಾಯಿಗಳನ್ನು ಮತ್ತು ನೀರಿಗಾಗಿ ೨ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಹೀಗೆ ಎಲ್ಲವನ್ನು ಲೆಕ್ಕ ಹಾಕಿದರೂ ೬೨ ಕೋ'ಟಿ ರೂಪಾಯಿಗಳಿಗಿಂತ ಜಾಸ್ತಿ ಖರ್ಚು ಆಗಿಲ್ಲ. ಅಂದಾಗ ಈ ಸಮಸ್ಯೆಯನ್ನು ನೀವು ಎಷ್ಟರಮಟ್ಟಿಗೆ ಅರ್ಥ ಮಾಡಿಕೊಂಡು ಜನರಿಗೆ ಪರಿಹಾರ ಕೊಡುತ್ತಿದ್ದೀರಿ, ಸಹಾಯ ಮಾಡುತ್ತಿದ್ದೀರಿ ಎಂಬುದನ್ನು ಪ್ರಶ್ನಿಸಬೇಕಾಗುತ್ತದೆ. ಏಕೆಂದರೆ ಇಷ್ಟು ಮ್ಯಾಗ್ನಿಟ್ಯೂಡ್ ಸಿಚ್ಯುಯೇಷನ್ ಇದ್ದರೂ ಕೂಡ ನೀವು ಆಕಡೆ ಗಮನ ಕೊಡುತ್ತಿಲ್ಲ ತಾವೇನೋ ಇವತ್ತು ಹೇಳಿದ ಹಾಗೆ ನಡೆಯುತ್ತಿರಬಹುದು. ಏಕೆಂದರೆ, ಯಡಿಯೂರಪ್ಪನವರು ಹೇಳಿದ ಹಾಗೆ ಆ್ಯಂಟಿ ಡಿಫೆಕ್ಷನ್ ಬಿಲ್ ಬಂದಿದೆ. ಅದರ ಬಗ್ಗೆ ಯಾವ ಶಾಸಕರೂ ಮಾತನಾಡುವ ಹಾಗೆ ಇಲ್ಲ, ಸರ್ಕಾರ ಭದ್ರವಾಗಿದೆ, ಏನು ಮಾಡಿದರೂ ದೇಶದಲ್ಲಿ ನಡೆಯುತ್ತದೆಂದು ಈ ರೀತಿ ವರ್ತಿಸುತ್ತಿದ್ದೀರೆಂದು ಹೇಳುತ್ತಿದ್ದೇನೆ. ಇದರ ಹಿನ್ನಲೆಯಲ್ಲಿ ಇವರು ಮಾಡಿದಂಥ ಕೆಲಸವಾದರೂ ಏನು ? ಒಂದು ಕಡೆ ಕೇವಲ ೫೭ ಕೋಟಿ ರೂಪಾಯಿ ಖರ್ಚು ಮಾಡಿರುವಾಗ ನಮ್ಮ ರಾಜ್ಯದಲ್ಲಿ ತೊಂದರೆಗೆ ಒಳಪಟ್ಟ ಜನರ ಲೆಕ್ಕ ತೆಗೆದುಕೊಂಡರೆ ಒಬ್ಬ ಮನುಷ್ಯನಿಗೆ ೫೦ ಪೈಸೆ ಖರ್ಚು ಮಾಡಿದ ಹಾಗೆ ಆಗಿದೆ. ಇವತ್ತು ಜಾನುವಾರುಗಳು ಬಹಳ ತೊಂದರೆಗೆ ಒಳಪಟ್ಟಿವೆ. ಅವಕ್ಕೆ ಬೇಕಾದ ಫಾಡರ್ ಅನ್ನು ಮದ್ರಾಸ್, ಹೈದರಾಬಾದ್, ಮಹಾರಾಷ್ಟ್ರ, ಹರಿಯಾಣ, ಪಂಜಾಬ್ ಮುಂತಾದ ಕಡೆಗಳಿಂದ ತರಿಸುತ್ತೇವೆ, ಅದಕ್ಕೆ ಒಬ್ಬರು ಮಂತ್ರಿಗಳನ್ನು ಡೆಪ್ಯೂಟ್ ಮಾಡಿದ್ದೇವೆಂದು ಹೇಳಿದರು. ಈ ಮಾತನ್ನು ಹೇಳಿ ಇಲ್ಲಿಗೆ ೬ ತಿಂಗಳಾಯಿತು. ಇದುವರೆಗೆ ಎಷ್ಟು ಫಾಡರ್ ಅನ್ನು ಸಂಗ್ರಹಣೆ ಮಾಡಿದ್ದೀರಿ ? ಎಷ್ಟು ಫಾಡರ್ ಬ್ಯಾಂಕುಗಳನ್ನು ತೆರೆದಿದ್ದೀರಿ ? ಪುಸ್ತಕದಲ್ಲಿ, ಪತ್ರಿಕೆಗಳಲ್ಲಿ ಹೇಳಿಕೆ ಕೊಡುವುದು ಒಂದು, ಮಾಡುವುದು ಮತ್ತೊಂದು. ಸರ್ಕಾರದ್ದು ಬರೀ ಪ್ರಚಾರವೇ ಹೊರತು ಕೆಲಸ ಏನೂ ಇಲ್ಲವಾಗಿದೆ. ಇವತ್ತು ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಬೊಮ್ಮಾಯಿಯವರು ಹೇಳಿದರು. ಒಂದು ಕೋಟಿ ಜಾನುವಾರುಗಳು ಬರಗಾಲಕ್ಕೆ ತುತ್ತಾಗಿ ಮೇವು ಇಲ್ಲದೆ ಸಾಯುತ್ತಿವೆ. ನಿಮ್ಮ ವರದಿ ಪ್ರಕಾರ ಒಂದು ಕೋಟಿ ದನಗಳಿಗೆ ಒಂದು ಕೋಟಿ ರೂಪಾಯಿ ಅಂದರೆ ಒಂದು ದನಕ್ಕೆ ಒಂದು ರೂಪಾಯಿ ಆಯಿತು. ಬರಗಾಲ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಅಂದರೆ ನೂರು ದಿನಗಳಿಗೆ ಲೆಕ್ಕ ಹಾಕಿದರೆ ಒಂದು ದನಕ್ಕೆ ಒಂದು ದಿವಸಕ್ಕೆ ಒಂದು ಪೈಸೆ ಆಯಿತು. ಇದು ನಿಮ್ಮ ಪರಿಹಾರದ ಕೆಲಸ. ಇದು ನೀವು ಕೊಟ್ಟಂತಹ ಅಂಕಿ ಅಂಶಗಳು. ಇದನ್ನು ಯಾವಾಗ ಬಿಡುಗಡೆ ಮಾಡಿದ್ದಾರೆಂದರೆ ಅಸೆಂಬ್ಲಿ ೨೦ಕ್ಕೆ ಸಭೆ ಸೇರುತ್ತದೆ. ಸದನದಲ್ಲಿ ಎಲ್ಲರೂ ಕೇಳುತ್ತಾರೆಂದು ೧೫ಕ್ಕೆ ಕೆಲಸ ಪ್ರಾರಂಭ ಮಾಡಿದ್ದಾರೆ.

ಈ ರೀತಿಯಾಗಿ ತಾವು ಕೆಲಸ ಮಾಡಿದರೆ, ಜನಗಳ ಬಗ್ಗೆ, ಜಾನುವಾರುಗಳ ಬಗ್ಗೆ ತಮ್ಮ ಕಳಕಳಿಯಿಂದೆಯೆಂದು ಭಾವಿಸೋಣವೇ ? ಖಂಡಿತವಾಗಿ ಈ ಜನರ ಮತ್ತು ಜಾನುವಾರುಗಳ ಸಮಸ್ಯೆಯನ್ನು ಹೇಗೆ ಪರಿಹಾರ ಮಾಡಬೇಕೆಂದು ಯೋಚನೆ ಮಾಡಿದ್ದೀರಾ ? ಜನ ಮತ್ತು ಜಾನುವಾರುಗಳನ್ನು ಸಾಯಿಸಿದರೆ ಆಟೋಮ್ಯಾಟಿಕ್ ಆಗಿ ಸಮಸ್ಯೆ ಬಗೆಹರಿಯುತ್ತದೆ.ನಾವು ಏತಕ್ಕೆ ಬಗೆಹರಿಸಬೇಕು ಎನ್ನುವ ಭಾವನೆ ನಿಮಗೆ ಬಂದಿದೆ. ಇಲ್ಲದಿದ್ದರೆ ಈ ಒಂದು ವರ್ಷದೊಳಗೆ ಒಂದು ಕೋಟಿ ಖರ್ಚು ಮಾಡಿದ್ದೇವೆಂದು ಹೇಳುತ್ತಿದ್ದೀರಾ ? ಆದರೆ ಸರಿಯಾದ ರೀತಿ ಖರ್ಚು ಮಾಡಿದ್ದರೆ ಇಂತಹ ಅವ್ಯವಸ್ಥೆ ಆಗುತ್ತಾ ಇರಲಿಲ್ಲ. ಒಂದು ಕಡೆ ಜನ ಜಾನುವಾರುಗಳು ಸಾಯುತ್ತಾ ಇವೆ. ಅವುಗಳ ಗೋಳನ್ನು ಯಾರೂ ಕೇಳುವ ಹಾಗೆ ಇಲ್ಲ. ನಾವು ಸಲಹೆ ಕೊಡುತ್ತಾ ಇದ್ದರೂ ಕೂಡ ನೀವು ಅದನ್ನು ಬರೆದುಕೊಳ್ಳದಿದ್ದರೆ ನಾವು ಈ ಸದನದಲ್ಲಿ ಏತಕ್ಕೆ ಬರಬೇಕು. ಮತ್ತು ಏತಕ್ಕೆ ಮಾತನಾಡಬೇಕು ಲಕ್ಷ್ಮೀಸಾಗರ್‌ರವರು ನಿದ್ದೆ ಮಾಡುತ್ತಾ ಇದ್ದಾರೆ. ಈ ಸರ್ಕಾರ ನಿದ್ದೆ ಮಾಡುವ ಹಾಗೆ ಕಾಣುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಅವರು ಹೇಳುವುದನ್ನೆಲ್ಲಾ ಬರೆದುಕೊಳ್ಳುತ್ತಾ ಇದ್ದೇನೆ. ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ ಇತ್ತೀಚೆಗೆ ಕಾಮಾಲೆ ಕಣ್ಣು ಶುರುವಾಗಿದೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಅವರು ಕಣ್ಣು ಮುಚ್ಚಿಕೊಂಡು ಕುಳಿತಿದ್ದರೂ, ನಮಗೆ ನಿದ್ರೆ ಮಾಡುವಹಾಗೆ ಕಾಣುತ್ತದೆ. ಉಳಿದ ಎಲ್ಲಾ ಮಂತ್ರಿಗಳು ಹೊರಗಡೆ ಹೋಗಿದ್ದಾರೆ, ಇಲ್ಲಿ ೩ ಜನ ಮಂತ್ರಿಗಳು ಇದ್ದಾರೆ.

ಶ್ರೀ ಜಿ. ನಾರಾಯಣಕುಮಾರ್.—ಕಾವಾಲೆ ಕಣ್ಣಿನವರಿಗೆ ಕುಳಿತುಕೊಂಡವರು ನಿಂತುಕೊಂಡ ಹಾಗೆ ಕಾಣುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಇಷ್ಟನ್ನು ಹೇಳುವುದಕ್ಕೆ ಇಲ್ಲಿ ಬಂದಿದ್ದೀರಾ? ತಾವು ಕೊಟ್ಟಂತಹ ಫಿಗರ್ಸ್ ನೋಡಿದರೆ ಯಾವ ಯಾವ ಪರಿಹಾರ ಕಾರ್ಯಕ್ರಮಗಳನ್ನು ಮಾಡಿದ್ದೀರಿ ಎಂಬುದು ಗೊತ್ತಾಗುತ್ತದೆ. ನಮ್ಮ ಹೈದರಾಬಾದ್ ಕರ್ನಾಟಕ ಹಿಂದುಳಿದ ಪ್ರದೇಶವಾಗಿದೆ. ತಾವು ಪೂರ್ತಿಯಾಗಿ ಆ ಪ್ರದೇಶವನ್ನು ನಿರ್ಲಕ್ಷಿಸಿದ್ದೀರಿ. ನೀವು ಕೊಡುವ ಪರಿಹಾರದಲ್ಲಿ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂಬುದನ್ನು ನೋಡೋಣ. ಹಾಸನ ಮತ್ತು ಗುಲ್ಬರ್ಗ ಎರಡನ್ನು ಪರಿಶೀಲನೆಗೆ ತೆಗೆದುಕೊಂಡರೆ ಗೊತ್ತಾಗುತ್ತದೆ. ಹಾಸನಕ್ಕೆ ಕೊಡಬಾರದು ಎನ್ನತಕ್ಕದ್ದಲ್ಲ. ಆದರೆ ಹಾಸನದ ಜನಸಂಖ್ಯೆ ಕೇವಲ ೧೧ ಲಕ್ಷ ಇದೆ. ಗುಲ್ಬರ್ಗದಲ್ಲಿ !೨೨ ಲಕ್ಷ ಇವೆ ಹಾಸನದಲ್ಲಿ ಇದ್ದಂತಹ ಲೇಬರ್ ಎಪ್ಲಾಯಿಮೆಂಟ್‌ನಲ್ಲಿ ಏನು ಮಾಡಿದ್ದಾರೆ ಎನ್ನುವುದನ್ನು ನೋಡಿದರೆ ಇದು ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ದಾವಣಗೆರೆ ಸಬ್‌ಇನ್ಸ್‌ಪೆಕ್ಟರ್ ವಿಚಾರದಲ್ಲಿ ಏನು ಹೇಳಿಕೆ ಕೊಟ್ಟಿಲ್ಲ. ಸದನ ಮೂರು ಗಂಟೆಗೆ ಮುಗಿಯುತ್ತದೆ. ಆ ಸದನದಲ್ಲಿ ಗೃಹ ಸಚಿವರು ಇದ್ದಾರೆ ಎನ್ನುವ ವಿಚಾರ ನನಗೂ ಗೊತ್ತಿದೆ. ಅವರ ಪರವಾಗಿ ಇಲ್ಲಿ ಬೇರೆ ಯಾರಾದರೂ ಹೇಳಿಕೆ ಕೊಡುತ್ತಾರೋ ಗೊತ್ತಿಲ್ಲ. ನಾನು ಬೇರೆ ವಿಚಾರಕ್ಕಾಗಿ ಮೇಲ್ಮನೆ ಕಡೆ ಹೋಗಿದ್ದೆ, ಅಲ್ಲಿ ಗೃಹ ಸಚಿವರು ಇದ್ದರು. ಆದರೆ ಯಾರಾದರೂ ಇಲ್ಲಿ ಹೇಳಿಕೆ ಕೊಟ್ಟರೆ ಪರವಾಗಿಲ್ಲ.

ಶ್ರೀ ಸಿ. ಬೈರೇಗೌಡ.—ಈ ಸಭೆಗೆ ಆಶ್ವಾಸನೆಯನ್ನು ಕೊಟ್ಟ ಮೇಲೆ ಅದನ್ನು ನೇರವೇರಿಸುವುದು ಸರ್ಕಾರದ ಕರ್ತವ್ಯ, ಇನ್ನು ೧೫ ನಿಮಿಷ ಇದೆ. ಬಂಗಾರಪ್ಪನವರು ಸಹಕರಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಗೃಹ ಸಚಿವರ ಹೇಳಿಕೆಯನ್ನು ಯಾರಾದರೂ ಬೇಕಾದರೂ ಕೊಡಬಹುದು, ಆದರೆ ಹೇಳಿಕೆ ಕೊಡುವುದು ಬಹಳ ಮುಖ್ಯ.

ಶ್ರೀ ಸಿ. ಬೈರೇಗೌಡ.—ಹೇಳಿಕೆ ಕೊಡುವುದಕ್ಕೆ ವ್ಯವಸ್ಥೆ ಆಗುತ್ತಾ ಇದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹಾಸನದಲ್ಲಿ ೪೨,೮೬೪ ಜನಕ್ಕೆ ಡೈಲಿ ಲೇಬರ್‌ನಲ್ಲಿ ಕೆಲಸ ಕೊಟ್ಟಿದ್ದಾರೆ. ಅದೇ ಗುಲ್ಬರ್ಗದಲ್ಲಿ ಜನಸಂಖ್ಯೆ ಡಬಲ್ ಇದೆ. ಹಾಗೂ ಜಾನುವಾರುಗಳ ಸಂಖ್ಯೆಯಲ್ಲೂ ಕೂಡ ಜಾಸ್ತಿ ಇದೆ. ಮತ್ತು ಬರಗಾಲ ಪರಿಸ್ಥಿತಿ ಕೂಡ ಹಾಸನಕ್ಕಿಂತ ಗುಲ್ಬರ್ಗದಲ್ಲಿ ಜಾಸ್ತಿ ಇದೆ. ಗುಲ್ಬರ್ಗದಲ್ಲಿ ಕೇವಲ ೩೦ ಸಾವಿರ ಜನರು ಕೆಲಸ ಮಾಡುತ್ತಾ ಇದ್ದಾರೆ. ಏತಕ್ಕೆ ಈ ವ ತ್ಯಾಸ.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಎನ್‌ಆರ್‌ಇಪಿಯಲ್ಲಿ ಹಾಸನ ೪೦೦೫, ಗುಲ್ಬರ್ಗದಲ್ಲಿ ೬,೦೦೦. ಆರ್‌ಎಲ್‌ಜಿಇಪಿಯಲ್ಲಿ ಹಾಸನ ೪,೦೦೦ ಗುಲ್ಬರ್ಗ ೬,೦೦೦ ಇದೆ. ಇದರ ನಡುವೆ ಬಹಳ ವ್ಯತ್ಯಾಸವಿದೆ. ಶ್ರೀ ದೇವೇಗೌಡರ ಮತಕ್ಷೇತ್ರ ಎಂಬ ಕಾರಣಕ್ಕೋಸ್ಕರವೋ ಏನು ಗೊತ್ತಿಲ್ಲ, ಗುಲ್ಬರ್ಗದಲ್ಲಿ ೧೩ ಜನ ಶಾಸಕರಲ್ಲಿ ೮ ಜನ ಕಾಂಗ್ರೆಸ್ಸಿಗರೂ ಆರಿಸಿ ಬಂದಿದ್ದಾರೆ. ಆದ್ದರಿಂದ ಅಲ್ಲಿ ಕೆಲಸ ತೆಗೆದುಕೊಂಡಿಲ್ಲವೋ ಗೊತ್ತಿಲ್ಲ. ನಮ್ಮ ಗುಲ್ಬರ್ಗದಲ್ಲಿ ಪೂರ್ತಿ ಬರಗಾಲ ಇದೆ. ಗುಲ್ಬರ್ಗದಲ್ಲಿ ರೋಡಿನ ಕೆಲಸ ಏಳು ಕಿಲೋಮೀಟರ್ ತೆಗೆದುಕೊಂಡಿದ್ದಾರೆ, ಹಾಸನದಲ್ಲಿ ೫೯ ಕಿಲೋ ಮೀಟರ್ ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು.—ಆಯಿತು,

ಶ್ರೀ ಮಲ್ಲಿಕಾರ್ಜುನ ಖರ್ಗೆ.—೫೯ ಕಿಲೋಮೀಟರ್ ಮತ್ತು ೭೦ ಕಿಲೋಮೀಟರ್ ಇಲ್ಲಿ ೧೦ ತಾಲ್ಲೂಕುಗಳು ಇರತಕ್ಕ ಜಿಲ್ಲೆ ಇದು. ಇನ್ನು ವಿಲೇಜ್ ರೋಡ್ಸ್ ತೆಗೆದುಕೊಂಡರೆ ಉದಾಹರಣೆಗಾಗಿ ಇದನ್ನು ಹೇಳುತ್ತಿದ್ದೇನೆ ಹಾಸನದಲ್ಲಿ ಫಾರ್ಮೇಷನ್ ಆಫ್ ನ್ಯೂ ವಿಲೇಜ್ ರೋಡ್ಸ್ ೮೦೨ ಕಿಲೋಮೀಟರ್ ಆಗಿದ್ದರೆ ಗುಲ್ಬರ್ಗದಲ್ಲಿ ೧೩೩ ಕಿಲೋಮೀಟರ್ ಆಗಿದೆ. ಇದು ನಿಮ್ಮ ವರದಿಯ ೧೩ನೇ ಪುಟದಲ್ಲಿದೆ. ಇದು ನೀವು ಮಾಡಿದಂಥ ಉಪಕಾರ ಗುಲ್ಬರ್ಗ ಜಿಲ್ಲೆಗೆ,

ಹೈದರಾಬಾದ್ ಕರ್ನಾಟಕಕ್ಕೆ. ನಿಷ್ಪಕ್ಷಪಾತವಾಗಿ ಎಲ್ಲ ಜನರಿಗೆ ಒಂದೇ ದೃಷ್ಟಿಯಿಂದ ನೋಡುತ್ತೇವೆ ಎಂದು ಹೇಳುತ್ತೀರಲ್ಲ ಅದಕ್ಕೆ ಇದು ಉದಾಹರಣೆ.

ಶ್ರೀ ಆರ್. ಎಲ್. ಜಾಲಪ್ಪ—ಇವರಿದ್ದರು, ಮೊದಲೇ ಎಲ್ಲಾ ಮಾಡಿಕೊಂಡು ಬಿಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಇಂಪ್ರೂವ್‌ಮೆಂಟ್ಸ್ ಆಫ್ ರೋಡ್ಸ್‌ನಲ್ಲಿ ಹಾಸನದಲ್ಲಿ ೨೦೨೫ ಕಿಲೋಮೀಟರ್ ಆಗಿದ್ದರೆ ಗುಲ್ಬರ್ಗದಲ್ಲಿ ೧೯೯ ಕಿಲೋಮೀಟರ್. ಇದು ನಿಮ್ಮ ಫಿಗರ್ಸ್. ಪೇಜ್ ನಂಬರ್ ಕೊಡಲ್ಲಾ ?

ಶ್ರೀ ಆರ್. ಎಲ್. ಜಾಲಪ್ಪ.—ಗೊತ್ತಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಗೊತ್ತಿದ್ದರೂ ಕೂಡ ತಿಳಿದುಕೊಂಡಿಲ್ಲವಲ್ಲ.

ಶ್ರೀ ಎಸ್. ಬಂಗಾರಪ್ಪ.—ಜಾಲಪ್ಪನವರ ಅಭಿಪ್ರಾಯ, ಸರ್ಕಾರದ ಅಭಿಪ್ರಾಯ ಬೀದರ್, ಗುಲ್ಬರ್ಗ, ರಾಯಚೂರು ಮುಂತಾದ ಹೈದರಾಬಾದ್ ಕರ್ನಾಟಕ ಪ್ರದೇಶಗಳು ಪಿ.ಡಬ್ಲ್ಯು.ಡಿ. ಮಂತ್ರಿಗಳ ಜಿಲ್ಲೆಯಾದ ಹಾಸನಕ್ಕೆ ಹೋಲಿಸಿದರೆ ಹಿಂದುಳಿದಿಲ್ಲ, ಮುಂದುವರೆದಿದೆ ಎಂಬುದಾ ? ಆ ದೃಷ್ಟಿಯಿಂದ ಅಲ್ಲಿ ಕಡಿಮೆ ಕೊಟ್ಟಿದ್ದೀರಾ ? ಹಾಗಿದ್ದರೆ ಡಿಕ್ಲೇರ್ ಮಾಡಿ.

ಶ್ರೀ ಆರ್. ಎಲ್. ಜಾಲಪ್ಪ.—ಉತ್ತರ ಕೊಡುವಾಗ ಹೇಳುತ್ತೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹೊಸ ರಸ್ತೆ ನಿರ್ಮಾಣ ಮಾಡುವುದರಲ್ಲಿ ಅಥವಾ ಟ್ಯಾಂಕ್ಸ್ ಇಂಪ್ರೂವ್‌ಮೆಂಟ್ ಮಾಡುವುದರಲ್ಲಿ, ಡೀಸಿಲ್ಟಿಂಗ್ ಆಫ್ ಟ್ಯಾಂಕ್ಸ್ ಕೆಲಸದಲ್ಲಿ ಹಾಸನಕ್ಕೆ ಹೆಚ್ಚು ಕೊಟ್ಟಿದ್ದಾರೆ, ಹಾಸನದಲ್ಲಿ ೧೩೨ ಕೆರೆಗಳಾಗಿದ್ದರೆ ಕೋಲಾರದಲ್ಲಿ,ಗುಲ್ಬರ್ಗದಲ್ಲಿ ಏನೂ ಆಗಿಲ್ಲ. ಬೇರೆ ಯಾವ ಜಿಲ್ಲೆಯಲ್ಲೂ ಇಲ್ಲ. ಕೇವಲ ಹಾಸನ ಜಿಲ್ಲೆಯಲ್ಲಿ ಮಾತ್ರ ೧೩೨ ಕೆರೆಗಳಾಗಿವೆ, ಹಿಂದೆ ಕೆರೆಗಳ ಕೆಲಸ ಯಾವುದು ತೆಗೆದುಕೊಳ್ಳಬೇಕೆಂಬ ಬಗ್ಗೆ ಪ್ರೊಪೋಸಲ್ಸ್ ಕೊಟ್ಟಿದ್ದೇವೆ. ನನ್ನ ಕ್ಷೇತ್ರವಾದ ಯಾದಗಿರಿಯಲ್ಲಿ ಹೆಚ್ಚಿನ ಕೆರೆಗಳನ್ನು ಇಂಪ್ರೂವ್‌ಮೆಂಟ್‌ಗೋಸ್ಕರ ತೆಗೆದುಕೊಳ್ಳಬೇಕು, ಹೊಸ ಕೆರೆಗಳನ್ನು ನಿರ್ಮಾಣ ಮಾಡಬೇಕು ಎಂದು ಹೇಳಿ ಪತ್ರ ಬರೆದರೂ ಹಣ ಇಲ್ಲ ಆದಕ್ಕೆ. ಇವತ್ತು ೧೩೨ ಕೆರೆಗಳನ್ನು ಒಂದೇ ಜಿಲ್ಲೆಯಲ್ಲಿ ತೆಗೆದುಕೊಂಡು ಬೇರೆ ಕಡೆ ನಿಲ್ ಎಂದು ಹಾಕಿದ್ದೀರಲ್ಲಾ ಸ್ವಲ್ಪವಾದರೂ ನಾಚಿಕೆ ಇದೆಯೇ ? ಇಷ್ಟು ಡಿಸ್ಕ್ರಿಮಿನೇಷನ್......

ಅಧ್ಯಕ್ಷರು.—ನಾಚಿಕೆ ಎಂಬ ಶಬ್ದ ಬೇಡ. ಸರ್ಕಾರದಲ್ಲಿ ಯಾರೇ ಇರಲಿ. ಪ್ರಜಾಪ್ರಭುತ್ವದಲ್ಲಿ ನಿಮ್ಮದು ಸರ್ಕಾರ. ಆ ರೀತಿ ಇವರೂ ಮಾತನಾಡಬಾರದು, ನೀವೂ ಮಾತನಾಡಬಾರದು.

ಶ್ರೀ ಕೆ. ಎಚ್. ಶ್ರೀನಿವಾಸ್.—ಅದನ್ನು ಆಂಗ್ಲ ಭಾಷೆಯಲ್ಲಿ ಟ್ರಾನ್ಸ್‌ಲೇಟ್ ಮಾಡಿಬಿಡಿ.

ಶ್ರೀ ಎನ್. ಆರ್. ಲಕ್ಷ್ಮಯ್ಯ.—ಮಂತ್ರಿಗಳು ಮಾಡಬಾರದ್ದು ಏನಾದರೂ ಮಾಡಿದ್ದಾರಾ ? ಕಳ್ಳತನ ಮಾಡಿದ್ದಾರಾ ?

ಅಧ್ಯಕ್ಷರು.—ಖರ್ಗೆಯವರೇ ನೋಡಿ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಷೇಮ್‌ಲೆಸ್ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಅದೂ ಬೇಡ. ತಾವೂ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ನಾವೂ ಮಂತ್ರಿಯಾಗಿ ಕೆಲಸ ಮಾಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈ ರೀತಿ ಕೊಟ್ಟಿರುವ ಲೆಕ್ಕ ನೋಡಿದರೆ it amounts to discrimination. I a talking with your own facts and figures.

ಶ್ರೀ ಎನ್. ಆರ್. ಲಕ್ಷ್ಮಯ್ಯ.—ಕೆಲಸವಾಗಿಲ್ಲ ಎಂದು ಹೇಳಿ. ನಾಚಿಕೆ ಇಲ್ಲ ಎಂದು ಏತಕ್ಕೆ ಹೇಳುತ್ತೀರಿ ?

ಶ್ರೀ ಜಿ ನಾರಾಯಣಕುಮಾರ್.—ಇದು ಬಹಳ ಉದ್ಧಟತನ. ವಿಷಯ ಅವರ ತಲೆಯಲ್ಲಿ ಏನೂ ಇಲ್ಲದೇ ಇರುವುದರಿಂದ ಅದನ್ನು ಹೇಳುತ್ತಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.--ಆ ಪದ ಪಾರ್ಲಿಮೆಂಟರಿ ಅಲ್ಲ ಎಂದು ಹೇಳಿದರೆ ವಾಪಸ್ ತೆಗೆದುಕೊಳ್ಳಬಹುದು. ಪಾರ್ಲಿಮೆಂಟರಿ ಶಬ್ದದ ಚೌಕಟ್ಟಿನಲ್ಲಿ ತೀವ್ರವಾದ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಯಾವುದೇ ಶಬ್ದವನ್ನಾದರೂ ಸದಸ್ಯರು ಬಳಕೆ ಮಾಡಬಹುದು. ಅನ್ ಪಾರ್ಲಿಮೆಂಟರಿ ಎಂದು ತೀರ್ಮಾನಕ್ಕೆ ಬರದೆ...

ಅಧ್ಯಕ್ಷರು.--ನಾನು ಅನ್‌ಪಾರ್ಲಿಮೆಂಟರಿ ಎಂದು ಹೇಳುವುದಿಲ್ಲ. ಖರ್ಗೆಯವರು ಮಂತ್ರಿಯಾಗಿ ಕೆಲಸ ಮಾಡಿರುವವರು. ಚೆನ್ನಾಗಿ ಭಾಷಣ ಮಾಡುತ್ತಾರೆ. ಆದರೆ ಈ ಹೊತ್ತಿನಲ್ಲಿ ಆ ಮಾತು ಬೇಡ. ಅವರ ಘನತೆಗೆ ಆ ಶಬ್ದ ಬೇಡ ಎಂದು ಹೇಳಿದೆ. ಬೇರೆ ಯಾರಾದರೂ ಮಾತನಾಡಲಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.--ತಮ್ಮದು ಒಳ್ಳೆಯ ಸಲಹೆ.

ಅಧ್ಯಕ್ಷರು.--ಮುಂದೆ ಯಾವ ಸರ್ಕಾರವಾದರೂ ಬರಬಹುದು. ಆದರೆ ಒಳ್ಳೆಯ ಸಂಪ್ರದಾಯ ಹಾಕಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.--ಷೇಮ್‌ಲೆಸ್ ಎಂದು ಹೇಳುತ್ತೇನೆ.

ಅಧ್ಯಕ್ಷರು.--ಅದೂ ಬೇಡ. ಒಂದಾನೊಂದು ಕಾಲದಲ್ಲಿ ನಾವೆಲ್ಲರೂ ಇಲ್ಲಿದ್ದೆವು. ಈಗ ನೀವು ಅಲ್ಲಿ ಹೋಗಿದ್ದೀರಿ ? ಆದರೆ ಸತ್‌ಸಂಪ್ರದಾಯ ಹಾಕಬೇಕು.

ಶ್ರೀ ಎ ಲಕ್ಷ್ಮೀಸಾಗರ್.-- ಕಟುವಾದ ಟೀಕೆ ಮಾಡುವುದಕ್ಕೆ ಅವರಿಗೆ ಅಧಿಕಾರ ಇದೆ. ಆ ಕೆಲಸ ಮಾಡುವುದಕ್ಕಾಗಿಯೇ ಅವರನ್ನು ವಿರೋಧಪಕ್ಷ ಎಂದು ಹೇಳುವುದು. ನಾಚಿಕೆ ಇಲ್ಲ ಎಂದು ಹೇಳುವುದು ಅಸಭ್ಯ ಭಾಷೆಅಲ್ಲ. ನಾಚಿಕೆ ಎಂದು ಹೇಳುವುದು is it not unparliamentary. They are entitled to use it. ನಾನು ಅಲ್ಲಿದ್ದಾಗ ಅನೇಕ ಸಾರಿ ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.-- ನಾನು ಹೇಳತಕ್ಕ ಉದ್ದೇಶ ಇಷ್ಟೆ. ಅವರ ಮನಸ್ಸು ನೋಯಿಸಬೇಕು ಎಂದು ಹೇಳುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.--ಮನಸ್ಸು ನೋಯಿಸುವಂತೆ ಹೇಳಬೇಕು. ಹೊಡೆಯುವುದಕ್ಕೆ ಪ್ರಾರಂಭ ಮಾಡಿ ಮೈಗೆ ಏಟು ತಗಲುವುದು ಬೇಡ ಎಂದು ಹೇಳುವುದಕ್ಕಾಗುತ್ತದೆಯೇ ? It is within the language that is permissible under the rules,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.--ಹೊಸ ಕೆರೆಗಳ ನಿರ್ಮಾಣದ ಬಗ್ಗೆ ನಾನು ಹೇಳಿದೆ. ಎಲ್ಲ ಕಡೆ ಒಂದು ಆದೇಶ ಕೊಟ್ಟರು. ಎಲ್ಲೆಲ್ಲಿ ಜನರಿಗೆ ಕೆಲಸ ಇಲ್ಲ ಅಂಥ ಕಡೆ ಹೊಸ ಕೆರೆ ಇಲ್ಲದೇ ಹೋದರೂ ಡೀಸಿಲ್ಟಿಂಗ್ ಆಫ್ ಟ್ಯಾಂಕ್ಸ್ ಕೆಲಸ ತೆಗೆದುಕೊಳ್ಳಬೇಕೆಂದು. ಆದರ ಪ್ರಕಾರ ಹಾಸನ ಜಿಲ್ಲೆಯಲ್ಲಿ ಸುಮಾರು ೪೨೫ ಕೆರೆಗಳಾಗಿದ್ದರೆ ಗುಲ್ಬರ್ಗದಲ್ಲಿ ಒಂದೂ ಇಲ್ಲ. ಇದಕ್ಕೆ ಏನು ಹೇಳಬೇಕು ?

ಶ್ರೀ ಎಸ್. ಬಂಗಾರಪ್ಪ.--ಯಾವ ಭಾಷೆ ಉಪಯೋಗಿಸಬೇಕು ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.--ಗುಲ್ಬರ್ಗದಲ್ಲಿ ಒಂದೂ ಇಲ್ಲ.

ಶ್ರೀ ಡಿ. ಟಿ. ಜಯಕುಮಾರ್.--ಮನವಿ ಕೊಟ್ಟಿದ್ದಾರಾ ಕೇಳಿ. ಮನವಿ ಕೊಡದೇ ಯಾರೂ ಕಾರ್ಯಗತ ಮಾಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.--ಈ ರೀತಿಯಾಗಿ ತಾರತಮ್ಯ ಮಾಡಿದ್ದಾರೆ. ಅಷ್ಟೇ ಅಲ್ಲ. ಫೇರ್ ಪ್ರೈಸ್ ಷಾಪ್ ಡಿಸ್ಟ್ರಿಬ್ಯೂಷನ್‌ನಲ್ಲಿ ಕೂಡ ''ಹುಚ್ಚುಮುಂಡೆ ಲಗ್ನದಲ್ಲಿ ಉಂಡವನೇ ಜಾಣ'' ಎಂಬಂತೆ ರೆವಿನ್ಯೂ ಡಿಪಾರ್ಟ್‌ಮೆಂಟ್...

ಅಧ್ಯಕ್ಷರು.--ಈ ಶಬ್ದ ಇದೆಯಲ್ಲ ನಾವು ಇಲ್ಲಿದ್ದಾಗ ಇಲ್ಲಿದ್ದವರು ಅಲ್ಲಿ ಹೇಳುತ್ತಿದ್ದರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.-- ನಮ್ಮ ಭಾಷೆ ಬೇರೆ, ಆದ್ದರಿಂದ ಇವರ ಹಾಗೆ ಫ್ಲುಯೆನ್ಸಿ ಇಲ್ಲ.

ಅಧ್ಯಕ್ಷರು.--ಚೆನ್ನಾಗಿ ಮಾಹಿತಿ ತಂದಿದ್ದೀರಿ ನೀವು. ತಾವೊಬ್ಬರು ಬೆಸ್ಟ್ ಸ್ಪೀಕರ್, ವ್ಯಂಗ್ಯೋಕ್ತಿ ಇಲ್ಲದೆ ನೇರವಾಗಿ ಹೇಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—'ಹಂಚ್ಚರ ಲಗ್ನದಲ್ಲಿ ಉಂಡವನೇ ಜಾಣ' ಎಂದು ಹೇಳಲೆ ?

ಅಧ್ಯಕ್ಷರು.—ಅದೂ ಸರಿಯಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇನ್ನಾವುದು ಹೇಳಬೇಕು ?

ಅಧ್ಯಕ್ಷರು.—ಅದೆಲ್ಲಾ ಬೇಡ. I compliment him. He is one of the best speakers.

೩-00ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಈಗ ಇನ್ನೊಂದು ವಿಷಯ, ಪ್ರತಿಯೊಂದು ಕಡೆ ನ್ಯಾಯಬೆಲೆ ಅಂಗಡಿಗಳನ್ನು ತೆರೆದು ಜನರಿಗೆ ಸಹಾಯ ಮಾಡಬೇಕೆಂದು ಹೇಳಿ ಧಾನ್ಯಗಳನ್ನು ಸೂಕ್ತ ದರದಲ್ಲಿ ಅವರಿಗೆ ಸಿಗುವಂತೆ ಮಾಡಬೇಕೆಂದು ಹೇಳಿ ಎಲ್ಲಾ ಕಡೆ individual fair price shops and co-operative fair price shops ಮಾಡಿದರು, ನಮ್ಮ ಭಾಗದಲ್ಲಿ ಅನೇಕ ಕಡೆ ಬೇಡಿಕೆ ಇದ ರೂ ಆ ಬಗ್ಗೆ ಸರ್ಕಾರ ಒಪ್ಪಿಲ್ಲ. ಸಂಬಂಧಪಟ್ಟ ಮಂತ್ರಿಗಳೂ ಒಪ್ಪಿಲ್ಲ. ಧಾರವಾಡ ದಲ್ಲಿ ೧,೫೮೩ ಇದ್ದರೆ ಗುಲ್ಬರ್ಗಾದಲ್ಲಿ ೭೦೦ ಮಾತ್ರ ಇದೆ. ಯಾರಿಗೆ ಇವರು ಡೈರೆಕ್ಷನ್ ಕೊಟ್ಟರು ? ಡಿ.ಸಿ. ಯವರಿಗೆ ಡೈರೆಕ್ಷನ್ ಕೊಟ್ಟರು.

ಶ್ರೀ ಎ. ಲಕ್ಷ್ಮೀಸಾಗರ್.—ಅಲ್ಲಿ ೧೭ ತಾಲ್ಲೂಕುಗಳು ಇದ್ದು......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ಕಡೆ ಪಾಪ್ಯುಲೇಷನ್ ಹೇಳುತ್ತೀರಿ, ಒಂದು ಕಡೆ ತಾಲ್ಲೂಕುಗಳನ್ನು ಹೇಳುತ್ತೀರಿ. ಇದರಲ್ಲಿ ಏನು ಹೇಳುತ್ತೀರಿ ? ಒಂದು ಸಾವಿರ ಜನಸಂಖ್ಯೆಗೆ ಒಂದು ಷಾಪ್ ಕೊಡಬೇಕೆಂದು ಸಲಹೆ ಇದೆ, ಆದರೆ ಇವತ್ತು ಏನು ಆಗಿದೆ ಎಂದರೆ, ಎಲ್ಲಿ ಒತ್ತಾಯ ಇರುತ್ತದೆಯೋ ಅಲ್ಲಿಗೆ ಇವರು ಕೊಡುತ್ತಾರೆ. ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಸಂಶೋಧನೆ ಮಾಡಿ ಕೊಡಿ ಎಂದರೆ ಆ ಪಕ್ಷದವರು, ಈ ಪಕ್ಷದವರು ಎಂದು ತಿಳಿದು ಮಾಡುವುದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ೩ ಗಂಟೆಗೆ ಸದನ ಏಳಬೇಕು. ಈಗಾಗಲೇ ಅನೇಕ ಶಾಸಕರು ತಮ್ಮ ತಮ್ಮ ಕ್ಷೇತ್ರಗಳಿಗೆ ಹೋಗುವ ಸಲುವಾಗಿ ಹೊರಗೆ ಹೋಗಿದ್ದಾರೆ. ಮಾನ್ಯ ಗೃಹ ಮಂತ್ರಿಗಳು ಯಾವಾಗ ಬರುತ್ತಾರೆ. ?

ಅಧ್ಯಕ್ಷರು.—ಅವರನ್ನು ಕರೆಯಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅವರು ಇಲ್ಲದಿದ್ದರೆ, ಅವರ ಪರವಾಗಿ ಬೇರೆ ಮಂತ್ರಿಗಳು ಹೇಳ ಬಹುದು. ಏನಿದು ? ಅವರು ಎಲ್ಲಿ ?

ಅಧ್ಯಕ್ಷರು.—ಅವರು ವಿಧಾನಪರಿಷತ್ತಿನಲ್ಲಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅವರು ಬರುವವರೆವಿಗೂ ನಾವು ಇಲ್ಲಿ ಇರಬೇಕೇ ?

ಶ್ರೀ ಸಿ. ಬೈರೇಗೌಡ —ಮಾನ್ಯ ಗೃಹ ಮಂತ್ರಿಗಳು ವಿಧಾನಪರಿಷತ್ತಿನಲ್ಲಿ ಹೇಳಿಕೆ ಕೊಡುತ್ತಿ ದ್ದಾರೆ, ಹಾಗೂ ನಮ್ಮ ಮುಖ್ಯ ಸಚೇತಕರೂ ಸಹಾ ಅವರನ್ನು ಕರೆದುಕೊಂಡು ಬರಲು ಮೇಲ್ಮನೆಗೆ ಹೋಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಬೇಗ ಕರೆಸುವ ವ್ಯವಸ್ಥೆ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವತ್ತು ಅರಣ್ಯ ಇಲಾಖೆಯವರೂ ಕೂಡಾ ಅಫಾರ್ ಸ್ಟೇಷನ್ ಸ್ಕೀಮ್ ಕೆಳಗೆ ಧಾರವಾಡ ಜಿಲ್ಲೆಯಲ್ಲಿ ೯,೮೦೦ ಲಕ್ಷ ತೆಗೆದುಕೊಂಡಿದ್ದರೆ ಹಾಸನದಲ್ಲಿ ೨,೬೫೫ ಮಾತ್ರ. ಹಾಗೂ ಗುಲ್ಬರ್ಗಾ ಜಿಲ್ಲೆಯಲ್ಲಿ ಒಂದೂ ಸ್ಕೀಮ್ ಇಲ್ಲ. ಈ ರೀತಿಯಾದ ಒಂದು ತಾರತಮ್ಯ ನಡೆದಿದೆ, ಎಂಪ್ಲಾಯ್‌ಮೆಂಟ್‌ನಲ್ಲಿ ಒಂದು ಕಡೆ ಎಲ್ಲರಿಗೂ ಕೆಲಸ ಕೊಡುತ್ತೇವೆ ಎಲ್ಲರಿಗೂ ಸರಿಸಮಾನವಾಗಿ ನೋಡಿಕೊಳ್ಳುತ್ತೇವೆ. ಎಂದು ಹೇಳುತ್ತಾ ಬಂದಿದ್ದಾರೆ. ಆದರೆ ಈ ಕಡೆ ಈ ಮಲತಾಯಿ ಧೋರಣೆಯನ್ನು ತೋರಿಸುತ್ತಿರುವುದು ಸರಿಯೇ ?

ಶ್ರೀ ಡಿ. ಟಿ. ಜಯಕುಮಾರ್.—ನೀವು ಅಧಿಕಾರದಲ್ಲಿದ್ದಾಗ ಅದನ್ನು ಮಾಡಲಿಲ್ಲವೇ ?

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜನರಿಗೆ ಪರಿಹಾರ ಕೊಡುತ್ತೇವೆ ಎಂದು ಹೇಳುತ್ತಾ ಹೋದಿರಿ. ಎಲ್ಲಿ ರಿಲೀಫ್ ಕೊಟ್ಟಿದ್ದೀರಿ ? ಎಷ್ಟರಮಟ್ಟಿಗೆ ಮಾಡಿದ್ದೀರಿ ಎಂಬುದನ್ನು ನೀವೇ ನೋಡಿ. ಈ ಬಗ್ಗೆ ಡಾಕ್ಯುಮೆಂಟ್ ಇಟ್ಟಿದ್ದರೆ ಸರಿಯಿತ್ತು. ಗುಲ್ಬರ್ಗಾದ, ರಾಯಚೂರಿನ ಭಾಗಕ್ಕೆ ಸೇರಿದ ಶಾಸಕರು ಅನೇಕ ಸಾರಿ ಮುಖ್ಯಮಂತ್ರಿಯವರಿಗೆ, ಮಾನ್ಯ ದೇವೇಗೌಡರಿಗೆ ಕೇಳಿದ್ದಾರೆ. ನಾವು ಎಲ್ಲಾ ಸರಿ ಮಾಡುತ್ತೇವೆ ಹೆಚ್ಚಿನ ಕೆಲಸ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆಯೇ ವಿನಃ ಕಳೆದ ೨-೩ ವರ್ಷಗಳಲ್ಲಿ ಯಾವುದೇ ಹೊಸ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ. ನಮ್ಮ ಕಾಲದಲ್ಲಿ ಪ್ರಾರಂಭವಾದ ಕೆಲವು ಯೋಜನೆಗಳು ಎಲ್.ಒ.ಸಿ. ಇಲ್ಲ ಎಂದು ಹಾಗೆ ಉಳಿದಿವೆ. ಬೆಣ್ಣೆತೊರಾ ಪ್ರಾಜೆಕ್ಟ್‌ಗೆ ಆಗಲೇ ೬೦ ರಿಂದ ೭೦ ಲಕ್ಷ ರೂಪಾಯಿಗಳು ಖರ್ಚು ಆಗಿದ್ದು ಎಲ್.ಒ.ಸಿ. ಇಲ್ಲದೇ ಆ ಕೆಲಸ ಸ್ಥಗಿತವಾಗಿದೆ. ಡ್ರಾಟ್ ರಿಲೀಫ್‌ನಲ್ಲಿ ಮಾನ್ಯ ಬೊಮ್ಮಾಯಿಯವರು ಮೀಟಿಂಗ್ ಮಾಡಿದರು ೬ ತಿಂಗಳು ಆದ ಮೇಲೆ ೫೦ ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಮೊನ್ನೆ ಆ ಬಗ್ಗೆ ಜಿ.ಓ, ಹೋಗಿರಬಹುದು, ಈ ರೀತಿಯಾಗಿ ನಮ್ಮ ಕಡೆ ಮಂದಗತಿಯಲ್ಲಿ ಕೆಲಸ ಆಗುತ್ತಿದ್ದು ಈ ಕಡೆ ಸರ್ಕಾರದ ಲಕ್ಷ್ಯ ಹೆಚ್ಚು ಹೋಗುತ್ತಿಲ್ಲ. ಈ ಕಡೆಗೆ ಸರ್ಕಾರ ನೆಗ್ಲೆಕ್ಟ್ ಮಾಡುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಬಿಜಾಪುರ ಜಿಲ್ಲೆಯ ಕಡಪಟ್ಟಿಯವರು ಕೃಷ್ಣ ಮೇಲ್ದಂಡೆ ಯೋಜನೆ ಯಾವಾಗ ಮುಗಿಯುತ್ತದೆಂದು ಪ್ರಶ್ನೆ ಕೇಳಿದರು. ಹಾಗೂ ಕೃಷ್ಣಾ ಬೇಸಿನ್‌ನಲ್ಲಿ ಇರತಕ್ಕ ಎಲ್ಲಾ ಪ್ರಾಜೆಕ್ಟ್‌ಗಳಿಗೆ ಎಷ್ಟು ಹಣ ಕೊಡುತ್ತೀರಿ ಎಂದು ಕೇಳಿದಾಗ ಮಾನ್ಯ ದೇವೇಗೌಡರು ಹೇಳಿದರು, ಅಷ್ಟು ಹಣ ನಮ್ಮಲ್ಲಿ ಇಲ್ಲ, ಅದಕ್ಕೆ ಸುಮಾರು ೪೦೦೦ ಕೋಟಿ ರೂ. ಗಳು ಬೇಕಾಗುತ್ತದೆ ಎಂದು ಅದನ್ನು ಪೂರ್ತಿ ಮುಗಿಸುವುದು ನಮ್ಮ ಕಾಲದಲ್ಲಿ ಆಗುವುದಿಲ್ಲ, ನಮ್ಮ ಮಕ್ಕಳ, ಮೊಮ್ಮಕ್ಕಳ ಕಾಲದಲ್ಲಿ ಅದು ಪೂರ್ಣ ಆಗಬಹುದು ಎನ್ನುವ ಮಾತನ್ನು ಹೇಳಿದರು. ಇವತ್ತು ಕಾವೇರಿ ಬೇಸಿನ್‌ಗೆ ೧,೦೦೦ ಕೋಟಿ ರೂಪಾಯಿಗಳು ಬೇಕಾದರೆ ಕೃಷ್ಣ ಬೇಸಿನ್ ಯೋಜನೆಗಳಿಗೆ ೪,೦೦೦ಕೋಟಿ ರೂಪಾಯಿಗಳು ಬೇಕಾಗುತ್ತದೆ, ಎಂದಾಗ ಸರ್ಕಾರ ಕಾವೇರಿ ಬೇಸಿನ್‌ಗೆ ೫೦ ಕೋಟಿ ರೂ. ಕೊಟ್ಟರೆ, ಕೃಷ್ಣ ಬೇಸಿನ್‌ಗೆ ೨೦೦ ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಇದನ್ನು ಏಕೆ ಮಾಡುವುದಿಲ್ಲ ? ಒಂದು ಕಡೆ ಎನ್.ಟಿ. ರಾಮರಾವ್ ಅವರು ತೆಲುಗು-ಗಂಗಾ ಬಗ್ಗೆ ಬಡಕೊಳ್ಳುತ್ತಿದ್ದಾರೆ. Whether this Government agree or disagrees I am going ahead and I don't care for anybody'' ಎಂದು ಹೇಳುತ್ತಿದ್ದಾರೆ. ಆ ಪ್ರದೇಶ ಸತತವಾಗಿ ಬರಗಾಲಕ್ಕೆ ತುತ್ತಾಗುತ್ತಾ ಬರುತ್ತಿದೆಯೆಂದು ಆ ಕಡೆಯ ಮತ್ತು ಈ ಕಡೆಯ ಶಾಸಕರೆಲ್ಲರೂ ಹೇಳುತ್ತಿದ್ದರೂ ಕೂಡ ಇವತ್ತಿನ ದಿವಸ ೨೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಭಾಗದಲ್ಲಿ ೭೦ ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ ಹಾಗೂ ಎಲ್ಲಿ ಕಡಿಮೆ ಖರ್ಚು ಮಾಡಬೇಕೋ ಅಲ್ಲಿ ೩೦ ಕೋಟಿ ರೂಪಾಯಿ ಖರ್ಚು ಮಾಡತಕ್ಕದ್ದು ಸರಿಯೇ ?

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಖರ್ಗೆಯವರು ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಕಾವೇರಿ ಬೇಸಿನ್‌ನಲ್ಲಿ ಏಕೆ ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂದು ಹೇಳುತ್ತಿದ್ದಾರೆ ಅವರು ಹೇಳುವುದನ್ನು ನೋಡಿದರೆ ಅಳಬೇಕೋ ನಗಬೇಕೋ ಗೊತ್ತಾಗುತ್ತಾ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ಕಡೆ ೭೦ ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ ಮತ್ತೊಂದು ಕಡೆ ೫೦ ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ. ನೀವು ಒರಿಜಿನಲ್ ಪ್ಲಾನ್ ನೋಡಬೇಕು. ಹಿಂದುಳಿದ ಭಾಗಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಿ ಅದರ ಪ್ರಗತಿಗೆ...

ಶ್ರೀ ಬಿ. ಡಿ. ಬಸವರಾಜು.—ಹಿಂದುಳಿದ ಭಾಗ ಯಾವುದು...

ಅಧ್ಯಕ್ಷರು.—ನೀವು ಮಾತನಾಡಲು ನಾನು ಅವಕಾಶ ಕೊಟ್ಟಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ನೀವು ಮಾತನಾಡುವುದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ. ಡಿ. ಬಸವರಾಜು.—ನಮಗೆ ರೆಕಾರ್ಡ್ ಆಗುವುದು ಬೇಕಾಗಿಲ್ಲ. ರಾಜ್ಯದ ಸಮಸ್ಯೆ ಬಗೆಹರಿಸಿದರೆ ಸಾಕು.

ಶ್ರೀ ಡಿ. ಟಿ. ಜಯಕುಮಾರ್.—ಕಾವೇರಿ ಬೇಸಿನ್ ನಾನ್ ಪ್ಲಾನ್. ಈಗ ನಮಗೆ ಬಂದಿರತಕ್ಕ ಹಣವನ್ನು ಸರಿಯಾಗಿ ಉಪಯೋಗಿಸಿಕೊಳ್ಳದಿದ್ದರೆ ತಮಿಳುನಾಡಿಗೆ ನೀರು ಹೋಗುತ್ತದೆ. ಎಷ್ಟೋ ಕಡೆಗಳಲ್ಲಿ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಕುಮಾರ್‌ರವರು ಮಂತ್ರಿಗಳೇನು ? ಅವರು ಏತಕ್ಕೆ ಉತ್ತರ ಕೊಡುತ್ತಾರೆ?

ಅಧ್ಯಕ್ಷರು.--ಜಯಕುಮಾರ್‌ರವರೇ ದಯವಿಟ್ಟು ಕುಳಿತುಕೊಳ್ಳಿ. ನೀವು ಮಾತನಾಡುವಾಗ ಅವರು ಇಂಟರ್‌ಫಿಯರ್ ಆಗಲಿಲ್ಲ. ಆದರೆ ಅವರು ಮಾತನಾಡುವಾಗ ನೀವು ಏತಕ್ಕೆ ಮಧ್ಯೆ ಮಾತನಾಡುತ್ತೀರಿ ? ಅವರು ಯದ್ವಾತದ್ವಾ ಏನೂ ಮಾತನಾಡುತ್ತಿಲ್ಲ. ಅಂಕಿಅಂಶಗಳನ್ನು ಮುಂದಿಟ್ಟುಕೊಂಡು ಮಾತನಾಡುತ್ತಿದ್ದಾರೆ. ಅವರು ಪುಸ್ತಕಕ್ಕೆ ಚೀಟಿ ಹಚ್ಚಿಕೊಂಡು ಬಂದು ಮಾತನಾಡುತ್ತಿದ್ದಾರೆ. ಅದೇ ರೀತಿ ನೀವೂ ಕೂಡ ಪುಸ್ತಕದಲ್ಲಿ ಗುರುತು ಹಾಕಿಕೊಂಡು ಚೀಟಿ ಹಚ್ಚಿಕೊಂಡು ಬಂದು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಅಂಕಿ ಅಂಶಗಳನ್ನು ಇಟ್ಟುಕೊಂಡೆ ಮಾತನಾಡುತ್ತಿದ್ದೇನೆ. ಅಂಕಿ ಅಂಶಗಳಿಲ್ಲದೆ ಮಾತನಾಡಿದರೆ ಅದು ತಪ್ಪಾಗುತ್ತದೆ. ಅಂಕಿ ಅಂಶಗಳನ್ನು ಕೊಟ್ಟು ಮಾತನಾಡುವುದು ತಪ್ಪು ಎಂದು ಅವರು ಹೇಳುವುದಾದರೆ ನಾವು ಇನ್ನು ಯಾವ ರೀತಿ ಮಾತನಾಡಬೇಕು ? ನಾನು ಏನು ಹೇಳುತ್ತಿದ್ದೇನೆಂದರೆ, ನೀವು ಎಷ್ಟು ಕೆಲಸವನ್ನು ಮಾಡಬೇಕಾಗಿತ್ತೋ ಅಷ್ಟು ಕೆಲಸವನ್ನು ಮಾಡಿಲ್ಲ. ನೀವು ಏತಕ್ಕೆ ಕೆಲಸ ಮಾಡಲಿಲ್ಲವೆಂದು ಕೇಳುವ ಅಧಿಕಾರ ನನಗೆ ಇದೆ,. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಇರಲಿ ಅಥವಾ ಬೇರೆ ಇನ್ನಾವುದೇ ಪ್ರಾಜೆಕ್ಟ್ ಇರಲಿ ಅದಕ್ಕೆ ನೀವು ಹೆಚ್ಚು ಹಣವನ್ನು ಕೊಟ್ಟರೆ ಅದರಲ್ಲಿ ೨೫ ಪರ್ಸೆಂಟ್ ಹಣ ನಿಮಗೆ ಕೇಂದ್ರ ಸರ್ಕಾರದಿಂದ ಬರುತ್ತದೆ. ನೀವು ಕಾವೇರಿ ಬೇಸಿನ್‌ಗೆ ಎಷ್ಟು ಹಣವನ್ನು ಖರ್ಚು ಮಾಡಿದರೂ ಕೇಂದ್ರದಿಂದ ನಿಮಗೆ ದುಡ್ಡು ಬರುವುದಿಲ್ಲ. ಏಕೆಂದರೆ ಇದು ನಾನ್ ಪ್ಲಾನ್ಡ್ ಎಕ್ಸ್‌ಪೆಂಡಿಚರ್...

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಸ್ವಾಮಿ, ತಾವು ಏನು ಹೇಳುತ್ತಿದ್ದೀರಿ ?

ಶ್ರೀ ಡಿ.ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ಹಿಂದೆ ಇದ್ದಂಥ ಕಾಂಗ್ರೆಸ್ ಸರ್ಕಾರದವರು ಎಷ್ಟು ಹಣವನ್ನು ಅಪ್ಪರ್ ಕೃಷ್ಣಕ್ಕೆ ಖರ್ಚು ಮಾಡಿದ್ದಾರೆ, ? ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಎಷ್ಟು ಹಣವನ್ನು ಖರ್ಚು ಮಾಡಿದೆ ಎಂಬುದನ್ನು ಅವರು ಅಂಕಿ ಅಂಶಗಳ ಸಮೇತ ಹೇಳಲಿ. ಅನಂತರ ಅವರಿಗೇ ಗೊತ್ತಾಗುತ್ತದೆ. ಆದರೆ ಈಗ ಅವರು ಹೇಳುವುದನ್ನು ನಾವು ಕೇಳಿಕೊಂಡು ಕೂತುಕೊಳ್ಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು. -ತಾವು ದಯವಿಟ್ಟು ಕುಳಿತುಕೊಳ್ಳಿ. ಈರೀತಿ ನೀವು ಮಧ್ಯೆ ಮಧ್ಯೆ ಎದ್ದುನಿಂತ ಮಾತನಾಡುವುದಾದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ಸದಸ್ಯರಾದ ಖರ್ಗೆಯವರ ಅಂಕಿಅಂಶಗಳನ್ನು ಮುಂದಿಟ್ಟುಕೊಂಡು ಮಾತನಾಡುತ್ತಿದ್ದಾರೆ......

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಕೃಷ್ಣಪ್ಪನವರು ಮತ್ತು ಜಯಕುಮಾರ್‌ರವರು ಮಂಡ್ಯ ಜಿಲ್ಲೆಯ ಬಗ್ಗೆ ಮಾತನಾಡುವಾಗ ಅವರ ಹತ್ತಿರ ಅಂಕಿಅಂಶಗಳು ಇರಬಹುದು, ಅಥವಾ ಇಲ್ಲದಿರಬಹುದು. ಆದರೆ ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಅದನ್ನು ಕೇಳಿಕೊಂಡು ಕೂತುಕೊಳ್ಳುತ್ತೇವೆ.

ಶ್ರೀ ಬಿ. ಡಿ. ಬಸವರಾಜು.—ನಿಮ್ಮ ಕಡೆಯವರನ್ನು ನೋಡಿ ನಾವು ಕಲಿತುಕೊಂಡಿದ್ದೇವೆ. ನಾವು ಇಬ್ಬರು ಎದ್ದು ನಿಂತು ಮಾತನಾಡಿದರೆ ನಿಮ್ಮ ಕಡೆ ೧೦ ಜನ ಎದ್ದು ನಿಲ್ಲುತ್ತೀರಿ.

ಅಧ್ಯಕ್ಷರು.—ನೀವು ಈರೀತಿ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ಭಾಷಣ ಮಾಡಿದಮೇಲೆ ಮಾನ್ಯ ಬಂಗಾರಪ್ಪನವರು ಭಾಷಣ ಮಾಡಿದರು ಎಂದು ಅಂದುಕೊಳ್ಳುತ್ತಾರೆ. ಅವರು ಏನಾದರೂ ಅಂದುಕೊಳ್ಳಲಿ, ನಮಗೆ ಮಾನ್ಯ ಸಚಿವರಿಂದ ಉತ್ತರ ಬರಬೇಕು. ಮಾನ್ಯ ಕೃಷ್ಣಪ್ಪನವರು, ಮಾನ್ಯ ಜಯಕುಮಾರ್‌ರವರು, ಮಾನ್ಯ ಲಕ್ಷ್ಮಯ್ಯನವರು ಮಂತ್ರಿಗಳಾಗಿ ಬಂದಮೇಲೆ ಬೇಕಾದರೆ ನಮಗೆ ಉತ್ತರ ಹೇಳಲಿ. ಆದರೆ ಈಗಿರತಕ್ಕ ಮಂತ್ರಿಗಳಿಂದ ಉತ್ತರ ಬೇಕು.

ಶ್ರೀ ಡಿ. ಟಿ. ಜಯಕುಮಾರ್.—ಸ್ವಾಮಿ. ೧೯೮೩ಕ್ಕೆ ಹಿಂದೆ ನಿಮ್ಮ ಕಾಂಗ್ರೆಸ್ ಸರ್ಕಾರ ಎಷ್ಟು ಹಣವನ್ನು ಖರ್ಚುಮಾಡಿತ್ತು, ನಾವು ಈಗ ಎಷ್ಟು ಖರ್ಚುಮಾಡಿದ್ದೇವೆ ಎಂಬುದನ್ನು ದಯವಿಟ್ಟು ತೆಗೆದುನೋಡಿ.

ಅಧ್ಯಕ್ಷರು.—ಅವರು ಮಾತನಾಡುವಾಗ ನೀವು ಮಧ್ಯೆ ಮಾತನಾಡುವುದು ಸರಿಯಲ್ಲ. ಮಧ್ಯೆ ಇಂಟರ್‌ಫಿಯರ್ ಆಗಬಾರದು.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಕುದುರೆಮೋತಿ ಎಂ.ಎಲ್.ಎ. ರವರನ್ನು ಕೇಳಿನೋಡಿ. ರಾಯಚೂರು ಜಿಲ್ಲೆಯಲ್ಲಿ ಎಷ್ಟು......

ಶ್ರೀ ಸಿ. ಭೈರೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಉಪಯೋಗಿಸಿದ ಕುದುರೆಮೋತಿ ಎಂ.ಎಲ್.ಎ. ಎಂಬ ಪದವನ್ನು ಅವರು ವಾಪಸು ತೆಗೆದುಕೊಳ್ಳಬೇಕು. ಇವರು ಕುದುರೆಮೋತಿ ಎಂ.ಎಲ್.ಎ. ಅಲ್ಲ. ಕುದುರೆಮೋತಿ ಎಂಬ ಕ್ಷೇತ್ರವೂ ಕೂಡ ನಮ್ಮ ರಾಜ್ಯದಲ್ಲಿಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ, ಭೈರೇಗೌಡರು ಎಂದರೆ ಯಾರಿಗೂ ಗೊತ್ತಾಗುವುದಿಲ್ಲ. ಟೇಪ್‌ನ ಭೈರೇಗೌಡರು ಎಂದರೆ ಬೇಗನೆ ಗೊತ್ತಾಗುತ್ತದೆ ನಮ್ಮ ಇಂಡಿಯಾದಲ್ಲಿ ನೀವು ಎಲ್ಲಿ ಕೇಳಿದರೂ ಟೇಪ್ ಎಂದಕೂಡಲೇ ಭೈರೇಗೌಡರು ಎಂದು ಗೊತ್ತಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ನನ್ನ ಉದ್ದೇಶ ಒಂದು ಕಡೆ ಪ್ರಾಜೆಕ್ಟ್ ಕೆಲಸ ತೆಗೆದುಕೊಳ್ಳಬೇಕು, ಇನ್ನೊಂದು ಕಡೆ ತೆಗೆದುಕೊಳ್ಳಬಾರದೆಂದು ಏನೂ ಅಲ್ಲ. ಯಾವುದೇ ಒಂದು ಯೋಜನೆಯನ್ನು ಪ್ರಾರಂಭ ಮಾಡಿದ ಕೂಡಲೇ ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಿ ಆದಷ್ಟು ಬೇಗ ಅದನ್ನು ಮುಗಿಸಿದರೆ ಒಳ್ಳೆಯದು. ಅದರಿಂದ ಜನರಿಗೆ ಬಹಳ ಉಪಕಾರವಾಗುತ್ತದೆ. ನೀವು ಏನು ಪಾಪುಲರ್ ಯೋಜನೆಯನ್ನು ಹಾಕಿಕೊಂಡು ನಾವು ಸೀರೆ ಕೊಡುತ್ತೇವೆ, ಧೋತ್ರ ಕೊಡುತ್ತೇವೆ, ತಾಳಿ ಕೊಡುತ್ತೇವೆ, ಪಂಚೆ ಕೊಡುತ್ತೇವೆಂದು ಹೇಳಿಕೊಳ್ಳುತ್ತಿದ್ದೀರಿ ಅದರ ಪ್ರಕಾರ ಮೊದಲು ನಡೆದುಕೊಳ್ಳಿ. ಚಿತ್ರದುರ್ಗ, ತುಮಕೂರು, ಕೋಲಾರ, ಇನ್ನೂ ಮುಂತಾದ ಜಿಲ್ಲೆಗಳು ಬರಗಾಲದ ದವಡೆಗೆ ಸಿಕ್ಕಿವೆ. ಅವುಗಳಿಗೆ ಹೆಚ್ಚು ಹಣವನ್ನು ಒದಗಿಸಿಕೊಡಬೇಕು. ಆದರೆ ನೀವು ಹಾಗೆ ಮಾಡದೆ ತಮಗೆ ಬೇಕಾದ ಕಡೆ ಕೊಡುತ್ತೀರಿ, ಬೇಡವಾದ ಕಡೆ ಬಿಡುತ್ತೀರಿ. ನೀವು ಮೊದಲು ತುಮಕೂರು ಜಿಲ್ಲೆಯನ್ನು ಬಿಟ್ಟುಬಿಟ್ಟಿದ್ದಿರಿ. ಆದರೆ ನಾನು ಹೇಳಿದಮೇಲೆ ಅದನ್ನು ಸೇರಿಸಿದಿರಿ. ಅಪೂರ್ಣವಾಗಿರತಕ್ಕ ಪ್ರಾಜೆಕ್ಟ್‌ಗಳನ್ನು ಪೂರ್ತಿಮಾಡಲು ನಿಮ್ಮಲ್ಲಿ ಹಣವಿಲ್ಲ. ಆದರೂ ಹೊಸ ಹೊಸ ಪ್ರಾಜೆಕ್ಟ್‌ಗಳನ್ನು ಮಂಜೂರು ಮಾಡುತ್ತಿದ್ದೀರಿ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಹಾಸನದಲ್ಲಿ ಒಂದು ಪ್ರಾಜೆಕ್ಟನ್ನು ಮಂಜೂರು ಮಾಡಿದಿರಿ. ಆದರೆ ಅಲ್ಲಿ ನೀರೇ ಇಲ್ಲ. ಹಾಗಾದರೆ ನೀರು ಇದೆಯೋ, ಇಲ್ಲವೇ ಎಂಬಂದನ್ನೂ ನೋಡದೆ ಈ ಪ್ರಾಜೆಕ್ಟನ್ನು ಮಂಜೂರು ಮಾಡಿದಿರಾ ?.. ...

ಶ್ರೀ ಹೆಚ್. ಟಿ. ಕೃಷ್ಣಪ್ಪ —ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆದರೆ ನಾನು ಒಂದು ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು.—ನೀವು ದಯವಿಟ್ಟು ಕೂತುಕೊಳ್ಳಿ. ಮಧ್ಯೆ ಮಾತನಾಡಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾನು ಈಲ್ಡ್ ಆಗುವುದಿಲ್ಲ.

ಶ್ರೀ ಬಿ. ಡಿ. ಬಸವರಾಜು.—ಸ್ವಾಮಿ, ಹಾಸನದಲ್ಲಿ ನೀರು ಇಲ್ಲವೆಂದು ಹೇಳುವುದಕ್ಕೆ ಇವರು ಯಾರು ? ಇವರೇನು ಹೋಗಿ ನೋಡಿಕೊಂಡು ಬಂದಿದ್ದಾರೆಯೇ ?

(ಗೊಂದಲ)

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೆ,......

ಅಧ್ಯಕ್ಷರು.—ಕೃಷ್ಣಪ್ಪನವರೇ, ನೀವು ಹೇಳುವುದು ರೆಕಾರ್ಡ್‌ಗೆ ಹೋಗುವುದಿಲ್ಲ. ನೀವು ಈರೀತಿ ಪದೇ ಪದೇ ಮಾತನಾಡಲು ಎದ್ದು ನಿಂತರೆ ನಾನು ಇಲ್ಲಿ ಯಾವರೀತಿ ಕೆಲಸಮಾಡಲು ಸಾಧ್ಯವಾಗುತ್ತದೆ? ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಭಾಷಣವನ್ನು ಮುಗಿಸುವವರೆಗೆ ಯಾರೂಕೂಡ ಮಧ್ಯೆ ಮಾತನಾಡಬಾರದು. ಅದೇರೀತಿ ಮಾನ್ಯ ಲಕ್ಷ್ಮಯ್ಯನವರು ಮಾತನಾಡುವಾಗಲೂ ಕೂಡ ಮಧ್ಯೆ ಯಾರೂ ಮಾತನಾಡಬಾರದು. ಆರೀತಿ ಯಾರಾದರೂ ನನ್ನ ಅನುಮತಿಯನ್ನು ತೆಗೆದುಕೊಳ್ಳದೆ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಕಾವೇರಿ ಬೇಸಿನ್ ಬಗ್ಗೆ ಮಾತನಾಡಬೇಕಾದರೆ ಸಂಬಂಧಪಟ್ಟ ಜಿಲ್ಲೆಗಳ ಮುಖಂಡರ ಜೊತೆಯಲ್ಲಿ ದಯವಿಟ್ಟು ಮಾತನಾಡಿ, ಹೆಚ್ಚಿನ ವಿವರಗಳನ್ನು ತಿಳಿದುಕೊಂಡು ಮಾತನಾಡಿ. ಅದನ್ನು ಲಂಬಿಸಿ ಮಾತನಾಡುವುದಕ್ಕಿಂತ ಎಷ್ಟು ಬೇಕೋ ಅಷ್ಟನ್ನು ಮಾತನಾಡಿ.

ಶ್ರೀ ಎಂ. ಎಂ. ಖಾರ್ಗೆ.—ಹಣವನ್ನು ಕೊಡಬಾರದು ಎಂದು ಹೇಳುತ್ತಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯ ಖಾರ್ಗೆಯವರು ಮಾತನಾಡುತ್ತಿದ್ದಾರೆ. ಅವರು ಮಾತನಾಡು ತ್ತಿರಬೇಕಾದರೆ, ಮತ್ತೆ ಯಾರೂ ಮಧ್ಯೆ ಮಧ್ಯೆ ಮಾತನಾಡಬಾರದು. ನಿಮಗೆ ಅವಕಾಶ ಸಿಕ್ಕಿದಾಗ ನೀವು ಮಾತನಾಡಬಹುದು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಈಗ ಚರ್ಚೆ ನಡೆಯುತ್ತಿರ ಬೇಕಾದರೆ ಸಂಬಂಧ ಪಟ್ಟ ಸಚಿವರು ಹಾಜರಿರಬೇಕು ಎಂದು ನಾವು ಕೇಳುತ್ತಲೇ ಇರುತ್ತೇವೆ, ತಾವೂ ಕೂಡ ಪದೇ ಪದೇ ತಿಳಿಸುತ್ತಿರುತ್ತೀರಿ. ಒಬ್ಬರು ಮಂತ್ರಿಯವರನ್ನು ಬಿಟ್ಟರೆ ಯಾರು ಮಂತ್ರಿಗಳು ಇಲ್ಲ. ನಾವು ಏತಕ್ಕಾ ದರೂ ಭಾಷಣವನ್ನು ಮಾಡಬೇಕು. ಇದಕ್ಕೆ ಏನು ಘನತೆ ಗೌರವ ಬೇಡವೆ ? ದಯವಿಟ್ಟು ತಾವು ಅಡ್ವೈಸ್ ಮಾಡಿದರೂ ಕೂಡ, ಪ್ರತ್ಯೇಕವಾಗಿ ಹೇಳಿದರೂ ಪಾಲನೆ ಮಾಡುತ್ತಿಲ್ಲ. ಆದ್ದರಿಂದ ದಯವಿಟ್ಟು ನಾವು ಭಾಷಣವನ್ನು ಮುಂದುವರಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಇದ್ದೇನೆ ಎನ್ನುವ ಮಾತನ್ನು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಒಬ್ಬರು ಮಂತ್ರಿವರ್ಯರನ್ನು ಬಿಟ್ಟರೆ ಉಳಿದ ಎಲ್ಲ ಖುರ್ಚಿಗಳು ಖಾಲಿ ಇರುತ್ತವೆ. ಈರೀತಿ ಇರಬೇಕಾದರೆ ಇದು ಈ ಸದನದಲ್ಲಿ ನಾವು ಕುಳಿತುಕೊಂಡು ಕೆಲಸ ಮಾಡ ಲಿಕ್ಕೆ ಸಾಧ್ಯವಿಲ್ಲದೆ ಇರುವ ವಿಚಾರ.

ಶ್ರೀ ಎಂ. ವೀರಪ್ಪಮೊಯಿಲಿ.—ನಾವು ವಿಶೇಷ ದೃಷ್ಟಿಯಿಂದ ಯಾವಾಗಲೂ ನೋಡುತ್ತಿರು ತ್ತೇವೆ, ಮಾನ್ಯ ಮುಖ್ಯಮಂತ್ರಿಗಳು ಸದಸ್ಯರು ಹಾಜರಿಲ್ಲದಿದ್ದರೆ ಡಿಸ್‌ಮಿಸ್ ಮಾಡುತ್ತೇವೆಂದು ಹೇಳಿದ್ದಾರೆ, ಆದರೂ ಕೂಡ ಯಾರೂ ಇಲ್ಲ ಎಂದರೆ ಬಹಳ ಆಶ್ಚರ್ಯವಾಗುತ್ತದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳಾದ ಜಾಲಪ್ಪನವರು ಇದ್ದಾರೆ, ಉಳಿದವರನ್ನು ಕರೆಯಲು ಅವರಿಗೆ ಹೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋದಪಕ್ಷದ ನಾಯಕರು ಹೇಳಿದಂಥ ಮಾತನ್ನು ಖಂಡಿತವಾಗಿಯೂ ಒಪ್ಪುತ್ತೇನೆ. ಇದರಲ್ಲಿ ಯಾವ ವಿಧವಾದ ಅಗೌರವವನ್ನು ತೋರಿಸಬೇಕೆಂದು ಯಾವ ಮಂತ್ರಿಗಳಿಗೂ ಇಲ್ಲ. ಕೆಲವರು ವಿಧಾನ ಪರಿಷತ್ತಿನಲ್ಲಿ ಇದ್ದಾರೆ. ಊಟಕ್ಕೆ ಹೋಗಿರುತ್ತಾರೆ. ಈಗಲೇ ಕರೆಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾವು ಊಟ ಮಾಡಬಾರದೆ ?

ಶ್ರೀ ಆರ್. ಎಲ್. ಜಾಲಪ್ಪ.—ತಾವೂ ಊಟ ಮಾಡಿಕೊಂಡು ಬನ್ನಿ, ಮತ್ತೆ ಊಟಕ್ಕೆ ಹೋಗಿರತಕ್ಕಂಥವರು ಕೆಲವರಿಗೆ ಗ್ಯಾಸ್ಟ್ರಿಕ್ ಟ್ರಬಲ್ ಇರುತ್ತದೆ, ಊಟ ಮಾಡುವುದು ನಿಧಾನವಾಗು ತ್ತದೆ, ಆದ್ದರಿಂದ ನಿಧಾನವಾಗಿ ಬರುತ್ತಾರೆ, ನಾನು ತಾವು ಹೇಳುವುದನ್ನೆಲ್ಲ ನೋಟ್ ಮಾಡಿಕೊಳ್ಳು ತ್ತಿರುತ್ತೇನೆ. ಮತ್ತೆ ಇಲ್ಲಿ ರೆಕಾರ್ಡ್ ಆಗುತ್ತಿರುತ್ತದೆ. ಸಂಬಂಧಪಟ್ಟ ಅಧಿಕಾರಿ ವರ್ಗದವರು ಇದ್ದಾರೆ, ಅವರೂ ಸಹ ನೋಟ್ ಮಾಡಿಕೊಂಡು ಮಾನ್ಯ ಮಂತ್ರಿಗಳಿಗೆ ಕೊಡುತ್ತಾರೆ. ಆದ್ದರಿಂದ ದಯವಿಟ್ಟು ತಾವು ಮಾತನಾಡಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ನೋಟ್ ಮಾಡಿಕೊಳ್ಳತಕ್ಕಂಥ ಪರ್ಯಾಯ ವ್ಯವಸ್ಥೆಯಲ್ಲ. ಜವಾಬ್ದಾರಿ ಹೊಂದಿರತಕ್ಕಂಥ ಮಂತ್ರಿ ಗಳು ಇರಬೇಕು, ಹಾಗಾದರೆ ನಾವೂ ಕೂಡ ಭಾಷಣವನ್ನು ಬರೆದು ಕಳುಹಿಸಬಹುದಾಗಿತ್ತು. ಇಲ್ಲಿ ಭಾಷಣ ಮಾಡುವ ಅಗತ್ಯ ಇರಲಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಇಲ್ಲಿ ರೆಕಾರ್ಡ್ ಆಗುತ್ತಿದೆ. ನಾನೂ ಕೂಡ ನೋಟ್ ಮಾಡಿ ಕೊಂಡಿರುತ್ತೇನೆ. ಅದನ್ನೆಲ್ಲ ನೋಡಿಕೊಂಡೇ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ನೀವು ನೋಟ್ ಮಾಡಿಕೊಳ್ಳುತ್ತಿರಬಹುದು, ಆಫೀಸರ್ ನೋಟ್ ಮಾಡಿಕೊಳ್ಳುತ್ತಿರಬಹುದು. ಮತ್ತು ಇಲ್ಲಿ ರೆಕಾರ್ಡ್ ಕೂಡ ಆಗುತ್ತಿರಬಹುದು. ಇದನ್ನೆಲ್ಲ ನೋಡಿ

ಕೊಂಡು ಉತ್ತರವನ್ನು ಕೊಡುತ್ತಾರೆ ಎನ್ನುವ ಮಾತನ್ನೂ ಕೂಡ ಹೇಳಬಹುದು. ಆದರೆ ನಾವು ಇಲ್ಲಿ ಮಾತನಾಡುತ್ತಿರತಕ್ಕಂಥ ವಿಚಾರ, ಯಾವ ವಿಚಾರ, ಎಷ್ಟು ಪ್ರೆಸ್ ಮಾಡಿ ಆದನ್ನು ನಾವು ಹೇಳುತ್ತಿದ್ದೇವೆ. ಮತ್ತು ಯಾವ ಅಂಕಿಅಂಶಗಳ ಬಗ್ಗೆ ಕಾಳಜಿವಹಿಸಿ ಮಾತನಾಡುತ್ತೇವೆ ಎಂಬುದನ್ನು ಕಣ್ಣಾರೆ ಕಂಡು ಕಿವಿಯಾರೆ ಕೇಳಿದರೆ ಮಾತ್ರ ಅರ್ಥವಾಗುತ್ತದೆ, ಇಲ್ಲದಿದ್ದರೆ ಅರ್ಥವಾಗುವುದಿಲ್ಲ. ಹಾಗಾದರೆ ಯಾವ ಯಾವ ಮಂತ್ರಿಗಳಿಗೆ ಏನೇನು ತೊಂದರೆಯಿರುತ್ತದೆ ಅದನ್ನು ಒಂದು ಪಟ್ಟಿಮಾಡಿಕೊಡಿ. ಒಬ್ಬರಿಗೆ ಗ್ಯಾಸ್ಟ್ರಿಕ್ ಟ್ರಬಲ್ ಮತ್ತೊಬ್ಬರಿಗೆ ಮತ್ತೊಂದು ತೊಂದರೆ ಏತಕ್ಕೆಂದರೆ ನಿಮ್ಮ ಆರೋಗ್ಯವೇ ದೇಶದ ಸೌಭಾಗ್ಯವೆಂದು ತಿಳಿದುಕೊಂಡಿರುತ್ತೇವೆ. ಆದ್ದರಿಂದ ಯಾರುಯಾರಿಗೆ ಏನೇನು ಟ್ರಬಲ್ ಇದೆ ಒಂದು ಪಟ್ಟಿಮಾಡಿಕೊಟ್ಟರೆ ಸ್ವಲ್ಪಸ್ವಲ್ಪವಾದರೂ ನಾವೂ ಕೂಡ ತಿಳಿದು ಕೊಂಡಂತಾಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಕೌನ್ಸಿಲ್‌ನಿಂದ ಬರುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಎಚ್. ಟಿ. ಕೃಷ್ಣಪ್ಪನವರು ಮಾತನಾಡಿದ್ದನ್ನು ನಾನು ಬಹಳ ಗಂಭೀರವಾಗಿ ಕೇಳಿದ್ದೇನೆ. ನಾನು ಕಾವೇರಿ ಬೇಸಿಸ್ ವಿವಾದದ ಬಗ್ಗೆ ಮಾತನಾಡುತ್ತಿರಬೇಕಾದರೆ ನಮ್ಮ ರಾಜ್ಯದ ಹಿತಕ್ಕೆ ಧಕ್ಕೆಬರತಕ್ಕಂಥ ರೀತಿಯಲ್ಲಿ ಮಾತನಾಡುತ್ತಿಲ್ಲ. ನಾವು ಹಣ ಬೇಡುವಾಗ ನಮ್ಮ ಹಿತ ನಿಮಗೆ ಗೊತ್ತಾಗುತ್ತಿಲ್ಲ. ನಾನು ಹೇಳತಕ್ಕಂಥದ್ದು ಇಷ್ಟೇ ಒಂದು ಕಡೆ ತಾವು ಹೇಳುತ್ತಿದ್ದೀರಿ, ಬರಗಾಲ ಬಿದ್ದ ಪ್ರದೇಶಗಳಲ್ಲಿ ಪರ್ಮನೆಂಟ್ ಮೆಜರ್ಸ್ ತೆಗೆದುಕೊಂಡು ಕೆಲಸ ಮಾಡುತ್ತಿದ್ದೇವೆಂದು ಹಾಗೆ ಹೇಳುವಾಗ ಆದೇ ದೃಷ್ಟಿಯಿಂದ ಹಣವನ್ನೂ ಕೂಡ ಒದಗಿಸಿದರೆ ಬಹಳ ಚೆನ್ನಾಗಿರುತ್ತದೆ. ಆ ಕೆಲಸವನ್ನು ತಾವು ಮಾಡುತ್ತಿಲ್ಲ. ಆದಕ್ಕಾಗಿ ಈ ಒಂದು ವಿಷಯವನ್ನು ತಮ್ಮ ಮುಂದಿಟ್ಟಿದ್ದೇನೆ. ಮಾನ್ಯ ಎಚ್. ಟಿ. ಕೃಷ್ಣಪ್ಪನವರು ಮನಸ್ಸಿಗೆ ಏತಕ್ಕೆ ಇಷ್ಟೊಂದು ಹಚ್ಚಿಕೊಳ್ಳುತ್ತಿದ್ದಾರೋ ಗೊತ್ತಾಗುತ್ತಿಲ್ಲ. ನೀರು ಇಲ್ಲದೆ ಇದ್ದರೂ ಕೂಡ ಪ್ರಾಜೆಕ್ಟ್ ಮಾಡಬೇಕು, ನೀರು ಇಲ್ಲದೆ ನೀರು ಏರದೆ ಇದ್ದರೂ ಕೂಡ ಲಿಫ್ಟ್ ಇರಿಗೇಷನ್ ಮಾಡಬೇಕೆಂದು ಹೇಳಿದರೆ ಅದು ಹೇಗೆ ಸಾಧ್ಯವಾಗುತ್ತದೆ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಹೆಚ್ಚು ಹಣವನ್ನು ಕೊಡಬೇಕು ಎನ್ನುವ ಬಗ್ಗೆ ನಿಮಗೆ ಎಷ್ಟು ತೀವ್ರ ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ನಮಗೂ ಇದೆ. ಕಾವೇರಿ ಜಲಾನಯನಕ್ಕೂ ಕೂಡ ಈಗ ಹಣ ಕೊಟ್ಟಿರತಕ್ಕಂಥದ್ದು ಇದೆಲ್ಲ......

(ಗೊಂದಲ)

ಶ್ರೀ ಕೆ. ಎಚ್. ಶ್ರೀನಿವಾಸ್.—ನಾಗಮಂಗಲಕ್ಕೆ ಎಷ್ಟು ನೀರನ್ನು ಹಾಯಿಸಿದರೂ ನೀರು ಹತ್ತುವುದಿಲ್ಲ. ಮಾನ್ಯ ಕೃಷ್ಣಪ್ಪನವರನ್ನು ನೋಡಿಕೊಂಡು ಸಂತೋಷ ಪಡಬೇಕು.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾಲೆಗಳ ಕೆಲಸ ನಡೆಯುತ್ತಿದೆ. ಇನ್ನು ಒಂದು ವರ್ಷದಲ್ಲಿಯೇ ನಮ್ಮ ತಾಲ್ಲೂಕಿಗೆ ನೀರು ಕೊಡುವುದಾಗಿ ಭರವಸೆಯನ್ನು ಸರ್ಕಾರದವರು ಕೊಟ್ಟಿದ್ದಾರೆ. ಕೆಲವೊಂದು ವಿಚಾರಗಳು ಗೊತ್ತಿಲ್ಲದೆ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಊರಿಗೆ ನೀರು ಬಂದರೆ ಬಹಳ ಸಂತೋಷ. ಸರ್ಕಾರದವರು ಒಂದೇ ಕಡೆ ಈರೀತಿಯಾದ ಕೆಲಸಗಳನ್ನು ನಡೆಸುತ್ತಿದ್ದರೆ ರೀಜಿನಲ್ ಇಂಬ್ಯಾಲೆನ್ಸ್ ಉಂಟಾಗುತ್ತದೆ. ಇದನ್ನು ಸರಿಪಡಿಸುವುದಕ್ಕೆ ಯಾವರೀತಿ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದು ಒಂದು ವಿಚಾರ. ಎರಡನೆಯದಾಗಿ ಮಾನ್ಯ ಎಸ್. ಆರ್. ಬೊಮ್ಮಾಯಿಯವರು ಮಾತನಾಡುವಾಗ ಹೇಳಿದರು ಹಿಂದಿನ ಸರ್ಕಾರದವರು ಬರಗಾಲದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಬೇಕಿತ್ತೋ ಅಷ್ಟು ಹಣವನ್ನು ಖರ್ಚು ಮಾಡಲಿಲ್ಲ ಎಂದು ಹೇಳಿದರು. ನಾವು ೭೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದರು. ಮಾನ್ಯ ವೀರಪ್ಪಮೊಯಲಿಯವರು ೨೩–೧–೧೯೮೬ರಲ್ಲಿ ಪಿ.ಎ.ಸಿ. ಕಮಿಟಿಯ ರಿಪೋರ್ಟ್ ಇಟ್ಟಿದ್ದಾರೆ. ಅನೇಕ ಮಾನ್ಯ ಸದಸ್ಯರು ಆದನ್ನು ಓದಿರಬಹುದು. ಮಾನ್ಯ ಎಚ್. ಟಿ. ಕೃಷ್ಣಪ್ಪನವರೂ ಸಹ ಓದಿರಬಹುದು. ಮಾನ್ಯ ಮಂತ್ರಿಗಳು ಅದನ್ನು ಮೊದಲೇ ಓದಿರಬಹುದೆಂದು ತಿಳಿದುಕೊಳ್ಳುತ್ತೇನೆ. ಆದರೆ ಇಲ್ಲಿ ಮಾತನಾಡಿದವರು ಹೇಳಿದರು, ಹಿಂದಿನ ಸರ್ಕಾರ ೧೯೮೧–೮೨ರಲ್ಲಿ ಕೇವಲ ೬ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ, ಆದಕ್ಕಿಂತ ಜಾಸ್ತಿ ಏನು ಖರ್ಚು ಮಾಡಿಲ್ಲವೆಂದು ಹೇಳಿದರು.

೨-೩೦ ಪಿ. ಎಂ.

ಅದಕ್ಕೆ ಅಧ್ಯಕ್ಷರೇ, ಅವರ ಗಮನಕ್ಕೆ ತಮ್ಮ ಮುಖಾಂತರ ತರುತ್ತಿದ್ದೇನೆ, ಏನೆಂದರೆ, ೧೯೮೦-೮೧ ರಲ್ಲಿ ಸೆಂಟ್ರಲ್ ಗವರ್ನಮೆಂಟ್ ಸೀಲಿಂಗ್ ಎಷ್ಟು ಇತ್ತು, ಎಂದರೆ ೬೬೫ ಲಕ್ಷ ಇತ್ತು. ಆದರೆ ಖರ್ಚು ಮಾಡಿದ್ದು ೯೫೪ ಲಕ್ಷಗಳು. ೧೯೮೧-೮೨ ರಲ್ಲಿ ಸೀಲಿಂಗ್ ಫಿಕ್ಸ್ ಮಾಡಿದ್ದು ೧೩೮೧ ಲಕ್ಷಗಳು, ಆದರೆ ಖರ್ಚು ಮಾಡಿದ್ದು ೨೫೮೭ ಲಕ್ಷ. ಇದು ಇರತಕ್ಕಂಥ ವಾಸ್ತವಾಂಶ. ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್ ಪ್ರಕಾರ "The Committee called for a detailed report on the total expenditure incurred under scarcity relief measures and the central assistance received during the year 1980-81 to 1984-85. The information furnished to the Committee is summarisedbelow." ಅದಕ್ಕೆ ಈ ರೀತಿಯಾಗಿ ಫರ್ನಿಶ್ ಮಾಡಿದ ಅಕೌಂಟ್ಸ್‌ನ್ನು ರಿಪೋರ್ಟ್‌ನಲ್ಲಿ ಕೊಟ್ಟಿದ್ದಾರೆ. ಅವರು ಕೂಡ ಈಗಾಗಲೇ ೬ ಕೋಟಿ ಖರ್ಚು ಮಾಡಿದ್ದಾರೆ. ಹಿಂದಿನ ಸರ್ಕಾರ ಖರ್ಚು ಮಾಡಿಲ್ಲವೇ ಎಂದು ವಿತಂಡವಾದ ಇಡುವುದು ಬೇಡ. ನಾವು ಮಾಡಿಲ್ಲವೆಂದು ಒಪ್ಪಿಕೊಳ್ಳುತ್ತೇವೆ. ನೀವೂ ಮಾಡಿಲ್ಲ, ಆದ್ದರಿಂದ ನಾವು ಮಾಡುವುದಿಲ್ಲ ಎನ್ನುವುದಾದರೆ, ಈ ವಾದ ನಿಮಗೇ ಬಿಟ್ಟಿದ್ದು. ಈ ವಾದ ಸರಿಯಲ್ಲ. ಈ ದೇಶದ ಜನ ಸಾಯುತ್ತಿದ್ದಾರೆ ಆದ್ದರಿಂದ ದಯವಿಟ್ಟು ಇಂತಹ ಮೊಂಡು ವಾದವನ್ನು ಇಡಬೇಡಿ. ಸರಿಯಾದ ರೀತಿಯಲ್ಲಿ ಖರ್ಚು ಮಾಡಿ ಇವತ್ತು ಹೆಚ್ಚು ಹಣ ಪಡೆಯಂತಕ್ಕಂಥಾದನ್ನು ಮಾಡಬೇಕು. ಗವರ್ನಮೆಂಟ್ ಆಫ್ ಇಂಡಿಯಾದವರು ಸೀಲಿಂಗ್ ಫಿಕ್ಸ್ ಮಾಡಿದರೂ ಕೂಡ, ೧೯೮೩-೮೪ ರಲ್ಲಿ ೧೯೦೦ ಲಕ್ಷ ಇದ್ದರೆ ಖರ್ಚು ಮಾಡಿದ್ದು ೩೧೫೭ ಲಕ್ಷ ಸೆಂಟ್ರಲ್ ಅಸಿಸ್ಟೆನ್ಸ್ ಪಡೆದುಕೊಂಡಿದ್ದು ೪೧೩ ಲಕ್ಷ ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಪ್ರಾಪರ್ ಅಕೌಂಟಿಂಗ್ ಮಾಡದೇ ಇದ್ದ ಪಕ್ಷದಲ್ಲಿ ಈ ರೀತಿಯಾಗಿ ಅಸಿಸ್ಟೆನ್ಸ್ ಕಡಿಮೆ ಸಿಗುತ್ತದೆ. ಇದನ್ನು ಹೇಳಿದರು ದೇವೇಗೌಡರಿಗೆ ಸಿಟ್ಟು ಬರುತ್ತದೆ ಬೊಮ್ಮಾಯಿಯವರನ್ನು ಕೇಳಿದರು ಅವರಿಗೆ ರಕ್ತದ ಒತ್ತಡ ಬರುತ್ತದೆ. ಇವತ್ತು ಏನಾಗಿದೆ ಎಂದರೆ, ಪಾಪ. ನಮ್ಮ ಮುಖ್ಯಮಂತ್ರಿಗಳು ಕೇವಲ ಮೂರು-ನಾಲ್ಕು ಜನ ಮಂತ್ರಿಗಳು ಹೇಳಿದ್ದನ್ನು ಕೇಳುತ್ತಾರೆ ಎಂಬುದು ಜನರ ನಂಬಿಕೆಯಾಗಿದೆ. ಮುಂದೆ ಶ್ರೀ ರಾಚಯ್ಯ, ಹಿಂದೆ ಶ್ರೀ ನಜೀರ್ ಸಾಬ್, ಬಲಗಡೆ ಶ್ರೀ ದೇವೇಗೌಡರು, ಮತ್ತು ಎಡಗಡೆ ಶ್ರೀ ಬೊಮ್ಮಾಯಿಯವರು ಇದ್ದಾರೆ.

ಅಧ್ಯಕ್ಷರು.—ಅಂದರೆ ಚತುರ ಮಹರ್ಷಿಗಳು ಎನ್ನುತ್ತೀರೊ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ,— ಹೌದು. ಆದರೆ ಜಾಲಪ್ಪನವರು ಮಾತ್ರ ಕೊನೆ ಸ್ಥಾನದಲ್ಲಿದ್ದಾರೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಈ ರೀತಿಯಾಗಿ ತಾರತಮ್ಯ ಮಾಡಬಾರದು. ಮತ್ತು ಹಿಂದಿನ ಸರ್ಕಾರ ಕೂಡ ಆವತ್ತಿನ ಪರಿಸ್ಥಿತಿ ಪ್ರಕಾರ ಕೆಲಸ ಮಾಡಿದೆ. ಇವತ್ತಿನ ದಿವಸ ಐವತ್ತು ಲಕ್ಷ ಜನ ಕೆಲಸ ಇಲ್ಲದೆ ಇದ್ದಾರೆ, ಆದ್ದರಿಂದ ಐವತ್ತು ಲಕ್ಷ ಜನರಿಗೂ ಕೆಲಸ ಕೊಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ ಕೊನೆಪಕ್ಷ ೧೫ ಲಕ್ಷ ಜನರಿಗಾದರೂ ಕೆಲಸ ಕೊಡಬೇಕು ಮತ್ತು ಇದಕ್ಕಾಗಿ ಒಂದೂವರೆ ಕೋಟಿ ಖರ್ಚು ಮಾಡಬೇಕಾಗುತ್ತದೆ. ನಮ್ಮ ಕಮಿಟಿಯವರು ಆರು ತಿಂಗಳ ಹಿಂದೆಯೇ ಹೇಳಿದ್ದಾರೆ ಏನೆಂದರೆ ಪ್ರತಿದಿನ ಒಂದು ಕೋಟಿ ಖರ್ಚು ಮಾಡಬೇಕು ಎಂದು. ನೀರಿಗಾಗಿ ೪೦ ಕೋಟಿ, ಜೀವರಾಶಿಗಳಿಗಾಗಿ ೨೦ ಕೋಟಿ ಖರ್ಚು ಮಾಡಬೇಕಾಗುತ್ತದೆ ಎಂದು ವಾದವನ್ನು ಇಟ್ಟಾಗ 'ನೋಡೋಣ' ಎಂದು ಹೇಳಿದರು. ಇವತ್ತು ಅಸೆಂಬ್ಲಿ ಪ್ರಾರಂಭ ಆಗುವುದಕ್ಕೆ ಮುಂಚೆ 'ಪ್ರತಿದಿನ ಒಂದು ಕೋಟಿ ಖರ್ಚು ಮಾಡುತ್ತೇವೆ' ಎಂದು ಸ್ಟೇಟ್‌ಮೆಂಟ್ ಅನ್ನು ಕೊಡುತ್ತಿದ್ದಾರೆ. ಇದನ್ನು ಹಿಂದೆ ನಾವು ಹೇಳಿದಾಗ ಏಕೆ ಸರಿಹೋಗಲಿಲ್ಲ ? ಇನ್ನೂರು ದಿವಸ ಆದಮೇಲೆ ಖರ್ಚು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ೬೬೧ ಲಕ್ಷ ಮ್ಯಾನ್‌ಡೇಸ್‌ಗೆ ಖರ್ಚು ಮಾಡಿದ್ದು ೫೭ ಕೋಟಿ. ಹೇಳಿಕೊಂಡಿದ್ದೇ ಜಾಸ್ತಿ, ಎಲ್ಲಾ ಕಡೆ ಪ್ರಚಾರ ಕೊಟ್ಟಿದ್ದೇ ಕೊಟ್ಟಿದ್ದು. ಜನತಾ ಎಂ. ಎಲ್. ಎ. ಗಳನ್ನು ಕರೆದು ಕೇಳಿ, ಅವರೇ ಹೇಳುತ್ತಾರೆ. ಕೆಲಸ ಏನೂ ನಡೆದಿಲ್ಲವೆಂದು ಅವರೇ ಹೇಳುತ್ತಾರೆ. ಇದು ಸತ್ಯ. ನೀವು ಕೇಳಿಕೊಳ್ಳಿ ಬೇಕಾದರೆ. ನಾನು ಸುಮ್ಮನೆ ಹೇಳುತ್ತಿಲ್ಲ.

ಶ್ರೀ ಡಿ. ಟಿ. ಜಯಕುಮಾರ್— ನಿಮ್ಮ ಕಡೆಯವರೇ ಹೇಳಿದ್ದಾರೆ. ನಿಮ್ಮ ಕಡೆ ಶಾಸಕರು ಏನು ಹೇಳುತ್ತಾರೆ ಎಂದರೆ, 'ವಿರೋಧಪಕ್ಷದಲ್ಲಿ ಒಗ್ಗಟ್ಟೇ ಇಲ್ಲ. ನೀವು ಸ್ವಲ್ಪ ದಬಾಯಿಸಿ ಹೇಳಿ' ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕಮಿಟಿ ಎದುರುಗಡೆ ಬಂದು ಹೇಳಿದ್ದಾರೆ. ಹತ್ತು ಮಂದಿ ಶಾಸಕರು ನಮ್ಮ ಜೊತೆಯಲ್ಲಿ ಇದ್ದರು. ಒಪ್ಪಿಕೊಂಡು ರಿಪೋರ್ಟ್ ಕೊಟ್ಟಿದ್ದಾರೆ. ಇದು ತಪ್ಪಾ ? ಇದು ಸತ್ಯಕ್ಕೆ ದೂರವಾದದ್ದೇ ?

ಶ್ರೀ ಡಿ. ಟಿ. ಜಯಕುಮಾರ್.— ಅಧ್ಯಕ್ಷರೇ, ...

ಅಧ್ಯಕ್ಷರು.— ಶ್ರೀ ಜಯಕುಮಾರ್‌ರವರೇ, ಇಲ್ಲಿ ಸ್ವಲ್ಪ ಕೇಳಿ. ನೀವು ಹೊಸಬರು, ಸ್ವಲ್ಪ ಓದಿಕೊಂಡು ಕೇಳಿ. ಮಾತನಾಡುವಾಗ ಸರ್ಕಾರ ಏನು ಕೆಲಸ ಮಾಡಿದೆಯೆಂದು ನೀವು ಹೇಳಬೇಕಿತ್ತು. ಅದನ್ನು ನೀವು ಬಿಟ್ಟು ಬಿಟ್ಟಿರಿ. ಈಗ ನಡುವೆ ಮಾತನಾಡಿದರೆ ಹೇಗೆ ?

ಶ್ರೀ ಡಿ. ಟಿ. ಜಯಕುಮಾರ್.— ಸ್ವಾಮಿ, ಮಾನ್ಯ ಖರ್ಗೆಯವರು ಮೂರು ಸಲ ಮಂತ್ರಿಗಳಾಗಿದ್ದರು. ನಾನು ಹೊಸಬ. ನಮ್ಮಿಬ್ಬರನ್ನು ಹೋಲಿಸುತ್ತೀರಾ ತಾವು ?

ಶ್ರೀ ಆರ್. ಎಲ್. ಜಾಲಪ್ಪ.— ಅಧ್ಯಕ್ಷರೇ, ಬಹಳ ಮಂದಿ ವಿರೋಧ ಪಕ್ಷದ ಶಾಸಕರು ನನಗೆ ಹೇಳಿದ್ದಾರೆ. ಏನೆಂದರೆ "ಕೆಲಸ ಬಹಳ ಚೆನ್ನಾಗಿ ಮಾಡುತ್ತಿದ್ದೀರಿ. ನಾವು ವಿರೋಧಕ್ಕೋಸ್ಕರ ವಿರೋಧ ಮಾಡಬೇಕಾಗುತ್ತದೆ" ಎಂದು. ಅವರುಗಳ ಹೆಸರುಗಳನ್ನು ಇಲ್ಲಿ ಹೇಳುವುದು ಬೇಡ. ಹೇಳಿ ಎಂದರೆ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈ ಸರ್ಟಿಫಿಕೇಟ್‌ನಿಂದಲೇ ನಿಮಗೆ ಸಂತೋಷವಾಗಿದ್ದರೆ, ಕೆಲಸ ಮಾಡುವುದು ಬೇಡ ಎಂದರೆ, ಕೆಲಸ ಮಾಡಬೇಡಿ. ಇದು ನಾವು ಕೊಟ್ಟಂತಹ ವರದಿಯ ಆಧಾರದ ಮೇಲೆ ಹೇಳುತ್ತಿದ್ದೇನೆಯೇ ಹೊರತು ನಾನೇ ಏನಾದರೂ ತಯಾರು ಮಾಡಿಕೊಂಡು ಹೇಳತಕ್ಕದ್ದಲ್ಲ. ಪಿ. ಎ. ಸಿ. ರಿಪೋರ್ಟ್ ಇದೆ, ಅವರು ಕೊಟ್ಟಂತಹ ವರದಿ ಇದೆ, ಅದರ ಆಧಾರದ ಮೇಲೆ ನಮ್ಮ ಶಾಸಕರು ರೆಪ್ರಸೆಂಟ್ ಮಾಡತಕ್ಕದ್ದರ ಮೇಲೆ ಇವತ್ತಿನ ದಿವಸ ನಾನು ಹೇಳತಕ್ಕದ್ದು. ಒಳ್ಳೆಯ ಕೆಲಸ ನಡೆದಿದೆ ಎಂದು ಅವರು ಸರ್ಟಿಫಿಕೇಟ್ ಕೊಟ್ಟರೆ ಕೆಲಸ ನಿಲ್ಲಿಸಿಬಿಡಿರಿ. ಮಾನ್ಯ ಅಧ್ಯಕ್ಷರೇ, ಪಿ. ಎ. ಸಿ. ಯವರು ಕೂಡ ಒಂದು ಸಲಹೆಯನ್ನು ಕೊಟ್ಟಿದ್ದರು.

ಅವರು ರಿಪೋರ್ಟ್ ಕೊಟ್ಟಿದ್ದು ೨೩ನೇ ತಾರೀಖು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಏಕೋ ನನ್ನ ಭಾಷಣಕ್ಕೆ ವಿಘ್ನಗಳೇ ಜಾಸ್ತಿ ಬರುತ್ತಿವೆ. ಸರ್ಕಾರವೂ ಸೀರಿಯಸ್ಸಾಗಿಲ್ಲ. ನಾನು ನಿಮ್ಮ ಕಡೆ ನೋಡಿದರೆ ತಾವೂ ನಮ್ಮ ಕಡೆ ಗಮನ ಕೊಡುತ್ತಿಲ್ಲ.

ಶ್ರೀ ಬಸವರಾಜ್.— ನಿನ್ನೆ ಮೊನ್ನೆ ಅವರು...

ಅಧ್ಯಕ್ಷರು.— ನೀವು ನಿಮಗೆ ಅವಕಾಶ ಸಿಕ್ಕಾಗ ಮಾತನಾಡಿ. ನಡುನಡುವೆ ಏತಕ್ಕೆ ಮಾತನಾಡುತ್ತೀರಿ ? ಸರ್ಕಾರದವರು ಮೆಟೀರಿಯಲ್ಸ್ ಕೊಟ್ಟಿದ್ದಾರಲ್ಲ ಅದನ್ನು ಓದಿಕೊಳ್ಳಿ, ಚೆನ್ನಾಗಿ ಕೆಲಸ ಆಗಿದೆಯೋ ಇಲ್ಲವೋ ನೋಡಿ. ನೋಡಿ ಆಮೇಲೆ ಡಿಫೆಂಡ್ ಮಾಡಿ ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ.— ೨೩ನೇ ತಾರೀಖು ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್ ಕೊಟ್ಟು ಅದರಲ್ಲಿ ಏನು ಹೇಳಿದ್ದಾರೆಂದರೆ–

> "The Committee observes that the amount of Rs. 152 crores reported as spent on famine relief in 1984-85 includes expenditure on annual plan programmes. Such exdenditure on plan programmes would have been incurred by the State Government even under normal conditions".

ಇದೇ ಇವರು ಹೇಳಿಕೊಳ್ಳುವುದು. ೧೫೦ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ೧೫೭ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಇವರೂ ಕೂಡ ಅದೇ ಹೇಳುತ್ತಿದ್ದಾರೆ. ರಿಲೀಫ್ ವರ್ಕ್ಸ್‌ಗೆ ಹೆಚ್ಚು ಹಣ ಕೊಟ್ಟು ಕೆಲಸವನ್ನು ತೆಗೆದುಕೊಳ್ಳುತ್ತಿಲ್ಲ. ನಾರ್ಮಲ್ ಪೀರಿಯಡ್‌ನಲ್ಲಿ ನಾರ್ಮಲ್ ಸ್ಕೀಂನಲ್ಲಿ, ಪ್ರೋಗ್ರಾಂಸ್‌ನಲ್ಲಿ ಏನು ಕೆಲಸ ಮಾಡಬೇಕಾಗಿತ್ತೋ ಅದನ್ನು ಮಾತ್ರ ಮಾಡಿದ್ದಾರೆಯೇ ಹೊರತು ಎಕ್ಸ್‌ಟ್ರಾ ಕೇರ್ ಎಕ್ಸ್‌ಟ್ರಾ ಪೆಯಿನ್ಸ್ ತೆಗೆದುಕೊಂಡು ಹೆಚ್ಚಿನ ಹಣ ಖರ್ಚು ಮಾಡಿ ಜನರಿಗೆ

ರಿಲೀಫ್ ಕೊಟ್ಟಿಲ್ಲ, ಆದ್ದರಿಂದ ನಾನು ಕೇಳಿಕೊಳ್ಳುವುದು ಇಷ್ಟೆ, ಜನವರಿ, ಫೆಬ್ರುವರಿ, ಮಾರ್ಚ್, ಏಪ್ರಿಲ್, ಮೇ ಈ ಮೂರು ನಾಲ್ಕು ತಿಂಗಳಂತೂ ಪರಿಸ್ಥಿತಿ ಬಹಳ ಗಂಭೀರ ಇರುತ್ತದೆ. ಅದಕ್ಕೆ ದಯವಿಟ್ಟು ಕನಿಷ್ಟಪಕ್ಷ ಒಂದೂವರೆ ಕೋಟಿ ರೂಪಾಯಿಗಳಾದರೂ ಎಂಪ್ಲಾಯ್‌ಮೆಂಟ್ ಜನರೇಷನ್‌ಗೆ ಕೊಡಬೇಕು. ಇಲ್ಲದಿದ್ದರೆ ದೊಡ್ಡ ಅನಾಹುತವಾಗುತ್ತದೆ ಎಂಬ ಎಚ್ಚರಿಕೆಯನ್ನು ಈ ಸಂದರ್ಭದಲ್ಲಿ ಕೊಡುತ್ತಿದ್ದೇನೆ. ಎರಡನೆಯದಾಗಿ ಖಾರೀಫ್ ಕ್ರಾಪ್ ಫೈಲ್ಯೂರ್ ಆಯಿತು. ರಾಬಿ ಕ್ರಾಪ್ ಫೈಲ್ಯೂರ್ ಆಯಿತು. ಪತ್ರಿಕೆಯವರು ಜನತಾ ಪಕ್ಷವನ್ನು ಹೊಗಳಿ ಹೊಗಳಿ ಮೇಲೆ ತಂದು ಕೂಡಿಸಿದ್ದರು. ಅವರೂ ಕೂಡ ಈಗ ಏನು ಹೇಳುತ್ತಿದ್ದಾರೆಂದರೆ ಸರ್ಕಾರ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮವನ್ನು ನಿಲ್ಲಿಸಿ ಕೇವಲ ಪಬ್ಲಿಸಿಟಿಕ್ ಮೆಷರ್ಸ್ ಅಂದರೆ ಪ್ರಸಿದ್ಧಿ ಪಡೆದುಕೊಳ್ಳಬೇಕು, ಪಾಪ್ಯುಲರ್ ಆಗಬೇಕು ಎಂಬ ದೃಷ್ಟಿಯಿಂದ ಹಣ ಖರ್ಚು ಮಾಡುತ್ತಿದ್ದಾರೆಯೇ ಹೊರತು ಅಭಿವೃದ್ಧಿ ಕಾರ್ಯವನ್ನು ಗಾಳಿಗೆ ತೂರಿದ್ದಾರೆ ಎಂಬ ಮಾತನ್ನು ಸುಮಾರು ಮೂರು ನಾಲ್ಕು ಸೀರೀಸ್‌ನಲ್ಲಿ ಡೆಕ್ಕನ್ ಹೆರಾಲ್ಡ್ ಎಡಿಟೋರಿಯಲ್‌ನಲ್ಲಿ ಹೇಳಿದ್ದಾರೆ. ಅದಕ್ಕೆ ಕೌಂಟರ್ ಸ್ಟೇಟ್‌ಮೆಂಟನ್ನು ಪ್ಲಾನಿಂಗ್ ಸೆಕ್ರೆಟರಿಯವರು ಕೊಟ್ಟಿದ್ದಾರೆ. ಕೃಷಿ ಮಂತ್ರಿ ಪ್ರಕಾಶ್ ಅವರು ಹೇಳುವುದೇ ಒಂದು, ಮುಖ್ಯಮಂತ್ರಿಗಳು ಹೇಳುವುದೇ ಒಂದು, ಪರಿಸ್ಥಿತಿ ಇರುವುದೇ ಒಂದು. ತಮ್ಮ ಗಮನಕ್ಕೆ ತರುತ್ತಿದ್ದೇನೆ ಅಧ್ಯಕ್ಷರೆ, ಮೂರನೇ ತಾರೀಖು ಡೆಕ್ಕನ್ ಹೆರಾಲ್ಡ್ ಎಡಿಟೋರಿಯಲ್‌ನಲ್ಲಿ ಬಂದಿದೆ. ಮೊದಲು ಅವರು ಡೆಸ್ಪ್ರಾಯಿಂಗ್ ಪಾಲಿಸಿ ಎಂದು...

ಅಧ್ಯಕ್ಷರು.— ನಿಮ್ಮ ಭಾಷಣ ಪ್ರಾರಂಭ ಆಗಿ ಒಂದು ತಾಸು ೧೫ ನಿಮಿಷ ಆಯಿತು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಅದರಲ್ಲಿ ೧೫ ನಿಮಿಷ ನೀವು, ಅವರು ಇವರು ಮಾತನಾಡಿದ್ದಕ್ಕೆ ಆಯಿತು. "Distroying the balance" ಎಂಬ ಹೆಡ್ಡಿಂಗ್ ಕೆಳಗೆ ಈ ರೀತಿ ಬರೆದಿದ್ದಾರೆ.

> "In reply to an editorial in this paper (Mortgaging Development), the planning secretary, speaking on behalf of the State Government, has said thht due to drought, the estimated foodgrain production for the year 85–86 is about 44–14 lakh tonnes as against the target of 82 lakh tonnes, or almost 50% short"
>
> "The claim made by the State Government that last year the drought was so severe as to be 'unprecedented in this century' can also be questioned. Through repeated many times later, it was first made by the State Revenue Minister S. R. Bommai in the State Assembly on September 2 last year, one day prior to the State Agriculture Minister's statement to the House that the estimated foodgrain production for 85–86 was 57 lakh tonnes".

ಒಬ್ಬರು ೪೪ ಎಂದು ಹೇಳುವುದು. ಇನ್ನೊಬ್ಬರು ೫೪ ಎಂದು ಹೇಳುವುದು. ಸೆಕ್ರೆಟರಿಯವರು ಇನ್ನೊಂದು ಹೇಳುವುದು. ಈ ರೀತಿ ಆಗಿದೆ.

ಶ್ರೀ ಆರ್. ಎಲ್. ಜಾಲಪ್ಪ.— ಸಂಬಂಧಪಟ್ಟ ಮಂತ್ರಿಗಳು ಅದಕ್ಕೆ ವಿವರಣೆ ಕೊಟ್ಟಿದ್ದಾರೆ. ಅದನ್ನು ಓದಿ. ನೀವು ಅದನ್ನು ಓದಿದಹಾಗೆ ಕಾಣಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ.— ರಾಜ್ಯಪಾಲರ ಭಾಷಣದಲ್ಲಿ ೪೪ ಎಂದು ಬಂದಿದೆ. ತಮ್ಮನ್ನು ಹೊಗಳುತ್ತಿದ್ದ ಪೇಪರ್‌ನವರು ಈಗ ಏನು ಹೇಳುತ್ತಿದ್ದಾರೆಂದರೆ.—

> "The figures and arguments presented in the second clarification only assist in demonstrating once again how the State Government is misleading the people".

ಶ್ರೀ ಆರ್. ಎಲ್. ಜಾಲಪ್ಪ.—ಯಾವುದೋ ಪತ್ರಿಕೆಯಲ್ಲಿ ಅವರ ಸ್ವಂತ ಅಭಿಪ್ರಾಯ ಬರೆದಿದ್ದಾರೆ. ಅದೇ ವೇದವಾಕ್ಯ ಅಲ್ಲ. ಎಡಿಟೋರಿಯಲ್ ವೇದವಾಕ್ಯ ಅಲ್ಲ. ಅದನ್ನು ನಂಬಿಕೊಂಡು ಮಾತನಾಡುವುದು ನಿಮಗೆ ಭೂಷಣವಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಯಾವುದು ವೇದವಾಕ್ಯ ?

ಶ್ರೀ ಆರ್. ಎಲ್. ಜಾಲಪ್ಪ.—ಒಬ್ಬೊಬ್ಬರು ಒಂದೊಂದು ತರಹ ಬರೆಯುತ್ತಾರೆ. ಹಿಂದೂ ಪತ್ರಿಕೆ ಸ್ಟ್ಯಾಂಡರ್ಡ್ ಪತ್ರಿಕೆ. ಅವರು ಏತಕ್ಕೆ ಬರೆಯಲಿಲ್ಲ ? ಡೆಕ್ಕನ್ ಹೆರಾಲ್ಡ್ ಕೂಡ ಸ್ಟ್ಯಾಂಡರ್ಡ್ ಇಲ್ಲ ಎಂದು ಹೇಳುವುದಿಲ್ಲ, ಎಡಿಟೋರಿಯಲ್‌ನಲ್ಲಿ ಅವರಿಗೆ ತೋಚಿದ್ದು ಬರೆಯುತ್ತಾರೆ. ಅವರ ಅಭಿಪ್ರಾಯ ಅದು. ಎಡಿಟರ್ ಅಭಿಪ್ರಾಯ ಅದು.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾತ್ಪರ್ಯದಿಂದ ಏನು ಹೇಳುತ್ತಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಕೇಳಬೇಕು. ಕೃಷಿ ಮಂತ್ರಿಗಳು ತಮ್ಮ ಇಲಾಖೆಯಲ್ಲಿ ಹೆಚ್ಚು ಅಭಿವೃದ್ಧಿಯಾಗಿದೆ ಎಂದು ಅಂಕಿಅಂಶಗಳನ್ನು ಕೊಡುವುದು ಆಮೇಲೆ ರೆವಿನ್ಯೂ ಮಂತ್ರಿಗಳು ಬರಗಾಲದ ಬಗ್ಗೆ ಹೆಚ್ಚು ಫಿಗರ್ಸ್ ಕೊಟ್ಟರೆ ಸರಿಯಿಲ್ಲ ಎಂದು ಅವರು ಒಂದು ರೀತಿ ಕೊಡುವುದು, ಪ್ಲಾನಿಂಗ್ ಸೆಕ್ರೆಟರಿಯವರು ಇನ್ನೊಂದು ಕೊಡುವುದು, ಹೀಗೆ ಮೂರು ನಾಲ್ಕು ಅಂಕಿಸಂಖ್ಯೆಗಳನ್ನು ತೆಗೆದುಕೊಂಡು ಒಂದೇ ಸಬ್ಜೆಕ್ಟ್ ಬಗ್ಗೆ ಪತ್ರಿಕೆಯಲ್ಲಿ ಬರೆದಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಪ್ರಕಾಶ್ ಅವರು ವಿವರಣೆ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಒಂದೇ ಸರ್ಕಾರದ ನಾಲ್ಕು ಜನ ಪ್ರತಿನಿಧಿಗಳು ಬೇರೆ ಬೇರೆ ಅಂಕಿಸಂಖ್ಯೆಗಳನ್ನು ಇಲ್ಲಿ ಕೊಟ್ಟಿದ್ದಾರೆ. ಅದೆಲ್ಲಾ ಉಲ್ಲೇಖ ಮಾಡಿದ್ದಾಗೆ. ಡೆಕ್ಕನ್ ಹೆರಾಲ್ ಎಡಿಟೋರಿಯಲ್‌ನಲಿ ಸ್ವಂತ ಸ್ಟಾಟಿಸ್ಟಿಕ್ಸ್ ಕೊಟ್ಟಿಲ್ಲ. ತಾವು ಉತ್ತರ ಕೊಡುವಾಗ ಕ್ಲಾರಿಫೈ ಮಾಡಿ. ಇಲ್ಲಿಯವರೆಗೆ ಕ್ಲಾರಿಫಿಕೇಷನ್ ಬಂದಿಲ್ಲ ಎಂಬುದು ಅವರ ವಾದ. ಪತ್ರಿಕೆಯವರು ಬರೆಯುವುದು ವೇದವಾಕ್ಯ ಅಲ್ಲ ಎಂದು ಈಗ ಹೇಳುತ್ತೀರಿ. ಪತ್ರಿಕಾ ಸ್ವಾತಂತ್ರ್ಯ ಇದೆ, ಪತ್ರಿಕಾ ಮೌಲ್ಯಗಳನ್ನು ಕಾಪಾಡಬೇಕು ಎಂದು ಹೇಳುವುದು ಒಂದು ಕಡೆ, ಅವರು ಹೇಳಿದ್ದೇ ವೇದವಾಕ್ಯ ಅಲ್ಲ ಎಂದು ಹೀಯಾಳಿಸುವುದು ಇನ್ನೊಂದು ಕಡೆ.

ಶ್ರೀ ಆರ್. ಎಲ್. ಜಾಲಪ್ಪ.—ಅವರು ಬರೆದದ್ದು ತಪ್ಪು ಎಂದು ಹೇಳಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅನುಕೂಲ ಆದರೆ ಪತ್ರಿಕಾ ಸ್ವಾತಂತ್ರ್ಯ ಇದೆ ಅದು ಸರಿ ಎಂದು ಹೇಳುವುದು, ಅನಾನುಕೂಲವಾದರೆ ವೇದವಾಕ್ಯ ಅಲ್ಲ ಎಂದು ಹೇಳುವುದು.

ಶ್ರೀ ಆರ್. ಎಲ್. ಜಾಲಪ್ಪ.—ಪತ್ರಿಕಾ ಕಛೇರಿಗೆ ಲಗ್ಗೆ ಹಾಕಿರುವವರು ಪತ್ರಿಕಾ ಸ್ವಾತಂತ್ರ್ಯದ್ದ ಬಗ್ಗೆ ಹೇಳಬೇಕಾಗಿಲ್ಲ. ಅವರು ಬರೆದಿರುವ ಬಗ್ಗೆ ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ ಎಂದು ಹೇಳಿದೆ ಅಷ್ಟೆ. ಅವರ ವ್ಯೂ ಅವರು ಹೇಳಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ —ಹೀಯಾಳಿಸಿದರು ಎಂಬ ಅರ್ಥ ಬರುವ ರೀತಿಯಲ್ಲಿ ಮಾತನಾಡಲಿಲ್ಲ. ಪತ್ರಿಕೆಯಲ್ಲಿ ಬಂದ ವಿಚಾರವನ್ನೇ ಸಂಪೂರ್ಣ ಸತ್ಯ ಎಂದು ತಿಳಿದುಕೊಳ್ಳಬಾರದು ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಮಂತ್ರಿಗಳು ಹೇಳುತ್ತಾರೆ. ತಾವು ಕೂತ್ಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಜಾಲಪ್ಪನವರೇ, ಯಾವ ಪೇಪರ್‌ದು ವೇದವಾಕ್ಯ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಯಾವುದು ವೇದ ಯಾವುದು ನಂಬಿಕೆ ?

ಶ್ರೀ ಆರ್. ಎಲ್. ಜಾಲಪ್ಪ.—ಪತ್ರಿಕೆಯಲ್ಲಿ ಬರೆದಿದ್ದೆಲ್ಲಾ 'ವೇದವಾಕ್ಯ ಅಲ್ಲ ಎಂದು ಹೇಳಿದೆ. ನಿಮಗೆ ಸಪೋರ್ಟ್ ಮಾಡುವ ಪತ್ರಿಕೆ ಬೇರೆ ಇರಬಹುದು. ನಮಗೆ ಯಾರೂ ಇಲ್ಲ. ಇದ್ದುದನ್ನು ಬರೆಯುತ್ತಿದ್ದಾರೆ. ನೀವು ಯಾರನ್ನೋ ನಿಮ್ಮನ್ನು ಸಪೋರ್ಟ್ ಮಾಡುವುದಕ್ಕೆ ಇಟ್ಟುಕೊಂಡಿರಬಹುದು. ನಮ್ಮ ಹತ್ತಿರ ಯಾರಿದ್ದಾರೆ ? ಒಳ್ಳೆಯ ಕೆಲಸ ಮಾಡಿದಾಗ ಒಳ್ಳೆ ಕೆಲಸ ಮಾಡಿದ್ದೀರಿ ಎಂದು ಹೇಳುತ್ತಾರೆ. ತಪ್ಪು ಮಾಡಿದಾಗ ತಪ್ಪು ಎಂದು ಹೇಳುತ್ತಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಸಂಪಾದಕೀಯದ ಬಗ್ಗೆ ಅಷ್ಟು ಲಘುವಾಗಿ ವೇದವಾಕ್ಯ ಅಲ್ಲ ಎಂದು ಹೇಳುವುದು ತಮಗೆ ಶೋಭೆ ತರುವುದಿಲ್ಲ. ಬಜೆಟ್ ಭಾಷಣದಲ್ಲಿ ಮುಖ್ಯಮಂತ್ರಿಗಳು ಪತ್ರಿಕೆಯವರು ಬರೆದಿದ್ದನ್ನು ಕೋಟ್ ಮಾಡಿ ಬರೆದಿದ್ದಾರೆ. ನಿಮಗೆ ಅನುಕೂಲ ಆದರೆ ಬಜೆಟ್ ಭಾಷಣದಲ್ಲಿ ಕೂಡ ಸಂಪಾದಕೀಯ ಬೇಕು, ಅನಾನುಕೂಲ ಆದರೆ ಅದೇನೂ ದೊಡ್ಡ ವೇದವಾಕ್ಯ ಅಲ್ಲ ಎಂದು ಹೇಳಿ ಬಿಸಾಕುವುದು. ಇದು ಖಂಡಿತವಾಗಿಯೂ ಸರ್ಕಾರಕ್ಕೆ ಭೂಷಣ ತರುವ ವಿಚಾರ ಅಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಈ ಸಂಪಾದಕೀಯದ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ. ಅದೇ ದೊಡ್ಡದು ಎಂದು ತಂದು ಓದುವುದರಲ್ಲಿ ಅರ್ಥವಿಲ್ಲ ಎಂದು ಹೇಳುತ್ತಿದ್ದೇನೆ. ಪ್ಲಾನಿಂಗ್ ಸೆಕ್ರೆಟರಿಯವರು ಮತ್ತು ಸಂಬಂಧಪಟ್ಟ ಮಂತ್ರಿಗಳು ಅದರ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಅದು ತಮ್ಮ ಗಮನಕ್ಕೆ ಬಂದಿಲ್ಲವೆ ! ಇದೊಂದು ಮಾತ್ರ ಏತಕ್ಕೆ ಓದುತ್ತೀರಿ ? ಅದನ್ನೂ ಓದಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಎಡಿಟೋರಿಯಲ್ ಮೇಲೆ ಖರ್ಗೆಯವರು ಎಕ್ಸ್‌ಪ್ಲೈನ್ ಮಾಡಿದರೆ ಮಂತ್ರಿಗಳು ಸಮಾಧಾನದಿಂದ ಕೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಕ್ಲಾರಿಫಿಕೇಷನನ್ನು ಬೊಮ್ಮಾಯಿಯವರು ಕೊಟ್ಟಿಲ್ಲ. ಪ್ರಕಾಶ್‌ರವರು ಹೇಳಿಲ್ಲ. ಯಾವ ಮಂತ್ರಿಗಳೂ ಕ್ಲಾರಿಫಿಕೇಷನ್ ಕೊಟ್ಟಿಲ್ಲ. ಪ್ಲಾನಿಂಗ್ ಸೆಕ್ರೆಟರಿ ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಪ್ಲಾನಿಂಗ್ ಸೆಕ್ರೆಟರಿ ಕ್ಲಾರಿಫಿಕೇಷನ್ ಮಾಡಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—Clarification has established the fact that this Government is misleading the people.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಇದು ೧೧ನೇ ತಾರೀಖಿನ ಎಡಿಟೋರಿಯಲ್‌ನಲ್ಲಿ ಇದು ಬಂದಿದೆ

" The second Clarification issued by the Planning Secretary on behalf of the State Government in reply to an editorial in this paper (Destroying the balance, Deccan Herald, January 3, 1986) has forgotten the main issue and got bogged down in a discussion of the figures. Though the question of figures, their accuracy and exaggeration. is a point of dispute, it is important only to prove the main argument of both the editorials (including Mortgaging Development) "...

ಇದು ಕ್ಲಾರಿಫಿಕೇಷನ್ ಆದಮೇಲೆ ಇದನ್ನು ಕೊಟ್ಟಿದ್ದು. ಮತ್ತೆ ಮುಂದಕ್ಕೆ ಏನು ಹೇಳಿದ್ದಾರೆ. ಅದನ್ನು ಹೇಳುತ್ತೇನೆ.

" especially in recent months, is spending vast amounts of money on popular programmes at the cost of development expenditure and in a situation of a very tight financial postion in the current account. The Planning Secretary in both the replies has failed to confront the main argument in its comprehensive fulness' but devoted himself to defending only two of the popular schemes, school uniforms and textboobs and foodgrains to 6 lakh more people, in the first reply and the accuraey and relevance of foodgrain output estimates given by the Government as an indication of drought in the second.

The figures and arguments presented in the second clarification only assist in demonstrating once again how the State Government is misleading the people... "

ಹಾಗಾಗಿ ಇದು ಪೂರ್ತಿ ಸಾರ್ವಜನಿಕ ಅಭಿಪ್ರಾಯ ಆಗಿದೆ. ಧೋತಿ ಕೊಡುತ್ತೇವೆ, ಸೀರೆ ಕೊಡುತ್ತೇವೆ ಎಂದು ಸ್ಕೀಂ ಅನೌನ್ಸ್ ಮಾಡಿದಿರಿ. ಗ್ರೀನ್ ಕಾರ್ಡ್ ಕೊಟ್ಟಿದ್ದೀರಿ. ಇವತ್ತು ಪ್ರತಿ ಜಿಲ್ಲೆಯಲ್ಲಿ ಒಂದೊಂದು ತಾಲ್ಲೂಕನ್ನು ಅಡಾಪ್ಟ್ ಮಾಡಿಕೊಂಡಿದ್ದೀರಿ. ಆದರೆ ನೀವು ಎಲ್ಲರಿಗೂ ಕೊಡುತ್ತೇವೆ ಎಂದು ಹೇಳಿ ಒಂದು ತಾಲ್ಲೂಕಿನಲ್ಲಿ ಕೆಲವು ಹಳ್ಳಿಗಳನ್ನು ಅಡಾಪ್ಟ್ ಮಾಡಿಕೊಂಡು ಆ ಮೇಲೆ ತಾವು ಧೋತರದ, ಕ್ವಾಲಿಟಿಯ ಬಗ್ಗೆ ತಾವೇ ಹೇಳಿದಿರಿ. ಕ್ವಾಲಿಟಿ ಸರಿಯಾಗಿ ಸಿಗಂತ್ತಿಲ್ಲ, ಸಿಕ್ಕಿದ್ದು ನಾವು ಕೊಡುತ್ತಿದ್ದೇವೆ. ಕೆಲವನ್ನು ಸರಿಪಡಿಸುತ್ತಿದ್ದೇವೆ ಎಂದು ಹೇಳಿದ್ದೀರಿ.

ಶ್ರೀ ಆರ್. ಎಲ್. ಜಾಲಪ್ಪ.—ಕ್ವಾಲಿಟಿ ಚೆನ್ನಾಗಿಲ್ಲ ಎಂದು ಹೇಳಿ ವಾಪಸ್ಸು ಕಳಿಸಿದ್ದೇವೆ. ಸರಿಪಡಿಸುತ್ತೇವೆ ಎಂದು ನಾವು ಹೇಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಅದನ್ನು ತಂದು ತೋರಿಸಬೇಕಾಗಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ.—ಕೊಟ್ಟಿದ್ದರಲ್ಲಿ ಎಷ್ಟು ಚೆನ್ನಾಗಿತ್ತು, ವಾಪಸ್ಸು ಕಳಿಸಿದ್ದೆಷ್ಟು ?

ಶ್ರೀ ಆರ್. ಎಲ್. ಜಾಲಪ್ಪ.—ಏನಾಗಿದೆ ಎಂದು ಹೀಗೆಲ್ಲಾ ಹೇಳುತ್ತಿದ್ದೀರಿ. ಕಲರ್ ಏನಾಗಿದೆ ? ಕ್ವಾಲಿಟಿ ಚೆನ್ನಾಗಿಲ್ಲದಿದ್ದರಿಂದ ವಾಪಸ್ಸು ಕಳಿಸಿದ್ದೇವೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜಾಲರಿ ಇದ್ದ ಹಾಗಿದೆ. ನೀವು ಇನ್ನು ಉಟ್ಟುಕೊಳ್ಳುವುದಕ್ಕೆ ಲಂಗದ ಬಟ್ಟೆ ಕೊಡಬೇಕಾಗುತ್ತದೆ. ಹೊಲಿಗೆಗೆ ದುಡ್ಡು ಕೊಡಬೇಕಾಗುತ್ತದೆ. ಈ ರೀತಿಯ ಪರಿಸ್ಥಿತಿ ಉಂಟಾಗಿದೆ. ನಾವು ಹೇಳುವುದು ಏನೆಂದರೆ ನಿಮ್ಮಲ್ಲಿ ಎಲ್ಲ ಸರಿ ಇದ್ದರೆ ಹತ್ತು ಸ್ಕೀಂ ಮಾಡಿ. ಒಂದು ಕಡೆ ಮಕ್ಕಳಿಗೆ ಯೂನಿಫಾರಂ ಕೊಡುತ್ತೇವೆ. ಟೆಕ್ಸ್ಟ್ ಬುಕ್ ಕೊಡುತ್ತೇವೆ ಎಂದು ಹೇಳಿದ್ದೀರಿ. ನಿಜವಾಗಿಯೂ ಇದು ಒಂದು ಒಳ್ಳೆಯ ಸ್ಕೀಂ. ಆದರೆ ಎಷ್ಟರಮಟ್ಟಿಗೆ ಜಾರಿಯಲ್ಲಿ ಬಂದಿದೆ ಎಂದರೆ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದಾರೆ, ಅನೌನ್ಸ್ ಮಾಡಿದ್ದೇವೆ ಕೊಡುತ್ತಿದ್ದಾರೆ ಎಂದು ಹೇಳಿಕೊಂಡು ಈ ರೀತಿ ಹೋದರೆ ಸರಿಯೇ ? ಇವತ್ತು ಮುಖ್ಯವಾಗಿರುವುದು ಬಡವರ ಮಕ್ಕಳಿಗೆ ಎಜುಕೇಷನ್ ಬಹಳ ಮುಖ್ಯವಾದುದು. ದೀನದಲಿತರ ಮಕ್ಕಳಿಗೆ ಶಿಕ್ಷಣ ಎನ್ನತಕ್ಕಂಥದ್ದು ಬಹಳ ಮುಖ್ಯ. ಅವರಿಗೆ ಇವತ್ತು ಒಂದು ಹಾಸ್ಟೆಲ್ ಇಲ್ಲ, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೂ ಎಲ್ಲೂ ಕೂಡ ತೆರೆದಿಲ್ಲ. ನೀವು ಈ ಪರಿಶಿಷ್ಟ ಜಾತಿಯವರಿಗೆ ಪರಿಶಿಷ್ಟ ಜನಾಂಗದವರಿಗೆ ಅವರ ಉದ್ಧಾರ ಮಾಡುತ್ತೇವೆ ಎಂದು ಹೇಳುತ್ತೀರಿ. ಎಷ್ಟು ಕೆಲಸ ಮಾಡಿದ್ದೀರಿ ಎಂದು ಹೇಳುತ್ತೀರಾ ? ೮೫–೮೬ ರಲ್ಲಿ ನಿಮ್ಮ ಸರ್ಕಾರದವರು ಎಷ್ಟು ಹಾಸ್ಟೆಲ್ ಬಿಲ್ಡಿಂಗ್ಸ್‌ಗಳನ್ನು ಕಟ್ಟಿಸಿದ್ದಾರೆ. ಎಷ್ಟು ಹಾಸ್ಟೆಲ್ ಓಪನ್ ಮಾಡಿಸಿದ್ದೀರಿ ಎಂದು ಹೇಳಿ. ಒಂದೂ ಕೂಡ ಮಾಡಿಲ್ಲ. ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟೆಲನ್ನು ನೂರು ಮಾಡಿದ್ದೀರಿ. ಅದು ಪೇಪರ್‌ನಲ್ಲಿ ಸ್ಯಾಂಕ್ಷನ್ ಆಯಿತು. ದುಡ್ಡು ಬಿಡುಗಡೆ ಆಗಿಲ್ಲ. ನೀವು ಬೇಸಿಕ್ ಥಿಂಗ್ಸ್ ಇಟ್ಟುಕೊಂಡು ಯಾವ ಮಕ್ಕಳಿಗೆ ನೀವು ಶಿಕ್ಷಣ ಕೊಡಬೇಕೋ ಎಂಬುದನ್ನು ಯೋಚನೆ ಮಾಡಿದ್ದೀರಾ ? ಅದನ್ನು ಬಿಟ್ಟು ನಾವು ಸೀರೆ ಕೊಡುತ್ತೇವೆ ಧೋತಿ ಕೊಡುತ್ತೇನೆಂದರೆ ಹೇಗೆ ? ಅವರಿಗೆ ಇವತ್ತು ಇರುವುದಕ್ಕೆ ಜಾಗವಿಲ್ಲ. ಅವರಿಗೆ ಊಟವಿಲ್ಲ. ಇವತ್ತು ೫೦ ಲಕ್ಷ ಮಕ್ಕಳಿವೆ. ಇಂಥ ಯೋಜನೆಗಳನ್ನು ನೀವು ಹಾಕಿಕೊಳ್ಳಬೇಕು. ಅದನ್ನು ಬಿಟ್ಟು ಸೀರೆ ಕೊಡುತ್ತೇವೆ ಧೋತಿ ಕೊಡುತ್ತೇವೆ ಎಂದು ಹೇಳಿದರೆ ಹೇಗೆ ? ಇವತ್ತು ಕನಿಷ್ಟ ಪಕ್ಷ ಒಂದು ೫–೧೦ ಪರಸೆಂಟ್‌ನಷ್ಟು ಹಾಸ್ಟೆಲ್ ಇರಬೇಕಾದರೆ ಅವರಿಗೆ ಪೂರ್ತಿ ಹಾಸ್ಟೆಲ್ ವ್ಯವಸ್ಥೆ ಮಾಡಬೇಕೋ ಬೇಡವೋ ? ಅದರ ಬಗ್ಗೆ ಒಂದು ಯೋಜನೆಯೂ ಸಹಾ ಇಲ್ಲಾ. ಗವರ್ನರ್ ಸ್ಪೀಚ್‌ನಲ್ಲೂ ಅದರ ಬಗ್ಗೆ ಯಾವುದೊಂದು ಉಲ್ಲೇಖ ಇಲ್ಲಾ. ಹಿಂದಿನದೂ ಇಲ್ಲಾ ಅಥವಾ ಮುಂದೆ ಮಾಡುತ್ತೇವೆ ಎಂದು ಹೇಳಿಯೂ ಇಲ್ಲಾ. ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್ ನವರ ಬಗ್ಗೆ ಅಭಿಮಾನದಿಂದ ಕೆಲಸ ಮಾಡುತ್ತೀರಾ ? ಈ ರೀತಿ ಮಾಡಿದರೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರ ಕಲ್ಯಾಣ

ಆಗುತ್ತದೆಯೋ ಯೋಜನೆಗಳನ್ನು ಮಾಡಿ ಬೇಡ ಎಂದು ಹೇಳುವುದಿಲ್ಲ. ಕಾಂಕ್ರೀಟ್ ಯೋಜನೆಗಳನ್ನು ಮಾಡಿ. ಇವರ ಬಗ್ಗೆ ಈ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ತಾವೂ ಹೇಳಿ.

ಎರಡನೆಯದಾಗಿ, ಡೈರೆಕ್ಟ್ ಆಗಿ ರೆಕ್ರೂಟ್‌ಮೆಂಟ್ ಮಾಡುತ್ತೇವೆ. ಫಸ್ಟ್ ಕ್ಲಾಸ್ ಬಂದಂಥ ವಿದ್ಯಾರ್ಥಿಗಳಿಗೆ ಯಾವುದೇ ಯೂನಿವರ್ಸಿಟಿಯಲ್ಲಿ ಅವರು ಓದಿರಲಿ, ಅವರಿಗೆ ಕ್ಲಾಸ್ ೧-೨ ಆಗಿ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ಆದರೆ ಇವರ ಪರಿಸ್ಥಿತಿ ಏನಾಗಿದೆ ಎಂದರೆ ಅದು ಹೈಕೋರ್ಟಿನಲ್ಲಿ ಬಿದ್ದಿದೆ. ಇವರು ಎಲ್ಲಿಯವರೆಗೆ ಕಾಯಬೇಕು ? ಮೂರು ವರ್ಷ ಆಯಿತು, ತಾವು ಅನೌನ್ಸ್ ಮಾಡಿ ಇಲ್ಲಿಯವರೆಗೂ ರೆಕ್ರೂಟ್ ಆಗಿಲ್ಲ. ಅಂತೂ ನಿಮಗೆ ಪಬ್ಲಿಸಿಟಿ ಚೆನ್ನಾಗಿ ಸಿಕ್ಕಿತು. ಆದರೆ ಇಲ್ಲಿಯವರೆಗೂ ಒಬ್ಬನೂ ಕೂಡ ರೆಕ್ರೂಟ್ ಆಗಿಲ್ಲ.

ಅಧ್ಯಕ್ಷರು.—ಸಾಕಷ್ಟು ವಿಷಯವನ್ನು ಈಗಾಗಲೇ ಹೇಳಿದ್ದೀರಿ. ಬೇರೆಯವರಿಗೂ ಸ್ವಲ್ಪ ಬಿಡಿ,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ, ಎಸ್. ಸಿ. ಎಸ್. ಟಿ. ಬಗ್ಗೆ ಅವರು ಗಮನ ಹರಿಸಿದ್ದಾರೆಯೋ ಎಂದು ಕೇಳುತ್ತಿದ್ದೇನೆ. ಇವತ್ತು ಅನೇಕ ಬ್ಯಾಕ್‌ಲಾಗ್‌ಗಳು ಇವೆ. ಪ್ರತಿಯೊಂದು ಇಲಾಖೆಯಲ್ಲೂ ಬ್ಯಾಕ್‌ಲಾಗ್‌ಗಳು ಇದೆ. ನೀವು ಕೆಲ ಇಲಾಖೆಗಳನ್ನು ತೆಗೆದುಕೊಂಡರೂ ಕೂಡ ಪ್ರತಿಯೊಂದರಲ್ಲೂ ಕೂಡಾ ಬ್ಯಾಕ್‌ಲಾಗ್ ಇದೆ. ಇದಕ್ಕೆ ವಿಚಾರಿಸಿದರೆ ರೆಕ್ರೂಟ್‌ಮೆಂಟ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಹೈಪವರ್ ಕಮಿಟಿ ಮಾಡುತ್ತೇವೆ ಎಂದು ಹೇಳಿದ್ದೀರಿ. ರೆವ್ಯೂ ಮಾಡಿ ಇದುವರೆಗೂ ಯಾವ ಕ್ರಮವನ್ನೂ ಕೂಡ ತೆಗೆದುಕೊಂಡಿಲ್ಲ. ಇವರ ಬಗ್ಗೆಯೂ ಒಂದು ಮಾತು ಗೌರ್ನರ್ ಅವರ ಬಾಯಿಂದ ಹೇಳಿಸಿಲ್ಲ. ಇವರು ಹೇಳಿದ ರೀತಿಯಲ್ಲಿ ಅವರಿಗೆ ಬರೆದು ಕೊಟ್ಟಿದ್ದಾರೆ, ಅವರು ಓದಿದರು. ಇದರ ಬಗ್ಗೆ ಕೂಡ ಇವತ್ತು ಯೋಜನೆಯನ್ನೇ ಮಾಡಿಲ್ಲ. ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಅವರ ಆ ರೆಕ್ರೂಟ್‌ಮೆಂಟ್ ಅಲ್ಲಿಗೇ ನಿಂತು ಹೋಗಿದೆ.

೪-೦೦ ಪಿ. ಎಂ.

ಇನ್ನು ಜನತಾ ಮನೆಗಳ ವಿಚಾರದಲ್ಲಿ ಕೂಡ ಇಲ್ಲಿ ಮೊನ್ನೆ ಅರ್ಧ ಗಂಟೆ ಕಾಲದ ಚರ್ಚೆಯಾಯಿತು ಈ ಯೋಜನೆಗೆ ಕೂಡ ಸರ್ಕಾರ ಎಷ್ಟು ಹಣ ಒದಗಿಸಬೇಕಾಗಿತ್ತೋ ಅಷ್ಟು ಹಣವನ್ನು ಒದಗಿಸಿಲ್ಲ. ಹಳ್ಳಿಯ ಬಡ ಜನರಿಗೆ ಸಹಾಯವಾಗುವಂತಹ ಈ ಯೋಜನೆಗೆ ಹೆಚ್ಚು ಹಣವನ್ನು ಕೊಡುತ್ತಿಲ್ಲ. ಪ್ರತಿ ತಾಲ್ಲೂಕ್‌ನಲ್ಲಿ ೨ ಸಾವಿರ ಮನೆಗಳನ್ನಾದರೂ ಪ್ರತಿ ವರ್ಷವೂ ಕಟ್ಟಿಸಿಕೊಡುತ್ತೇವೆ ಎಂಬತಕ್ಕಂಥ ಹಠವನ್ನು ಮಾನ್ಯ ಸಿಂಧ್ಯಾ ಅವರು ಹಿಡಿದಿದ್ದರೆ ನಾನು ಒಪ್ಪುತ್ತಿದ್ದೆ. ಆದರೆ ಅವರು ಈ ಕೆಲಸ ಮಾಡುವುದಕ್ಕೆ ಬದಲು ದಿಢೀರ್ ಎಂದು ಬಸ್‌ಗಳ ಪ್ರಯಾಣ ದರವನ್ನು ಹೆಚ್ಚು ಮಾಡಿದರು. ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡುವ ಬಗ್ಗೆಯಾಗಲೀ, ಸೈಟ್‌ಗಳನ್ನು ಹಂಚುವ ಬಗ್ಗೆ ಆಗಲೀ ಸಾಕಷ್ಟು ಕೆಲಸವನ್ನು ಇವರು ಮಾಡಲಿಲ್ಲ. ನಾಲ್ಕು ವರ್ಷಗಳಲ್ಲಿ ಇಷ್ಟು ಮನೆಗಳನ್ನು ಕಟ್ಟಿಸಿ ಕೊಡುತ್ತೇವೆ, ಇಷ್ಟು ಸೈಟ್‌ಗಳನ್ನು ಹಂಚುತ್ತೇವೆ ಎಂದು ಇವರು ಒಂದು ಗುರಿಯನ್ನು ಇಟ್ಟುಕೊಂಡು ಕೆಲಸ ಮಾಡಿದ್ದರೆ ನಾನು ಅವರನ್ನು ಅಭಿನಂದಿಸುತ್ತಿದ್ದೆ. ಇವರ ಕೆಲಸವನ್ನು ನೋಡಿ ಜನರು ಇವರನ್ನು ಬೈಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಜನತಾ ಮನೆಗಳನ್ನು ಕಟ್ಟಿಸಿಕೊಡುವ ಬಗ್ಗೆ ಈ ಸರ್ಕಾರದ ಸಾಧನೆ ಏನು ಎಂಬುದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟಪಡಿಸಿಲ್ಲ. ಮತ್ತೆ ಇವರು ಅನೇಕ ಯೋಜನೆಗಳನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದರೂ ಸಹ, ಆ ಯೋಜನೆಗಳಿಗೆ ಇವರು ಸಾಕಷ್ಟು ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಇವರು ಸಕಾಲದಲ್ಲಿ ಹಣ ಬಿಡುಗಡೆ ಮಾಡದ ಕಾರಣದಿಂದ ಏಡೆಡ್ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಕಳೆದ ಆರೆಂಟು ತಿಂಗಳುಗಳಿಂದ ಸಂಬಳ ಸಿಕ್ಕಿಲ್ಲ. ಪವರ್ ಕಾರ್ಪೊರೇಷನ್‌ನಲ್ಲಿ ಕೆಲಸ ಮಾಡುತ್ತಿರುವವರಿಗೆ ಕೂಡ ಕಳೆದ ಎರಡು ತಿಂಗಳಿಂದ ಸಂಬಳ ಸಿಕ್ಕಿಲ್ಲ. ಇಂತಹ ಒಂದು ಪರಿಸ್ಥಿತಿ ಇರಬೇಕಾದರೆ ಇವರು ಅಭಿವೃದ್ಧಿ ಕೆಲಸಗಳನ್ನು ಯಾವ ರೀತಿ ಕೈಗೊಳ್ಳುತ್ತಾರೆಂದು ಕೇಳಬೇಕಾಗುತ್ತದೆ? ಈ ರೀತಿಯಾದರೆ ಬಡವರಿಗೆ ಕಡಿಮೆ ಬೆಲೆಯಲ್ಲಿ ಅಕ್ಕಿ ಒದಗಿಸುವುದು, ಬಡ ಜನರಿಗೆ ಧೋತರ, ಸೀರೆಗಳನ್ನು ಕಡಿಮೆ ಬೆಲೆಯಲ್ಲಿ ಕೊಡುವುದು, ಶಾಲಾ ಮಕ್ಕಳಿಗೆ ಸಮವಸ್ತ್ರ ಒದಗಿಸುವುದು ಮುಂತಾದ ಇವರ ಯೋಜನೆಗಳು ಏನಿವೆ, ಇವನ್ನೆಲ್ಲಾ ಸರಿಯಾಗಿ ಮುಂದುವರಿಸಿಕೊಂಡು ಹೋಗುತ್ತಾರೆಂಬ ಖಾತರಿಯಾದರೂ ಏನು? ಈಗ ಇವರು

ಕೊಡುತ್ತೇವೆಂದು ಹೇಳಿದ್ದನ್ನೇ ಸರಿಯಾಗಿ ಕೊಡಲಿಲ್ಲ, ಆದ್ದರಿಂದ ಇನ್ನು ಮುಂದೆ ಸಹ ಇವರು ಬಡವರಿಗೆ ಸಹಾಯ ಮಾಡುವಂತೆ ಕಾಣುತ್ತಿಲ್ಲ. ಇವರು ಅಧಿಕಾರಕ್ಕೆ ಬರುವ ಮೊದಲು ಸಹಕಾರಿ ಸಂಘಗಳಿಂದ ತೆಗೆದುಕೊಂಡ ಸಾಲವನ್ನೆಲ್ಲಾ ಮಾಫಿ ಮಾಡುವುದಾಗಿ, ವಜಾ ಮಾಡುವುದಾಗಿ ಹೇಳಿದರು. ಆದರೆ ಆ ಕೆಲಸ ಮಾಡಲಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು)— ನಾವು ಆ ರೀತಿ ಎಲ್ಲಿಯೂ ಹೇಳಿಲ್ಲ. ನಿಮ್ಮ ಕಾಲದಲ್ಲಿ ರೈತರಿಗೆ ೮೫ ಕೋಟಿ ರೂಪಾಯಿಗಳಷ್ಟು ಪರಿಹಾರ ಕೊಟ್ಟಿದ್ದೇವೆಂದು ಹೇಳಿಕೊಂಡಿರಿ. ಆದರೆ ರೈತರಿಗೆ ೮೫ ಲಕ್ಷ ರೂಪಾಯಿಗಳಷ್ಟು ಸಹ ಪರಿಹಾರ ಸಿಗಲಿಲ್ಲ. ಈ ರೀತಿಯಿಂದ ನೀವು ಜನರನ್ನು ಮೋಸಗೊಳಿಸಿದಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ— ಈಗ ನೀವು ಜನರಿಗೆ ಬರೀ ಬೋಗಸ್ ಆಶ್ವಾಸನೆಗಳನ್ನು ಕೊಡುತ್ತಿದ್ದೀರಿ.

ಶ್ರೀ ಆರ್. ಎಲ್. ಜಾಲಪ್ಪ— ಇಂತಹ ಆಶ್ವಾಸನೆಗಳನ್ನು ಕೊಟ್ಟದ್ದು ನಾವಲ್ಲ, ನೀವು ನಿಮ್ಮ ಕಾಲದಲ್ಲಿ ರೈತರಿಗೆ ವಿದ್ಯುಚ್ಛಕ್ತಿಯ ಬಗ್ಗೆ ರಿಯಾಯಿತಿಯನ್ನು ಕೊಟ್ಟಿದ್ದನ್ನು ಬಿಟ್ಟರೆ ಮತ್ತೆ ಬೇರೆ ಯಾವ ಸಹಾಯವನ್ನೂ ಮಾಡಲಿಲ್ಲ. ಈ ವಿಚಾರವನ್ನು ನಾನು ಕೌನ್ಸಿಲ್‌ನಲ್ಲಿ ವಿರೋಧ ಪಕ್ಷದಲ್ಲಿದ್ದುಕೊಂಡು ಹೇಳಿದ್ದೇನೆ. ರೈತರಿಗೆ ಇವರು ಮೋಸ ಮಾಡಿದ್ದಾರೆಂದು ನಾನು ಹೇಳಿದ್ದೇನೆ.

(ಗೊಂದಲ)

ಶ್ರೀ ಎಚ್. ಟಿ. ಕೃಷ್ಣಪ್ಪ— ಮಾನ್ಯ ಅಧ್ಯಕ್ಷರೇ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ— ಅವರು ಮಂತ್ರಿಗಳ ಸ್ಥಾನದಲ್ಲಿ ನಿಂತುಕೊಂಡು ಮಾತನಾಡುತ್ತಿದ್ದಾರೆ.

ಅಧ್ಯಕ್ಷರು— ಕೃಷ್ಣಪ್ಪನವರೇ ತಾವು ನಿಮ್ಮ ಜಾಗಕ್ಕೆ ಹೋಗಿ ಮಾತನಾಡಿ.

ಶ್ರೀ ಎಚ್. ಟಿ. ಕೃಷ್ಣಪ್ಪ— ಈ ಹಿಂದಿನ ಕಾಂಗ್ರೆಸ್ ಪಕ್ಷದ ಸರ್ಕಾರದವರು ಶ್ರೀ ಬಂಗಾರಪ್ಪನವರ ಅಧ್ಯಕ್ಷತೆಯಲ್ಲಿ ರೈತರಿಗೆ ಸಹಾಯ ಮಾಡುವ ಸಲುವಾಗಿ ಒಂದು ಆಯೋಗವನ್ನು ರಚನೆ ಮಾಡಿದರು. ಆ ಆಯೋಗದವರು ತಮ್ಮ ವರದಿಯನ್ನು ಸಹ ಕೊಟ್ಟರು, ಆದರೆ ಅದನ್ನು ಆ ಸರ್ಕಾರದವರು ಜಾರಿಗೆ ಕೊಡಲೇ ಇಲ್ಲ.

ಶ್ರೀ ಎಸ್. ಬಂಗಾರಪ್ಪ— ಅವರನ್ನು ಜಾಗ್ರತೆ ಮಂತ್ರಿಗಳನ್ನಾಗಿ ಮಾಡಿ.

ಅಧ್ಯಕ್ಷರು— ಖರ್ಗೆಯವರೇ ತಾವು ಜಾಗ್ರತೆ ಮಾತನಾಡಿ ಮುಗಿಸಿ ಬಿಡಿ. ಮಾನ್ಯ ಮೊಯ್ಲಿ ಅವರು ಮಾತನಾಡಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ— ಇದ್ದ ಸಾಲಗಳನ್ನೆಲ್ಲಾ ವಜಾ ಮಾಡಿಬಿಡುತ್ತಾರೆಂಬ ಅಭಿಪ್ರಾಯ ಇವೊತ್ತು ನಮ್ಮ ಜನರಲ್ಲಿ ಬಂದಿದೆ. ಯಾವುದೇ ಪಕ್ಷದ ಸರ್ಕಾರ ಅಧಿಕಾರದಲ್ಲಿರಲಿ, ನಾಳೆ ದಿವಸ ಎಲ್ಲ ಸಾಲಗಳು ವಜಾ ಆಗುತ್ತವೆ ಎಂಬ ಭಾವನೆ ಜನರಲ್ಲಿ ಬಂದರೆ, ಯಾರೂ ಕೂಡ ತೆಗೆದುಕೊಂಡ ಸಾಲಗಳನ್ನು ಸರ್ಕಾರಕ್ಕೆ ವಾಪಸ್ ಕೊಡುವುದಿಲ್ಲ. ಆದ್ದರಿಂದ ಸಾಲ ಮನ್ನಾ ಮಾಡುತ್ತೇವೆಂದು ತಾವು ಪದೇ ಪದೇ ಹೇಳಬೇಡಿ.

ಶ್ರೀ ಆರ್. ಎಲ್. ಜಾಲಪ್ಪ— ನಾವು ಆ ರೀತಿ ಎಲ್ಲಿಯೂ ಹೇಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ— ಇನ್ನು ಕಡೆಯದಾಗಿ, ಇಡೀ ರಾಜ್ಯದಲ್ಲಿ ಸುಮಾರು ೧೭-೧೮ ಜಿಲ್ಲೆಗಳಲ್ಲಿ ಬರಗಾಲ ಇದೆ ಎಂದು ಸರ್ಕಾರದವರೇ ಒಪ್ಪಿಕೊಂಡಿದ್ದಾರೆ. ಇದು ಎಲ್ಲರಿಗೂ ಗೊತ್ತಿದೆ. ಈ ಬಗ್ಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಮೊನ್ನೆ ಉತ್ತರ ಕೊಡುವಾಗ, ಭೂಕಂದಾಯವನ್ನು ತಡೆಹಿಡಿಯುವ ಬಗ್ಗೆ ಎಲ್ಲ ಕಡೆಗಳಿಂದಲೂ ವರದಿ ತರಿಸುತ್ತೇವೆಂದು ಹೇಳಿದರು. ಈ ರೀತಿ ಭೂಕಂದಾಯವನ್ನು ತಡೆಹಿಡಿಯುವುದಕ್ಕೆ ಬದಲು ಯಾವ ಯಾವ ಹಳ್ಳಿಗಳು ಬರಗಾಲದ ತೊಂದರೆಗೆ ಒಳಗಾಗಿವೆಯೋ ಮತ್ತು ಎಲ್ಲೆಲ್ಲಿ ಸಾಕಷ್ಟು ಮಳೆಯಾಗಿಲ್ಲವೋ ಅಂತಹ ಕಡೆಗಳಲ್ಲೆಲ್ಲಾ ಭೂಕಂದಾಯವನ್ನು ರದ್ದು ಮಾಡಬೇಕು. ಇಲ್ಲದಿದ್ದರೆ ವಿಲೇಜ್ ಅಕೌಂಟೆಂಟರು ಈ ವರ್ಷದ ಬಾಕಿಯನ್ನು ಸಹ

ಸೇರಿಸಿಕೊಂಡು ಮುಂದಿನ ವರ್ಷ ವಸೂಲಿ ಮಾಡುತ್ತಾರೆ. ಆಗ ರೈತರ ಇಲ್ಲದ ತೊಂದರೆಗೆ ಒಳಗಾಗುತ್ತಾರೆ. ಆದ್ದರಿಂದ ನೇರವಾಗಿ ಭೂ ಕಂದಾಯವನ್ನು ಮಾಫಿ ಮಾಡಿ ಇದರಿಂದ ಸರ್ಕಾರಕ್ಕೆ ಜಾಸ್ತಿ ಎಂದರೆ ಎರಡು ಮೂರು ಕೋಟಿ ರೂಪಾಯಿಗಳಷ್ಟು ಆದಾಯ ಕಡಿಮೆಯಾಗಬಹುದು. ಇದೇನು ದೊಡ್ಡ ಮೊತ್ತವಲ್ಲ. ಆದ್ದರಿಂದ ದಯಮಾಡಿ ಒಂದೇ ಆರ್ಡರ್‌ನಲ್ಲಿ ಬರಗಾಲಕ್ಕೆ ತುತ್ತಾದ ಹಳ್ಳಿಗಳಲ್ಲಿ ಭೂಕಂದಾಯವನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಒಟ್ಟಿನಲ್ಲಿ ನಾನು ಹೇಳುವುದಿಷ್ಟೆ. ಈ ಸರ್ಕಾರದ ಆಡಳಿತದಲ್ಲಿ ಯಾವ ಕೆಲಸ ಕಾರ್ಯಗಳೂ ಸರಿಯಾಗಿ ನಡೆದಿಲ್ಲ, ಡಿಸ್-ಆರ್ಡರ್‌ನಲ್ಲಿ ಈ ಸರ್ಕಾರ ಇದೆ, ನಮ್ಮ ಹೈದರಾಬಾದ್ ಕರ್ನಾಟಕ ಭಾಗವನ್ನು ಈ ಸರ್ಕಾರದವರು ನೆಗ್ಲೆಕ್ಟ್ ಮಾಡಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಹರಿಜನ ಮತ್ತು ಗಿರಿಜನರ ಬಗ್ಗೆ ಯಾವುದೇ ಹೊಸ ಕಾರ್ಯಕ್ರಮಗಳನ್ನು ತೆಗೆದುಕೊಂಡ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಇದರ ಜೊತೆಗೆ ಈ ಜನರ ಅಭಿವೃದ್ಧಿಯ ಬಗ್ಗೆ ಈಗ ಹಾಕಿಕೊಂಡಿರುವ ಕಾರ್ಯಕ್ರಮಗಳನ್ನು ಸಹ ಸರಿಯಾಗಿ ಮುಂದುವರೆಸುತ್ತಿಲ್ಲ. ಮಾನ್ಯ ಮಂತ್ರಿಗಳಾದ ಶ್ರೀ ಸಿಂಧ್ಯಾ ಅವರು ಜನತಾ ಮನೆಗಳನ್ನು ಸರಿಯಾಗಿ ಕಟ್ಟಿಸಿಕೊಟ್ಟಿಲ್ಲ ಮತ್ತು ಇದಕ್ಕಾಗಿ ಸಾಕಷ್ಟು ಹಣವನ್ನು ಇಟ್ಟಿಲ್ಲ, ಆದ್ದರಿಂದ ಇದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ ಹಾಗೂ ನನಗೆ ಇಷ್ಟು ಸಮಯದವರೆಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಅಭಿನಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ.— ಮಾನ್ಯ ಅಧ್ಯಕ್ಷರೇ. ಮಾನ್ಯ ವಿರೋಧ ಪಕ್ಷದ ನಾಯಕರು ಈ ಸಭೆಯ ಮಾನ್ಯ ಸದಸ್ಯರೊಬ್ಬರ ಬಗ್ಗೆ ಸಬ್-ಇನ್ಸ್‌ಪೆಕ್ಟರ್ ಒಬ್ಬರು ನಡೆದುಕೊಂಡ ಬಗ್ಗೆ ಪ್ರಸ್ತಾಪ ಮಾಡಿ ಈ ದಿನ ಸಭೆ ಮುಗಿಯುವುದರೊಳಗಾಗಿ ಒಂದು ತೀರ್ಮಾನ ಕೊಡಬೇಕೆಂದು ಹೇಳಿದರು. ಅದರ ಪ್ರಕಾರ ನಾನು ಈ ಬಗ್ಗೆ ತನಿಖೆ ಮಾಡಿ ಒಂದು ಪೂರ್ಣವಾದ ವರದಿ ಕಳುಹಿಸಿಕೊಡುವಂತೆ ಡಿ.ಐ.ಜಿ. ಅವರನ್ನು ಕೇಳಿದ್ದೇನೆ. ಆದರೆ ಅವರಿಗೆ ಇಲ್ಲಿಯವರೆಗೆ ಒಂದು ಪೂರ್ಣವಾದ ವರದಿಯನ್ನು ಕಳುಹಿಸಿಕೊಡುವುದಕ್ಕೆ ಸಾಧ್ಯವಾಗಿಲ್ಲ. ಅವರು ಇನ್ನೂ ಕೆಲವರನ್ನು ಎನ್‌ಕ್ವೈರಿ ಮಾಡಬೇಕಾಗಿದೆ. ಆದಾಗ್ಯೂ ಕೂಡ ನಾನು ಈ ಸಭೆಗೆ ಕೊಟ್ಟಂತಹ ಆಶ್ವಾಸನೆ ಮೇರೆಗೆ ಅಲ್ಲಿನ ಸಬ್-ಇನ್ಸ್‌ಪೆಕ್ಟರ್ ಆದಂಥ ಶ್ರೀ ಮಲ್ಲಿಕಾರ್ಜುನಯ್ಯ ಅವರನ್ನು ಅಮಾನತ್ತಿನಲ್ಲಿಟ್ಟು ತನಿಖೆ ಮುಗಿದ ನಂತರ ಒಂದು ಪೂರ್ಣವಾದ ವರದಿಯನ್ನು ಕಳುಹಿಸಿಕೊಡಬೇಕೆಂದು ಹೇಳಿದ್ದೇನೆ. ಇಲ್ಲಿ ಒಂದು ಕಡೆ ಈ ಸದನದ ಮಾನ್ಯ ಸದಸ್ಯರ ಆತ್ಮ ಗೌರವದ ಪ್ರಶ್ನೆ ನೋಡಬೇಕಾಗಿದೆ ಮತ್ತೊಂದು ಕಡೆ ಸರ್ಕಾರಿ ನೌಕರರ ಸೇವಾ ಭದ್ರತೆಯ ವಿಷಯವನ್ನು ನೋಡಬೇಕಾಗಿದೆ. ಇವೆರಡನ್ನೂ ನೋಡಿ ಒಂದು ತೀರ್ಮಾನ ಕೈಗೊಳ್ಳುತ್ತೇನೆಂದು ನಾನು ಹೇಳಿದ್ದೆ. ಮುಖ್ಯವಾಗಿ ವಿರೋಧ ಪಕ್ಷದ ನಾಯಕರ ಮತ್ತು ಇತರ ಮಾನ್ಯ ಸದಸ್ಯರ ಆಗ್ರಹ ಏನಿತ್ತು. ಅದರಂತೆ ಅಲ್ಲಿನ ಎಸ್.ಐ. ಅವರನ್ನು ಅಮಾನತ್ತಿನಲ್ಲಿಡಬೇಕೆಂದು ಹೇಳಿದ್ದೇನೆ, ತನಿಖೆ ಮುಗಿದ ನಂತರ ಅವರು ಇದರಲ್ಲಿ ತಪ್ಪಿತಸ್ಥರೆಂದು ಕಂಡುಬಂದರೆ ಅವರಿಗೆ ಶಿಕ್ಷೆ ವಿಧಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆಂದು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು.— ಇಲ್ಲಿಗೆ ಇಂದಿನ ಸಭೆ ಮುಕ್ತಾಯವಾಯಿತು. ಪುನಃ ಸಭೆ ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಸೇರುತ್ತದೆ.

(ಸಭೆಯು ಮಧ್ಯಾಹ್ನ ೪-೧೧ಕ್ಕೆ ಮುಕ್ತಾಯವಾಗಿ ಪುನಃ ಸಭೆಯು ದಿನಾಂಕ ೩-೨-೧೯೮೬ರಂದು ಬೆಳಿಗ್ಗೆ ೧೧ ಗಂಟೆಗೆ ಸೇರುವುದು)